ಕನ್ನಡ ದಿನಪತ್ರಿಕೆಗಳಲ್ಲಿನ

ಕ್ರೀಡಾ ಪುಟದ ಭಾಷೆ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ

ಸೂಗಣ್ಣ

ಮಾರ್ಗದರ್ಶಕರು

ಡಾ. ಸಾಂಬಮೂರ್ತಿ

ಪ್ರವಾಚಕರು

ಭಾಷಾ ನಿಕಾಯ

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೭

ಸಂಪೂರ್ಣ ಸಂ.ರ. ಅಶಾಪೆ.

ಕನ್ನಡ ದಿನಪತ್ರಿಕೆಗಳಲ್ಲಿನ

ಕ್ರೀಡಾ ಪುಟದ ಭಾಷೆ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ

ಸೂಗಣ್ಣ

ಮಾರ್ಗದರ್ಶಕರು

ಡಾ. ಸಾಂಬಮೂರ್ತಿ

ಪ್ರವಾಚಕರು

ಭಾಷಾ ನಿಕಾಯ

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೭

ಪ್ರಮಾಣ ಪತ್ರ

ಕನ್ನಡ ದಿನಪತ್ರಿಕೆಗಳಲ್ಲಿನ ಕ್ರೀಡಾ ಪುಟದ ಭಾಷೆ ಎಂಬ ವಿಷಯ ಕುರಿತ ಸಂಪ್ರಬಂಧವನ್ನು ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ಸಾಂಬಮೂರ್ತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಸಂಪ್ರಬಂಧದ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೦೨.೦೮.೨೦೦೨.

ಸೂಗಣ್ಣ
ಸಂಶೋಧಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

ಸೂಗಣ್ಣ ಇವರು ಕನ್ನಡ ದಿನಪತ್ರಿಕೆಗಳಲ್ಲಿನ ಕ್ರೀಡಾ ಪುಟದ ಭಾಷೆ ಎಂಬ ವಿಷಯ ಕುರಿತ ಸಂಪ್ರಬಂಧವನ್ನು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಸಾದರಪಡಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 03.08.07

ಡಾ. ಸಾಂಬಮೂರ್ತಿ
ಮಾರ್ಗದರ್ಶಕರು ಮತ್ತು ಪ್ರವಾಚಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪದವಿಗೆ ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾಗಿದ್ದ ಡಾ.ಬಿ.ಎ. ವಿವೇಕ ರೈ ಅವರಿಗೆ, ಈಗಿನ ಪ್ರಭಾರಿ ಕುಲಪತಿಗಳಾದ ಡಾ.ಕೆ.ವಿ. ನಾರಾಯಣ ಅವರಿಗೆ, ಮಾನ್ಯ ಕುಲಸಚಿವರಾದ ಶ್ರೀ ವಿ.ಶಂಕರ ಅವರಿಗೆ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ.ಡಿ. ಪಾಂಡುರಂಗಬಾಬು ಅವರಿಗೆ ಕೃತಜ್ಞತೆಗಳು.

ಈ ಅಧ್ಯಯನದ ಕ್ರಮವನ್ನು ಬೋಧಿಸಿ ಪ್ರೀತಿಯಿಂದ ನನ್ನನ್ನು ಪ್ರೋತ್ಸಾಹಿಸಿ ಸೂಕ್ತ ಸಲಹೆ ಮಾರ್ಗದರ್ಶನ ಮತ್ತು ಪ್ರೇರಣೆಯನ್ನು ನೀಡಿದ ನನ್ನ ಗುರುಗಳು ಹಾಗೂ ಮಾರ್ಗದರ್ಶಕರಾದ ಡಾ. ಸಾಂಬಮೂರ್ತಿ ಅವರಿಗೆ ತುಂಬು ಹೃದಯದ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ.

ಕನ್ನಡ ಭಾಷಾಧ್ಯಯನ ವಿಭಾಗದ ಮುಖ್ಯಸ್ಥರು ಹಾಗೂ ನನಗೆ ಹಲವು ಬಾರಿ ಸೂಕ್ತ ಸಲಹೆಯನ್ನು ನೀಡಿದ ಡಾ. ಪಿ. ಮಹಾದೇವಯ್ಯ ಅವರಿಗೂ ಡಾ. ಅಶೋಕಕುಮಾರ ರಂಜೇರೆ ಅವರಿಗೂ ಡಾ. ಡಿ. ಪಾಂಡುರಂಗಬಾಬು ಅವರಿಗೂ ಹಾಗೂ ಡಾ. ಕೆ.ವಿ. ನಾರಾಯಣರವರಿಗೂ ನನ್ನ ಆತ್ಮೀಯ ಕೃತಜ್ಞತೆಗಳು.

ಹಲವಾರು ಸಲ ನನ್ನ ಅಧ್ಯಯನದ ಸಮಸ್ಯೆಗಳಿಗೆ ಸೂಕ್ತ ಸಲಹೆ ನೀಡಿ ಪ್ರೋತ್ಸಾಹಿಸಿದ ಡಾ. ಸುಬ್ಬಣ್ಣ ರೈ, ಡಾ.ಕೆ.ಕೆ. ಮಾಧವ ಪೆರಾಜೆ ಹಾಗೂ ಡಾ.ಕೆ. ರವೀಂದ್ರನಾಥ, ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು.

ನನ್ನ ಅಧ್ಯಯನದ ಪ್ರಗತಿಯನ್ನು ಕಂಡು ಬದುಕಿದ್ದರೆ ಸಂತೋಷಪಡುತ್ತಿದ್ದ ನನ್ನ ಪೂಜ್ಯ ತಂದೆಯವರಿಗೂ, ನನ್ನ ಅಧ್ಯಯನಕ್ಕೆ ಪ್ರೋತ್ಸಾಹವನ್ನಿತ್ತ ನನ್ನ ಪೂಜ್ಯ ತಾಯಿ ನೀಲಮ್ಮ ಇವರಿಗೂ, ಪೂಜ್ಯ ಕಕ್ಕ ಮಲ್ಲಿಕಾರ್ಜುನ ಎಲೇರಿ, ಕಕ್ಕಿ ಪಾರ್ವತಿಯವರಿಗೂ, ಸಹೋದರ ದೊ. ಸೂಗಪ್ಪ,

ಅತ್ತಿಗೆ ಶಶಿಕಲಾ, ಸಹೋದರ ನಾಗಾಭೂಷಣ, ಮಲ್ಲಿಕಾರ್ಜುನ, ಗಂಗಮ್ಮ ಅಕ್ಕಮಾವನವರಿಗೂ ಹಾಗೂ ನನ್ನ ಬಾಳಸಂಗಾತಿಯಾದ ಕೆ. ರಾಜೇಶ್ವರಿ ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ನನ್ನ ಅಧ್ಯಯನದ ಸಂದರ್ಭದಲ್ಲಿ ಸಹಕರಿಸಿ ಪ್ರೋತ್ಸಾಹಿಸಿದ ಸ್ನೇಹಿತರಾದ ಕೆ. ಶೇಖರಚಾರಿ, ನಿರಂಜನ, ಗವಿಸಿದ್ದಪ್ಪ, ಗಾದೆಪ್ಪ, ವಿರೇಶ್, ಸುಧಾಕರ ಹಾಗೂ ನನ್ನ ಸಹಪಾಠಿಗಳಾದ ತಿರುಪತಿ, ಮಂಜುನಾಥ, ಧರ್ಮವೀರ, ಹೂಲೆಪ್ಪ, ಶರಣು, ಮಾಣಿಕಪ್ಪ, ತುಕರಾಮ, ಸತ್ಯಮೂರ್ತಿ, ಮೇಘಾ, ಅನುಪಮ, ಸಾವಿತ್ರಿಪವಾರ, ಲಲಿತಾ ಬಾವಿಕಟ್ಟಿ, ದೀಪಾ ಹಾಗೂ ಒ.ಬಿ.ಸಿ. ಹಾಸ್ಟೇಲ್‌ನ ಎಲ್ಲ ಸ್ನೇಹಿತರು ಹಾಗೂ ನನ್ನ ಆತ್ಮೀಯ ಸ್ನೇಹಿತರಾದ ಹುಲುಗಪ್ಪ, ರೇವಣಸಿದ್ದಯ್ಯ, ಪಾಂಡುರಂಗ, ಶರಣು, ಈರಣ್ಣ, ಶ್ಯಾಮ್ ಇವರಿಗೆ ನನ್ನ ಕೃತಜ್ಞತೆಗಳು.

ಸಂಶೋಧನೆಗೆ ಪೂರಕವಾದ ಪುಸ್ತಕಗಳನ್ನು ಒದಗಿಸಿದ ಗ್ರಂಥಾಲಯದ ಸಿಬ್ಬಂದಿಯವರಿಗೂ ಹಾಗೂ ಕನ್ನಡ ಭಾಷಾಧ್ಯಯನ ವಿಭಾಗದ ಶ್ರೀ ವಿರೇಶಪ್ಪ ಹಾಗೂ ಸಿಬ್ಬಂದಿ ವರ್ಗಕ್ಕೂ ಮತ್ತು ನನ್ನ ಸಂಪ್ರಬಂಧವನ್ನು ಅಂದವಾಗಿ ಡಿ.ಟಿ.ಪಿ ಮಾಡಿರುವ ಪ್ರಜ್ವಲ್ ಗ್ರಾಫಿಕ್ಸ್‌ನ ಶ್ರೀಮತಿ ಎ. ನಾಗವೇಣಿ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

✍ ಸೂಗಣ್ಣ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ಮಹತ್ವ

ಅಧ್ಯಾಯ ೧

ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಯನದ ಸ್ವರೂಪ

ಸಮೂಹ ಮಾಧ್ಯಮಗಳು ಪ್ರಸ್ತುತ ಸಮಾಜದಲ್ಲಿ ಒಂದು ದೊಡ್ಡ ಕ್ರಾಂತಿಯನ್ನೇ ಉಂಟು ಮಾಡಿವೆ. ಸಮೂಹ ಸಂಪರ್ಕ ಸಾಧನೆಗಳಾದ ರೇಡಿಯೋ, ದೂರದರ್ಶನ, ವೃತ್ತಪತ್ರಿಕೆ ಮುಂತಾದ ಮಾಧ್ಯಮಗಳು ಜನರನ್ನು ಬಹುಬೇಗ ತಲುಪುತ್ತಿವೆ. ಇವು ಆಧುನಿಕ ಕಾಲದ ಮಾನವನು ಕಂಡುಕೊಂಡ ಬೌದ್ಧಿಕ ಚಮತ್ಕಾರದ ಆವಿಷ್ಕಾರಗಳಾಗಿವೆ. ನಿಜ, ಸಮೂಹ ಮಾಧ್ಯಮಗಳಿಂದ ಜಗತ್ತಿನ ಓಟ ಅತೀ ತೀವ್ರಗತಿಯಲ್ಲಿ ನಡೆಯುತ್ತಿದೆ. ಬೌದ್ಧಿಕ ಕಸರತ್ತುಗಳ ನಡುವೆ ಇಂದು ಮನುಷ್ಯ ವೇಗವಾಗಿ ನಡೆಯುತ್ತಿದ್ದಾನೆ. ಈ ಮಾನವನ ಹೊಸ ಪಥದ ಬೆಳವಣಿಗೆಯಲ್ಲಿ ಜಗತ್ತು ಅನೇಕ ಬದಲಾವಣೆಗೆ ಕಾರಣವಾಗಿದೆ. ವಿವಿಧ ಹೊಸ ಹೊಸ ಜ್ಞಾನ ವಲಯಗಳು ಅನಾವರಣಗೊಂಡಿವೆ.

ಇಂದು ಪತ್ರಿಕೋದ್ಯಮವು ತೀವ್ರಗತಿಯಲ್ಲಿ ಬೆಳೆಯುತ್ತಿರುವ ಉದ್ಯಮವಾಗಿ ಕಂಡುಬರುತ್ತಿದೆ. ಸಮೂಹ ಮಾಧ್ಯಮಗಳಲ್ಲಿ ಒಂದಾದ 'ಪತ್ರಿಕೆ'ಗಳು ಜನರನ್ನು ಬಹುಬೇಗ ತಲುಪುತ್ತಿವೆ. ಅಕ್ಷರ ಮಾಧ್ಯಮವಾದ ಪತ್ರಿಕೆಗಳಲ್ಲಿ ಪ್ರಕಟಗೊಂಡ ಸುದ್ದಿಗಳನ್ನು ಸತ್ಯ ಸಂಗತಿ ಎಂದು ಜನ ನಂಬುತ್ತಾರೆ. ನಮ್ಮ ದೇಶದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಹಕ್ಕು, ಅದರ ಕಾರ್ಯ ಹಾಗೂ ಸಾಧನೆಯು ಬಹಳ ಮಹತ್ವದ್ದು. ಪತ್ರಿಕೆಗಳು 'ಪ್ರಜಾಪ್ರಭುತ್ವದ ನಾಲ್ಕನೇ ಅಂಗ'ವಾಗಿದೆ. ಪತ್ರಿಕೆಗಳು ಪ್ರಜೆಗಳ ಪ್ರತಿನಿಧಿಯಾಗಿ ಪ್ರಜೆಗಳ ಸರ್ವಾಂಗೀಣ ಬೆಳವಣಿಗೆಯ ಧ್ಯೇಯೋದ್ದೇಶಗಳನ್ನು ಹೊಂದಿವೆ.

ಜಗತ್ತಿನ ನಾನಾ ದೇಶಗಳು ಪತ್ರಿಕೆಗಳಿಗೆ ಪ್ರತ್ಯೇಕವಾದ, ಮಹತ್ವವಾದ ಸ್ವಾತಂತ್ರ್ಯದ ಹಕ್ಕನ್ನು ನೀಡಿವೆ. ಭಾರತವೂ ಸಹ ಈ ಪತ್ರಿಕಾ ಸಂಸ್ಥೆಗೆ ವಿಶೇಷ ಕಾಯಿದೆಗಳ ಅಡಿಯಲ್ಲಿ ಉನ್ನತ ಸ್ವಾತಂತ್ರ್ಯದ ಹಕ್ಕನ್ನೂ ನೀಡಿದೆ. ಜೊತೆಗೆ ಜವಾಬ್ದಾರಿಯೂ ಸಹ ಹೆಚ್ಚಿದೆ.

ಪತ್ರಿಕೆಗಳಿಗೆ ವಿಶೇಷ ಜವಾಬ್ದಾರಿಯನ್ನು ನಮ್ಮ ಸಂವಿಧಾನ, ಸರ್ಕಾರಗಳು ನೀಡಿವೆ. ಈ ಬೆಳವಣಿಗೆಯಲ್ಲಿ ದಿನಪತ್ರಿಕೆಗಳು ತಮ್ಮ ಕಾರ್ಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿವೆ. ಹಲವು ಬಗೆಯ ವಿಷಯಗಳನ್ನು ಒಳಗೊಂಡ, ಹಲವು ವಿನ್ಯಾಸದಲ್ಲಿ ವರ್ಣರಂಜಿತವಾಗಿ ಈಗಿನ ಪತ್ರಿಕೆಗಳು ಪ್ರಸಾರಗೊಳ್ಳುತ್ತಿವೆ.

ವಿವಿಧ ಕ್ಷೇತ್ರಗಳ ವಿಷಯಗಳನ್ನು ಒಳಗೊಂಡ ವಿಶೇಷ ಪುಟಗಳನ್ನೂ ಸಹ ಪತ್ರಿಕೆಗಳಲ್ಲಿ ಕಾಣಬಹುದು. ವಿಜ್ಞಾನ, ತಂತ್ರಜ್ಞಾನ, ರಾಜಕೀಯ, ಆರ್ಥಿಕ, ಸಾಮಾಜಿಕ, ಕೃಷಿ, ಉದ್ಯೋಗ, ಸಾಹಿತ್ಯ, ಸಂಸ್ಕೃತಿ, ಕಲೆ, ವಾಣಿಜ್ಯ, ಮನರಂಜನೆ, ಕ್ರೀಡೆ ಹಾಗೂ ಸಿನಿಮಾ ಹೀಗೆ ಅನೇಕ ವಿಷಯಗಳಿಗೆ ಸಂಬಂಧಿಸಿದ ಸುದ್ದಿಗಳು ಇಲ್ಲಿರುತ್ತದೆ.

ಪತ್ರಿಕೆಗಳಲ್ಲಿನ ವಸ್ತುವಿಷಯಗಳನ್ನು ತೆಗೆದುಕೊಂಡರೆ ಮೇಲೆ ಹೇಳಿದಂತೆ ಅನೇಕ ಕ್ಷೇತ್ರಗಳು ಇದರ ವ್ಯಾಪ್ತಿಯಲ್ಲಿ ಬರುತ್ತದೆ. ಈ ಎಲ್ಲ ವಿಷಯಗಳನ್ನು ವ್ಯಕ್ತಪಡಿಸುವುದು ಭಾಷೆಯ ಮೂಲಕವೇ. ಪತ್ರಿಕೆಗಳಲ್ಲಿ ಶಿಷ್ಟ ಕನ್ನಡದ (ಅಥವಾ ಮೈಸೂರು-ಬೆಂಗಳೂರು ಕನ್ನಡ) ಮಾದರಿಯ ಭಾಷೆಯನ್ನು ಕಾಣಬಹುದು. ಶಿಷ್ಟ ಕನ್ನಡವೇ ಆದರೂ ಭಿನ್ನ ಕ್ಷೇತ್ರಗಳಲ್ಲಿ ಭಾಷೆ ಬಳಕೆಯಾಗುವಾಗ ಭಿನ್ನತೆ ಗೋಚರಿಸುತ್ತದೆ. ಉದಾ. ಸುದ್ದಿಗಳನ್ನು ಬರೆಯುವಾಗ ಬಳಸುವ ಭಾಷೆ, ಇತರ ಕ್ಷೇತ್ರಗಳ ಮಾಹಿತಿ ನೀಡುವಾಗಿನ ಭಾಷೆಗಿಂತ ಭಿನ್ನವಾಗಿರುತ್ತದೆ. ಆಯಾ ಕ್ಷೇತ್ರಕ್ಕೆ ಸೇರಿದ ಪದಗಳ ಬಳಕೆ, ಪಾರಿಭಾಷಿಕ ಪದಗಳ ಬಳಕೆ ಈ ಭಿನ್ನತೆಯನ್ನು ಸೂಚಿಸುತ್ತವೆ. ಉದಾ. ಒಂದು ತಲೆಬರಹದ ಪ್ರಯೋಗ 'ಶಾಲೆಗೆ ಬೀಗ ಜಡಿದು ಪ್ರತಿಭಟಿಸಿದರು' ಎಂಬುದನ್ನು ತೆಗೆದುಕೊಳ್ಳೋಣ. ಇಲ್ಲಿ 'ಜಡಿದು' ಎಂಬ ಕ್ರಿಯಾಪದವನ್ನೇ ಬಳಸಲಾಗುತ್ತದೆ. ಇಲ್ಲಿ 'ಹಾಕು' ಎಂಬುದೇ ಅರ್ಥವಾದರೂ, ಸಂದರ್ಭಕ್ಕನುಸಾರವಾಗಿ ಈ ಪದ ಬಳಸಿ ವಿಶೇಷ ಅರ್ಥವನ್ನು ತರಲಾಗುತ್ತದೆ. ವಿಶೇಷ ಲೇಖನ, ಅಂಕಣಬರಹಗಳಲ್ಲಿ ಇಂತಹ ಭಾಷಾ ಪ್ರಯೋಗವಿರುವುದಿಲ್ಲ.

ಪ್ರಸ್ತುತ ಅಧ್ಯಯನವು ಭಾಷಿಕ ಅಧ್ಯಯನವಾಗಿದ್ದು ವಿಶೇಷವಾಗಿ ಕ್ರೀಡಾಪುಟದ ಭಾಷೆಯನ್ನು ಕುರಿತು ಅಧ್ಯಯನ ಮಾಡುವುದಾಗಿದೆ. ಇದುವರೆಗೆ ಕನ್ನಡ ದಿನಪತ್ರಿಕೆಗಳ ಭಾಷೆ, ವ್ಯಾಕರಣ ಮುಂತಾದ ಅಂಶಗಳನ್ನು ಕುರಿತು ಅಧ್ಯಯನಗಳು ನಡೆದಿವೆ. ದಿನಪತ್ರಿಕೆಯ ಮುಖ್ಯ ಪುಟದಲ್ಲಿ ಬಳಸಲಾದ ಭಾಷೆಗೂ, ಈ ಕ್ರೀಡಾ ಪುಟದ ಭಾಷೆಗೂ ವ್ಯತ್ಯಾಸಗಳು ಕಂಡುಬರುತ್ತವೆ. ಉದಾಹರಣೆಗೆ ಆಟಗಳ ಸುದ್ದಿಗಳಲ್ಲಿ ಬಳಕೆಯಾಗುವ ಭಾಷೆಯಲ್ಲಿ ಅತಿ ಹೆಚ್ಚಿನ ವ್ಯಂಜನಾಂತ

ಪದಗಳು ಇವೆ. ಇಂಗ್ಲಿಶ್ ಪದಗಳನ್ನು ಹಾಗೆಯೇ ಯಥಾವತ್ತಾಗಿ ಬಳಸಲಾಗುತ್ತದೆ. ಅಂತೆಯೇ ಸಂಖ್ಯಾವಾಚಿ, ಹೆಸರುಗಳು ಬಳಕೆಗಳಲ್ಲಿ ಅನೇಕ ಭಿನ್ನತೆಗಳನ್ನು ಕಾಣಬಹುದು.

ಹಾಗಾಗಿ ಪ್ರಸ್ತುತ ಅಧ್ಯಯನದ ಸ್ವರೂಪವು ದಿನಪತ್ರಿಕೆಗಳ ಕ್ರೀಡಾವರದಿ ಪುಟದಲ್ಲಿ ಬಳಕೆಯಾಗುವ ಭಾಷಾ ವೈವಿಧ್ಯವನ್ನು ಗುರುತಿಸುವುದಾಗಿದೆ. ಕ್ರೀಡಾಪ್ರಪಂಚ ದಿನೇ ದಿನೇ ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತಿದೆ. ಇಲ್ಲಿ ಬಳಕೆಯಾದ ಮುಖ್ಯ ಭಾಷಿಕ ಅಂಶಗಳನ್ನು ನೋಡಿದಾಗ ಹಲವು ರೀತಿಯ ಭಾಷಾ ವೈವಿಧ್ಯ ಕಂಡುಬರುತ್ತದೆ. ಇಲ್ಲಿ ಬಳಕೆಯಾಗುವ ಹೆಚ್ಚಿನ ಪದಗಳು ಇಂಗ್ಲಿಶ್ ಭಾಷೆಯ ಪದಗಳೇ ಆಗಿವೆ. ಇಲ್ಲಿನ ಪದರಚನೆ, ಪದಪ್ರಯೋಗ, ತಲೆಬರಹ, ವರದಿ ನಿರೂಪಣೆ ಮುಂತಾದವುಗಳನ್ನು ಗಮನಿಸಿದಾಗ ವಿಶೇಷ ರೀತಿಯ ಭಾಷಾ ಬಳಕೆ ಕಂಡುಬರುತ್ತವೆ. ನಾಮಪದಗಳು, ಗುಣಪದಗಳು, ಕ್ರಿಯಾವಿಶೇಷಣ ಪದಗಳು, ಸಂಖ್ಯಾವಾಚಕ, ನುಡಿಗಟ್ಟು, ಗಾದೆ, ಹಾಗೆ ಸ್ವೀಕರಣ ಪದಗಳು ಅತೀ ಹೇರಳವಾಗಿ ಬಳಕೆಯಾಗುವುದು ಕಂಡುಬರುತ್ತದೆ. ಕನ್ನಡ ಭಾಷೆಯ ಓದುಗರು ವಿಶೇಷ ಭಾಷೆಯನ್ನು ಇಂದು ಈ ಪುಟದಲ್ಲಿ ಕಾಣುತ್ತಿದ್ದಾರೆ. ಈ ಎಲ್ಲಾ ವಿಶೇಷ ಭಾಷಿಕ ಅಂಶಗಳನ್ನು ಕುರಿತು ಅಧ್ಯಯನಕ್ಕೆ ಒಳಪಡಿಸುವುದೇ, ಈ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ಉದ್ದೇಶ

ಸಮೂಹ ಸಂಪರ್ಕ ಮಾಧ್ಯಮದಲ್ಲಿ ಒಂದಾದ ಪತ್ರಿಕೆಯ ಹುಟ್ಟು, ಬೆಳವಣಿಗೆಯನ್ನು ನೋಡಿದಾಗ, ಪತ್ರಿಕೆಗಳ ಮಹತ್ವ, ಅದರ ಕಾರ್ಯಸಾಧನೆಗಳು ನಮಗೆ ಮನವರಿಕೆಯಾಗುತ್ತದೆ. ಪತ್ರಿಕೆಗಳನ್ನು ಮೊಟ್ಟಮೊದಲ ಬಾರಿಗೆ ಪ್ರಸಾರಗೊಳಿಸಿದವರು ಜರ್ಮನ್ ದೇಶದವರು ಎಂದು ತಿಳಿದುಬರುತ್ತದೆ. "೧೬೧೫ ರಲ್ಲಿ ಪ್ರಕಟವಾದ 'ಜರ್ಮನ್' ಪತ್ರಿಕೆಯು ಪ್ರಪಂಚದ ಪ್ರಥಮ ಪತ್ರಿಕೆ ಎನಿಸಿತು. ೧೮ನೆಯ ಶತಮಾನದಲ್ಲಿ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಪ್ರಪಂಚದ ಅನೇಕ ದೇಶಗಳಲ್ಲಿ ಪತ್ರಿಕೆಗಳು ಪ್ರಾರಂಭಗೊಂಡವು" ಎಂದು ಡಿ.ಬಿ. ನಾಯಕರು (೨೦೦೩) ಹೇಳುತ್ತಾರೆ. ನಂತರದ ಸಂದರ್ಭದಲ್ಲಿ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಪತ್ರಿಕೆಗಳ ಬೆಳವಣಿಗೆ ಕಂಡುಬಂದಿತು.

ಕರ್ನಾಟಕದಲ್ಲಿಯೂ ದಿನಪತ್ರಿಕೆ ಬೆಳೆದು ಬರಲಿಕ್ಕೆ ಸಾಕಷ್ಟು ಮಹನೀಯರು ಶ್ರಮಿಸಿದ್ದಾರೆ. ಅಂದಿನ ರಾಜಕೀಯ ವ್ಯವಸ್ಥೆಗಳ ಮಧ್ಯ ನಿರಂತರ ಹೋರಾಟ, ಪರಿಶ್ರಮಗಳ ಮೂಲಕ ಪತ್ರಿಕಾ

ಸ್ವಾತಂತ್ರ್ಯವನ್ನು ತಂದು ಕೊಟ್ಟಿದ್ದಾರೆ. 'ಕನ್ನಡ ಪತ್ರಿಕಾ ಸಂಸ್ಥೆ' ಅನೇಕ ಏಳು-ಬೀಳುಗಳನ್ನು ಎದುರಿಸುತ್ತಾ ಇಂದು ಬೃಹತ್ ಉದ್ಯಮವಾಗಿ ಜ್ಞಾನ ಪ್ರಸಾರದ ಮಾಧ್ಯಮವಾಗಿ ಹೊರಬಂದಿದೆ.

ಇಂದಿನ ಕನ್ನಡದ ಪ್ರಮುಖ ದಿನಪತ್ರಿಕೆಗಳು ಒಂದು ನಿಯಮಿತ ಜಾಗದಲ್ಲಿ, ಸಾಮಾನ್ಯವಾಗಿ ಕೊನೆಯ ಅಥವಾ ಕೊನೆಯ ಪುಟದ ಹಿಂದಿನ ಎರಡು ಪುಟಗಳಲ್ಲಿ ಕ್ರೀಡೆಗಳಿಗೆ ಸಂಬಂಧಿಸಿದ ಮಾಹಿತಿ ಇರುತ್ತದೆ. ಈ ಪುಟಗಳಲ್ಲಿ ಹಿಂದಿನ, ಇಂದಿನ ಮತ್ತು ನಾಳೆಯ ಸುದ್ದಿಗಳು ಸೇರಿರುತ್ತವೆ. ಜರುಗಿದ ಕ್ರೀಡೆಗಳ ಬಗೆಗಿನ ಮಾಹಿತಿ, ಇಂದು ಮತ್ತು ನಾಳೆ ನಡೆಯಲಿರುವ ಆಟಗಳ ಮಾಹಿತಿ, ವಿಶ್ಲೇಷಣೆ, ಊಹೆ ಹೀಗೆ ಕ್ರೀಡೆಗೆ ಸಂಬಂಧಿಸಿದ ಸುದ್ದಿ, ಮಾಹಿತಿಯನ್ನು ಒಳಗೊಂಡಿರುತ್ತವೆ. ಕೆಲವು ಸುದ್ದಿ ರೂಪದಲ್ಲಿ, ಕೆಲವು ಅಂಕಣಗಳ ರೂಪದಲ್ಲಿ, ಕೆಲವು ಬಾಕ್ಸ್‌ಗಳ ಒಳಗೆ, ಆಕರ್ಷಕ ಛಾಯಾಚಿತ್ರಗಳ ಜೊತೆ ಮೂಡಿಬರುತ್ತವೆ.

ಪ್ರಪಂಚದ ಯಾವುದೇ ಭಾಗದಲ್ಲಿ ನಡೆದ ಪ್ರಮುಖ ಆಟಗಳನ್ನು ನೇರ ಪ್ರಸಾರದ ಕಾರ್ಯಕ್ರಮವನ್ನು ಮೊದಲಿಗೆ ದೂರದರ್ಶನ, ರೇಡಿಯೋ ಮಾಧ್ಯಮಗಳು ಒದಗಿಸುತ್ತಿವೆ. ನಾಳಿನ ದಿನದ ಪತ್ರಿಕೆಯಲ್ಲಿ ಆ ಆಟಗಳ ಹೆಚ್ಚಿನ ಮಾಹಿತಿಯನ್ನು ಈ ಕ್ರೀಡಾಪುಟದಲ್ಲಿ ಓದುಗರಿಗೆ ಒದಗಿಸುತ್ತಿದೆ. ಅನೇಕರಿಗೆ ದಿನಪತ್ರಿಕೆಗಳಲ್ಲಿನ ಈ ಕ್ರೀಡಾ ವರದಿಯ ಪುಟದ ಕಡೆಗೆ ಹೆಚ್ಚಿನ ಆಸಕ್ತಿ ಮೂಡುತ್ತಿದೆ. ಪತ್ರಿಕೆಯನ್ನು ಕೈಗೆ ತೆಗೆದುಕೊಂಡ ತಕ್ಷಣವೇ ಕ್ರೀಡಾಪುಟಕ್ಕೆ ಹೋಗುವುದು ಇದರ ಮಹತ್ವವನ್ನು ಸೂಚಿಸುತ್ತದೆ. ದೇಶ ವಿದೇಶಗಳು ಕ್ರೀಡೆಗಳಿಗೆ ಹೆಚ್ಚಿನ ಹಣವನ್ನು ವಿನಿಯೋಗಿಸುತ್ತಿವೆ. ಕ್ರೀಡಾಪಟುಗಳೂ ಸಹ ಜನಮನದಲ್ಲಿ ತಾರೆಯರಾಗಿದ್ದು, ಜನರಲ್ಲಿ ವಿಶೇಷವಾದ ಅಭಿಮಾನವನ್ನು ಹೊಂದಿದ್ದಾರೆ. ಕ್ರೀಡಾಪುಟದಲ್ಲಿನ ಭಾಷೆ ವಿಭಿನ್ನವಾಗಿರುವುದರಿಂದ ಈ ಪುಟದ ಭಾಷೆಯ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಪ್ರಸ್ತುತ ಈ ಅಧ್ಯಯನದ ಉದ್ದೇಶವು ಕನ್ನಡ ದಿನಪತ್ರಿಕೆಗಳಲ್ಲಿನ ಭಾಷಾ ಬಳಕೆಯನ್ನು ಕುರಿತು ಅವಲೋಕನ ಮಾಡಿ ಗುರುತಿಸುವುದು ಆಗಿದೆ. ಪತ್ರಿಕೆಯ ಇನ್ನುಳಿದ ಪುಟದಲ್ಲಿಯೂ ಸಹ ಈ ಕ್ರೀಡಾ ಪುಟದಲ್ಲಿ ಬಳಕೆಯಾಗುವ ಭಾಷಾ ಮಾದರಿಯನ್ನೆ ಹೋಲುವಂತಹ ಅಂಶಗಳೂ ಸಹ ಕಾಣಿಸಿಕೊಳ್ಳುತ್ತವೆ. ಉದಾ. ೨೨, ೨೩, ೨೪ ರಿಂದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಎಂಬ ಸಂಖ್ಯಾವಾಚಕಗಳ ಬಳಕೆ ಹಾಗೂ ಸಂಕ್ಷಿಪ್ತ ನಾಮವಾಚಿಗಳಾದ ಧರಂ, ಖರ್ಗೆ, ಡಿ.ಕೆ.ಶಿ., ಎಂ.ಪಿ.ಪಿ., ಸಿ.ಎಂ., ಡಿಸಿಎಂ.ನಂತಹ ಮುಂತಾದ ಪದಗಳು ಕ್ರೀಡಾಪುಟದ ಹೊರಗೂ

ಕಾಣಿಸಿಕೊಳ್ಳುತ್ತಿವೆ. ಆದರೂ ಇನ್ನಿತರ ಅಂಶಗಳಿಂದ ಕ್ರೀಡಾಪುಟದ ಭಾಷೆ ಇತರೆಡೆಗಿಂತ ಭಿನ್ನ ಬಳಕೆಯಾಗುತ್ತಿರುವುದನ್ನು ಗುರುತಿಸುವಲ್ಲಿ ಅಧ್ಯಯನ ಮಹತ್ವ ನೀಡುತ್ತದೆ.

ಪತ್ರಿಕೆಯ ಕ್ರೀಡಾಪುಟದಲ್ಲಿ ಕನ್ನಡ ಭಾಷೆ ಹೊಸ ಸ್ವರೂಪವನ್ನು ಹೊಂದಿ ಬಳಕೆಯಾಗುತ್ತಿದೆ. ಆಟಗಳಿಗೆ ಸಂಬಂಧಿಸಿದ ಇಂಗ್ಲಿಶ್ ಪದಗಳ ಬಳಕೆಯು ಕನ್ನಡದ ರೂಪವನ್ನು ಧರಿಸಿ ಹಾಗೆಯೇ ವ್ಯಂಜನಾಂತವಾಗಿಯೇ ಕಂಡುಬರುತ್ತಿರುವುದು ಒಂದು ವಿಶೇಷ. ಹಾಗೆಯೇ ಇಂಗ್ಲಿಶ್ ಪದಗಳಿಗೆ ಕನ್ನಡ ಸಂವಾದಿ ಪದಗಳ ಬಳಕೆ ಪ್ರಕ್ರಿಯೆ ನಡೆದೇ ಇದೆ. ಈ ಬೆಳವಣಿಗೆಯಲ್ಲಿ ಕನ್ನಡ ಭಾಷೆಯ ಭಿನ್ನ ಸ್ವರೂಪವನ್ನು ಗುರುತಿಸಬಹುದಾಗಿದೆ.

ಕ್ರೀಡಾಪುಟದ ಭಾಷಾ ಬಳಕೆಯಲ್ಲಿನ ಭಾಷಿಕ ಹೊಸ ರಚನೆಗಳನ್ನು ಗಮನಿಸಿದಾಗ ಕ್ರಿಯಾಪದಗಳ ಬಳಕೆ ವಿಶೇಷವಾಗಿರುವುದು ಕಂಡುಬರುತ್ತದೆ. ಹಾಗೆಯೇ ಗುಣವಾಚಿ, ಸಂಖ್ಯಾವಾಚಿಗಳು ವಿಶೇಷವಾಗಿ ಕಂಡುಬರುತ್ತಿರುವುದನ್ನು ಗುರುತಿಸಿ ಅಧ್ಯಯನಕ್ಕೆ ಒಳಪಡಿಸುವುದೇ ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ಕನ್ನಡದ ಪ್ರಮುಖ ದಿನಪತ್ರಿಕೆಗಳ ಕ್ರೀಡಾ ಪುಟದ ತಲೆಬರಹ, ವರದಿ, ವಿಶ್ಲೇಷಣೆ, ಅಂಕಣ ಬರಹಗಳಿಗೆ ಸೀಮಿತವಾಗಿದೆ. ಈ ವಿಭಾಗಗಳಲ್ಲಿ ಬಳಕೆಯಾಗುವ ಭಾಷೆಯ ವಿಶಿಷ್ಟ ಅಂಶಗಳು ಈ ಅಧ್ಯಯನದ ವ್ಯಾಪ್ತಿಗೆ ಬರುತ್ತದೆ. ಪ್ರಜಾವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ ಉದಯವಾಣಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಬಳಸಿಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನವು ಒಟ್ಟು ಐದು ಅಧ್ಯಾಯಗಳನ್ನು ಒಳಗೊಂಡಿದ್ದು, ದಿನಪತ್ರಿಕೆಗಳ ಕ್ರೀಡಾಪುಟದ ಭಾಷಿಕ ಅಧ್ಯಯನಕ್ಕೆ ಸಂಬಂಧಿಸಿದ ವಿಶ್ಲೇಷಣೆ ಮಾತ್ರ ಇಲ್ಲಿ ಒಳಗೊಂಡಿರುತ್ತದೆ. ಮುಂದಿನ ಪ್ರಮುಖ ಶೀರ್ಷಿಕೆಗಳ ಅಡಿಯಲ್ಲಿ ಅಧ್ಯಯನದ ವಿಸ್ತಾರ ಹರಡಿಕೊಂಡಿದೆ.

ಅಧ್ಯಾಯ ಎರಡರಲ್ಲಿ ಇದುವರೆಗೆ ಕನ್ನಡ ದಿನಪತ್ರಿಕೆಗಳ ಬಗ್ಗೆ ನಡೆದಿರುವ ಭಾಷಾ ಅಧ್ಯಯನಗಳನ್ನು ಗಮನಿಸಲಾಗಿದೆ. ಹಾಗೆಯೇ ನಾಡಿನ ಅನೇಕ ವಿದ್ವಾಂಸರು ಪತ್ರಿಕೆಗಳ ಭಾಷಾ ಸ್ವರೂಪ ಹಾಗೂ ಇತ್ಯಾದಿ ಅಂಶಗಳನ್ನು ಕುರಿತು ಹಾಗೆ ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಯನ್ನು

ಕುರಿತು ಈಗಾಗಲೇ ಅಧ್ಯಯನವನ್ನು ಮಾಡಿರುತ್ತಾರೆ. ಅವರ ಅಧ್ಯಯನದ ಮಾಹಿತಿ, ಸಮೀಕ್ಷೆ, ಚರ್ಚೆ, ವಿಮರ್ಶೆಯನ್ನು ಸಂಕ್ಷಿಪ್ತವಾಗಿ ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಕ್ರೀಡಾಪುಟದ ಭಾಷಾ ಬಳಕೆಯ ನೆಲೆಗಳನ್ನು ಗುರುತಿಸುವುದರ ಮೂಲಕ ಕ್ರೀಡಾಕ್ಷೇತ್ರದಲ್ಲಿ ಬಳಕೆಯಾಗುವಂತಹ ಪದಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಅಲ್ಲಿನ ತಲೆಬರಹ, ಆರಂಭಿಕ ಟಿಪ್ಪಣಿ ವಿಸ್ತೃತ ವರದಿಗಳಲ್ಲಿ ಇಂದಿನ ಕ್ರೀಡಾಪುಟ ಯಾವ ಬಗೆಯ ಕನ್ನಡ ಭಾಷಾ ಬಳಕೆಯನ್ನು ರೂಢಿಸಿಕೊಂಡಿದೆ, ಹಾಗೆಯೇ ಇಂದಿನ ಸಂದರ್ಭದಲ್ಲಿ ಕ್ರೀಡೆಗಳು ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿವೆ ಎಂಬ ವಿಚಾರಗಳನ್ನು ವಿಶ್ಲೇಷಿಸಲಾಗಿದೆ. ಕ್ರೀಡಾಪುಟದಲ್ಲಿ ಕನ್ನಡ ಭಾಷೆಯ ಪದಗಳು, ಹೊಸ ಪದಗಳು, ಇಂಗ್ಲಿಶ್ ಪದಗಳು ಹೇಗೆ ಒಳಗೊಂಡಿವೆ ಎಂಬುದನ್ನು ಗುರುತಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಕನ್ನಡ ದಿನಪತ್ರಿಕೆಗಳ ಕ್ರೀಡಾ ವರದಿ ಪುಟದಲ್ಲಿ ಬಳಕೆಯಾಗುವಂತಹ ಇಂಗ್ಲಿಶ್ ಹಾಗೂ ಭಾಷಾಂತರ ಪದಗಳ ಬಗ್ಗೆ ಚರ್ಚಿಸುವುದಾಗಿದ್ದು, ಅಲ್ಲಿನ ಇಂಗ್ಲಿಶ್ ಹಾಗೂ ಭಾಷಾಂತರ ಪದಗಳ ಪದಕೋಶ ಸಂಗ್ರಹವನ್ನು ಗುರುತಿಸುವುದಾಗಿದೆ. ಹಾಗೆಯೇ ಹೆಸರುಗಳ ಬಳಕೆ, ಕ್ರಿಯಾರೂಪಗಳ ಬಳಕೆ, ಗುಣವಾಚಿಕ ಪದಗಳ ಬಳಕೆ, ಸಂಖ್ಯಾವಾಚಿ ಪದಗಳ ಬಳಕೆ ಹಾಗೂ ಇಂತರ ಅಂಶಗಳನ್ನು ಕುರಿತು ಪ್ರಯೋಗಾರ್ಥದ ಮೂಲಕ ಚರ್ಚಿಸುವುದಾಗಿದೆ.

ಅಧ್ಯಾಯದಲ್ಲಿ ಐದರಲ್ಲಿ ಅಧ್ಯಯನದಿಂದ ಕಂಡುಕೊಂಡ ಫಲಿತವನ್ನು ಕುರಿತಂತೆ ವಿವರಿಸುವುದಾಗಿದೆ.

✤ ✤ ✤

ಅಧ್ಯಾಯ ೨

ಇದುವರೆಗಿನ ಅಧ್ಯಯನಗಳು

ಅಧ್ಯಾಯ ೨

ಇದುವರೆಗಿನ ಅಧ್ಯಯನಗಳು

ಪ್ರಸ್ತಾವನೆ

ಕರ್ನಾಟಕದಲ್ಲಿ ಇಂದು ಸಾಕಷ್ಟು ಸಂಖ್ಯೆಯಲ್ಲಿ ದಿನಪತ್ರಿಕೆಗಳು ಪ್ರಕಟವಾಗುತ್ತಿವೆ. ಕನ್ನಡ ಪತ್ರಿಕಾ ಲೋಕವನ್ನು ಗಮನಿಸಿದಾಗ ಅದರ ಬೆಳವಣಿಗೆಯಲ್ಲಿ ಅನೇಕ ಏಳುಬೀಳುಗಳು ಇರುವುದು ತಿಳಿದುಬರುತ್ತದೆ. ಕರ್ನಾಟಕದಲ್ಲಿ ಪತ್ರಿಕೆಗಳನ್ನು ನಡೆಸಿಕೊಂಡು ಬಂದವರ ಬದುಕು, ಸಾಹಸ, ಧೈರ್ಯ ತುಂಬಾ ಶ್ಲಾಘನೀಯವಾದದ್ದು. ಕನ್ನಡ ಭಾಷಾ ಬೆಳವಣಿಗೆಗೆ ಪತ್ರಿಕೋದ್ಯಮದ ಕೊಡುಗೆ ಅನನ್ಯವಾದುದು.

ಜರ್ಮನ್ ದೇಶದವರು ಮೊಟ್ಟಮೊದಲ ಬಾರಿಗೆ ಪತ್ರಿಕೆಯನ್ನು ಪ್ರಾರಂಭಿಸಿದರು. ಈ ಕುರಿತು ಡಿ.ಬಿ. ನಾಯಕರು (೨೦೦೩) ಹೀಗೆ ಹೇಳಿದ್ದಾರೆ : "೧೬೧೫ ರಲ್ಲಿ ಪ್ರಕಟವಾದ ಜರ್ಮನ್ ಪತ್ರಿಕೆಯು ಜಗತ್ತಿನ ಮೊಟ್ಟಮೊದಲ ಪತ್ರಿಕೆ ಎನಿಸಿತು. ೧೮ನೆಯ ಶತಮಾನದಲ್ಲಿ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಪ್ರಪಂಚದ ಅನೇಕ ದೇಶಗಳಲ್ಲಿ ಪತ್ರಿಕೆಗಳು ಪ್ರಾರಂಭಗೊಂಡವು"[೧] ಎಂಬ ಅಂಶ ತಿಳಿದುಬರುತ್ತದೆ.

ಭಾರತದಲ್ಲಿ ಪತ್ರಿಕೆಗಳ ಬೆಳವಣಿಗೆಯನ್ನು ಕುರಿತು, ಬಿ.ಎಸ್. ಚಂದ್ರಶೇಖರ (೨೦೦೩) ಅವರು ಹೀಗೆ ಅಭಿಪ್ರಾಯಪಡುತ್ತಾರೆ. "ಕ್ರಿಶ್ಚಿಯನ್ ಮಿಶನರಿಗಳು ತಮ್ಮ ಮತ ಪ್ರಚಾರಕ್ಕಾಗಿ ಮುದ್ರಣಯಂತ್ರ ತಂದರು. ಅವರೇ ಭಾರತೀಯ ಭಾಷೆಗಳಲ್ಲಿ ಪತ್ರಿಕೆಗಳು ಬರಲು ಕಾರಣರಾದರು. ಈಸ್ಟ್ ಇಂಡಿಯಾ ಕಂಪನಿಯ ಮಾಜಿ ಉದ್ಯೋಗಿ ಜೇಮ್ಸ್ ಆಗಸ್ಟಸ್ ಹಿಕ್ಕಿ ೧೭೮೦ ರಲ್ಲಿ

ಭಾರತದ ಮೊದಲ ಪತ್ರಿಕೆಯಾದ 'The Bengal Gazette' ಪ್ರಕಟಿಸಿದ."[೨] ಮುಂದೆ ದೇಶೀಯ ನಾಯಕರು ಭಾರತದ ವಿವಿಧ ಭಾಷೆಗಳಲ್ಲಿ ಪತ್ರಿಕೆಗಳನ್ನು ಪ್ರಾರಂಭಿಸಿದರು. ಹಾಗಾಗಿ 'ಜೇಮ್ಸ್ ಆಗಸ್ಟಸ್ ಹಿಕ್ಕಿ'ಯವರನ್ನು 'ಭಾರತೀಯ ಪತ್ರಿಕೋದ್ಯಮದ ಪಿತಾಮಹ' ಎಂತಲೂ ಕರೆಯುತ್ತಾರೆ.

೧೯ನೆಯ ಶತಮಾನದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಕರ್ನಾಟಕದಲ್ಲಿಯೂ ಸಹ ಪತ್ರಿಕೋದ್ಯಮ ಕಾಲೂರಿತು. ಡಿ.ಬಿ. ನಾಯಕರು (೨೦೦೩) 'ಸಮೂಹ ಮಾಧ್ಯಮಗಳು ಮತ್ತು ಸಮಾಜ' ಎನ್ನುವ ಪುಸ್ತಕದಲ್ಲಿ ಹೀಗೆ ಅಭಿಪ್ರಾಯಪಡುತ್ತಾರೆ. "ಸುಮಾರು ೧೮೪೨-೪೩ ರಲ್ಲಿ ಈ ಕ್ರೈಸ್ತ ಮಿಶನರಿಗಳು ತಮ್ಮ ಧಾರ್ಮಿಕ ಕಾರ್ಯಗಳಿಗೆ ಕರ್ನಾಟಕದಲ್ಲಿ ಕನ್ನಡ ಭಾಷೆಯ ಮುದ್ರಣ ಯಂತ್ರವನ್ನು ಬಳಕೆ ಮಾಡಿದರು. ತರುವಾಯ ಸುಮಾರು ೧೮೪೩ ರಲ್ಲಿ ಪ್ರಥಮ ಕನ್ನಡ ಭಾಷಾ ಪತ್ರಿಕೆಯಾದ 'ಮಂಗಳೂರು ಸಮಾಚಾರ' (೧೮೪೩) ಕನ್ನಡ ಭಾಷೆಯಲ್ಲಿ ಮುದ್ರಣಗೊಂಡ ಪ್ರಥಮ ಪತ್ರಿಕೆಯಾಯಿತು. ಮುಂದೆ ಕೆಲವೇ ವರ್ಷಗಳಲ್ಲಿ ಬೆಂಗಳೂರು, ಮೈಸೂರು, ಮಂಗಳೂರು ಹಾಗೂ ಬೆಳಗಾವಿಗಳಲ್ಲಿ ಮುದ್ರಣ ಯಂತ್ರಗಳನ್ನು ಸ್ಥಾಪಿಸಲಾಯಿತು."[೩]

ತರುವಾಯ ನಾಡಿನ ವಿದ್ವಾಂಸರಾದ ಎಂ. ವೆಂಕಟಕೃಷ್ಣಯ್ಯ, ಡಿ.ವಿ. ಗುಂಡಪ್ಪ, ತಿ.ತಾ. ಶರ್ಮ, ಸಿದ್ದವನಹಳ್ಳಿ ಕೃಷ್ಣಶರ್ಮ, ಮೊಹರೆ ಹಣಮಂತರಾಯ ಮುಂತಾದ ಪತ್ರಕರ್ತರು ಪತ್ರಿಕೆಗಳ ಪ್ರಕಟಣ ಕಾರ್ಯದಲ್ಲಿ ತೊಡಗಿದರು. ಹೀಗೆಯೇ ಕನ್ನಡ ಭಾಷೆಯಲ್ಲಿ ಪತ್ರಿಕೋದ್ಯಮ ಬೆಳವಣಿಗೆಯನ್ನು ಕಂಡಿತು. ಪ್ರಾರಂಭದ ಕನ್ನಡ ಭಾಷೆಯ ಪತ್ರಿಕೆಗಳಾದ ತಾಯಿನಾಡು (೧೯೨೬), ಪ್ರಜಾಮತ (೧೯೩೧), ಸಂಯುಕ್ತ ಕರ್ನಾಟಕ (೧೯೩೩), ಜಯ ಕರ್ನಾಟಕ, ಕೇಸರಿ ಇನ್ನು ಮುಂತಾದ ಕನ್ನಡ ಭಾಷೆಯ ದಿನಪತ್ರಿಕೆಗಳು ಕನ್ನಡ ಭಾಷೆಯನ್ನು ಬಲಪಡಿಸುವುದರೊಂದಿಗೆ, ಸಾಮಾಜಿಕ ಕಾರ್ಯದಲ್ಲಿ ತೊಡಗಿದ್ದವು ಎಂಬ ಅಂಶ ವ್ಯಕ್ತವಾಗುತ್ತದೆ.

ಪತ್ರಿಕೋದ್ಯಮ ಪ್ರಸ್ತುತ ಸಂದರ್ಭದಲ್ಲಿ ಒಂದು ಉದ್ಯಮವಾಗಿ ಬೆಳೆಯುತ್ತಿದೆ. ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಭಾಷೆಯ ದಿನಪತ್ರಿಕೆಗಳು ಕನ್ನಡ ಭಾಷೆಯನ್ನು ಬೆಳೆಸುವ, ಬಲಪಡಿಸುವ ಕಾರ್ಯದಲ್ಲಿ ತೊಡಗಿವೆ. ಈ ಕುರಿತು ಹಿರಿಯ ವಿದ್ವಾಂಸರಾದ ಡಾ. ಸೋಮಶೇಖರಗೌಡ (೧೯೯೯) ಅವರು ಹೀಗೆ ಹೇಳಿದ್ದಾರೆ. "ಕನ್ನಡ ಭಾಷೆ ಅತ್ಯಂತ ಸಮೃದ್ಧವಾಗಿ ಬಳಕೆಯಾಗುತ್ತಿರುವ ಯಾವುದಾದರೂ ಕ್ಷೇತ್ರ ಇದೆ ಎಂದಾದರೆ ಅದು ಪತ್ರಿಕೋದ್ಯಮ. ಕರ್ನಾಟಕದಲ್ಲಿ ಪತ್ರಿಕೋದ್ಯಮದ ಇತಿಹಾಸ ಬೆದಕಿದರೆ ಅದಕ್ಕೆ ೧೫೦ ವರ್ಷಗಳ ಚರಿತ್ರೆ ಇಲ್ಲ. ಆದರೆ ಪತ್ರಿಕೋದ್ಯಮದಲ್ಲಿ ಕಂಡುಬರುವ ಪ್ರಗತಿ ಆಧುನಿಕತೆಯ ನಾಗರೀಕತೆಯ ನಂಟು, ಯಾರೂ ಮೆಚ್ಚುಂತಹದ್ದು, ಯಾವ

ಬಗೆಯವು? ಯಾವ ಧೋರಣೆಯವು? ಧ್ಯೇಯೋದ್ದೇಶದವು? ಎಂಬ ವಿಚಾರ ಒತ್ತಟ್ಟಿಗಿರಲಿ ಇವೆಲ್ಲ ಕನ್ನಡದ ಬಗೆಗೆ ಕಾಳಜಿಯನ್ನುಳ್ಳವು. ಕನ್ನಡವನ್ನು ಕಟ್ಟಲು ಕಂಕಣದಾರಿಯಾದವು ಎಂಬುದು ಸುಳ್ಳಲ್ಲ"[೪] ಎಂಬ ಅಂಶ ವ್ಯಕ್ತವಾಗುತ್ತದೆ. ಈ ಹಿನ್ನಲೆಯಲ್ಲಿ ಕನ್ನಡ ಪತ್ರಿಕೆಗಳು ಭಾಷೆಯನ್ನು ಬೆಳೆಸುವಲ್ಲಿ ಸಹಕಾರಿಗಳಾಗಿವೆ ಎಂದರೆ ತಪ್ಪಾಗಲಾರದು.

ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಭಾಷೆಯ ದಿನಪತ್ರಿಕೆಗಳು ಪ್ರಕಟಗೊಳ್ಳುತ್ತಾ ಇವೆ. ಪತ್ರಿಕೆಯ ಭಾಷೆ ಒಂದು ಪ್ರತ್ಯೇಕ ಭಾಷಾ ಪ್ರಭೇದವಾಗಿ ಗೋಚರಿಸುತ್ತಿದೆ. ಕನ್ನಡ ಪತ್ರಿಕೆಗಳು ಕನ್ನಡ ಭಾಷೆಯನ್ನು ನವನವೀನಗೊಳಿಸುವುದರ ಜೊತೆಗೆ ಅದರ ಬೆಳವಣಿಗೆಗೂ ಕಾರಣವಾಗುತ್ತಿವೆ.

ಕನ್ನಡ ಪತ್ರಿಕೋದ್ಯಮದಲ್ಲಿ ಕನ್ನಡ ಭಾಷೆಯ ಬೆಳವಣಿಗೆಯನ್ನು ಕುರಿತಾದಂತಹ ಅಧ್ಯಯನಗಳು, ವಿದ್ವಾಂಸರ ಪುಸ್ತಕಗಳು ಹಾಗೂ ಬಿಡಿ ಲೇಖನಗಳು ಕಂಡುಬರುತ್ತವೆ. ಇಲ್ಲಿ ಮುಖ್ಯವಾಗಿ ಗಮನಿಸುವ ಅಂಶವೆಂದರೆ ಕನ್ನಡ ಪತ್ರಿಕೋದ್ಯಮದ ಬಗ್ಗೆ, ದಿನಪತ್ರಿಕೆಗಳ ಬಗ್ಗೆ, ಅದರ ಕಾರ್ಯವ್ಯಾಪ್ತಿಯ ಬಗ್ಗೆ ಹಾಗೂ ಮುಖ್ಯವಾಗಿ ಅದರ ಭಾಷಾ ಬಳಕೆಯ ವಿಚಾರಗಳನ್ನು ಒಳಗೊಂಡ ನಾಡಿನ ಅನೇಕ ವಿದ್ವಾಂಸರು ಅಧ್ಯಯನವನ್ನು ಮಾಡಿದ್ದಾರೆ. ಅಂತವುಗಳಲ್ಲಿ ನನ್ನ ಅಧ್ಯಯನದ ಸಂದರ್ಭದಲ್ಲಿ ಗಮನಕ್ಕೆ ಬಂದಂತಹ ಕೆಲವು ಪುಸ್ತಕಗಳಲ್ಲಿನ ದಿನಪತ್ರಿಕೆಗಳ ಕಾರ್ಯ, ಅದರ ಮಹತ್ವ, ಅದರ ಭಾಷಾ ಬಳಕೆಯ ವಿಚಾರಗಳನ್ನು ಅವಲೋಕಿಸಲಾಗಿದೆ.

ಯಾವುದೇ ಕ್ಷೇತ್ರವಾದರೂ ಸರಿ ಅದರ ಬೆಳವಣಿಗೆಯನ್ನು ಗುರುತಿಸುವ ಅಧ್ಯಯನಗಳು ನಡೆಯುತ್ತಲೇ ಇರುತ್ತವೆ. ಪತ್ರಿಕಾ ಕ್ಷೇತ್ರವೂ ಅದಕ್ಕೆ ಹೊರತಲ್ಲ. ಅನೇಕ ಪುಸ್ತಕಗಳು ಪತ್ರಿಕೆಯ ಒಳಹೊರಗನ್ನು ಪರಿಚಯಿಸುವ ಕೆಲಸ ಮಾಡಿವೆ. ಪತ್ರಿಕೆಯ ಇತಿಹಾಸ, ಬೆಳವಣಿಗೆ, ಸ್ವರೂಪ, ಪತ್ರಿಕಾರಂಗದ ಕಾರ್ಯವೈಖರಿ, ವಿವಿಧ ಅಂಶಗಳು, ಪತ್ರಿಕೆಯ ಭಾಷೆ ಹೀಗೆ ಹತ್ತು ಹಲವು ಅಂಶಗಳ ಬಗೆಗಿನ ಅಧ್ಯಯನಗಳು ನಡೆದಿವೆ. ಹಾಗೂ ನಡೆಯುತ್ತಿವೆ.

ಇಡೀ ಪತ್ರಿಕಾ ಭಾಷೆಯ ಕುರಿತಾದಂತಹ ಅಧ್ಯಯನಗಳಲ್ಲಿ ಬಹುಮುಖ್ಯವಾಗಿ ಗಮನಿಸುವ ಅಧ್ಯಯನವೆಂದರೆ, ಲೀಲಾವತಿ ಎಂ.ಎಸ್.ರವರ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ 'ಲಾಂಗ್ವೇಜ್ ಆಫ್ ಹೆಡ್‌ಲೈನ್ಸ್ ಇನ್ ಕನ್ನಡ ಡೈಲೀಸ್' (೧೯೯೬, ಮೈಸೂರು ವಿಶ್ವವಿದ್ಯಾಲಯ, ಮೈಸೂರು) ಕನ್ನಡ ದಿನಪತ್ರಿಕೆಗಳಲ್ಲಿನ ತಲೆಬರಹಗಳ ವಿವಿಧ ಅಂಶಗಳನ್ನು ಆಧರಿಸಿ ಅಧ್ಯಯನ ನಡೆಸಲಾಗಿದೆ. ತಲೆಬರಹಗಳಲ್ಲಿ ನಾಮಪದಯುಕ್ತ ತಲೆಬರಹ, ಕ್ರಿಯಾಪದಯುಕ್ತ ತಲೆಬರಹ,

ಹಲವು ಅಂಶಗಳ ತಲೆಬರಹ, ಬಹುಸಾಲಿನ ತಲೆಬರಹ, ತಲೆಬರಹಗಳಲ್ಲಿ ಲೇಖನ ಚಿಹ್ನೆಗಳ ಬಳಕೆ, ಆಲಂಕಾರಿಕ ಮಾತುಗಳುಳ್ಳ ತಲೆಬರಹ - ಹೀಗೆ ತಲೆಬರಹದ ವಿವಿಧ ಅಂಶಗಳನ್ನು ಆಧರಿಸಿ ಅಧ್ಯಯನವನ್ನು ಮಾಡಲಾಗಿದೆ. ಇದನ್ನು ಕನ್ನಡ ಪತ್ರಿಕಾ ಲೋಕದ ಭಾಷೆಯ ಕುರಿತಾಗಿ ನಡೆದಿರುವ ಪ್ರಮುಖ ಅಧ್ಯಯನವೆಂದು ಹೇಳಬಹುದು.

ವಿನೋದ್ ದುಬೆಯವರು (೧೯೮೯) 'ನ್ಯೂಸ್ ಪೇಪರ್ ಇಂಗ್ಲಿಶೊ ಇನ್ ಇಂಡಿಯಾ' ಎಂಬ ಅಧ್ಯಯನವನ್ನು ಮಾಡಿದ್ದಾರೆ. ಇವಾನ್ಸ್ ಎಚ್. ರವರು (೧೯೭೪) 'ನ್ಯೂಸ್ ಹೆಡ್‌ಲೈನ್ಸ್' ಕುರಿತು ಅಧ್ಯಯನ ನಡೆಸಿದ್ದಾರೆ. ಟಿ. ಮಣಿಯನ್ (೧೯೭೯) ರವರು 'ದಿ ಲಾಂಗ್ವೇಜ್ ಆಫ್ ತಮಿಳ್ ಡೈಲೀಸ್' ಎಂಬ ಪಿಎಚ್.ಡಿ. ಅಧ್ಯಯನವನ್ನು ಮಾಡಿದ್ದಾರೆ. ಪತ್ರಿಕೆಯ ಭಾಷೆಯ ಕುರಿತಾದಂತಹ ಅಧ್ಯಯನಗಳು ಇನ್ನೂ ನಡೆಯುತ್ತಿವೆ.

ಭಾರತೀಯ ಪತ್ರಿಕೋದ್ಯಮ ಕುರಿತಂತೆ ಹಿರಿಯ ವಿದ್ವಾಂಸರಾದ ಡಿ.ವಿ. ಗುಂಡಪ್ಪನವರು ಬರೆದ 'ವೃತ್ತಪತ್ರಿಕೆ' (೧೯೨೮) ಎಂಬ ಪುಸ್ತಕದಲ್ಲಿ ಡಿ.ವಿ.ಜಿಯವರು ಕ್ರಿ.ಶ. ೧೯೨೮ ರಲ್ಲೆ ವೃತ್ತಪತ್ರಿಕೆಯ ಸ್ವರೂಪ, ಅದರ ಮಹತ್ವ ಹಾಗೂ ಕರ್ತವ್ಯಗಳನ್ನು ವಿವೇಚನೆ ಮಾಡಿರುವುದರ ಮೂಲಕ ಅಂತಹ ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಹಗಲಿರುಳು ಶ್ರಮಿಸಿರುವ ಅನುಭವವನ್ನು ಹೇಳಿಕೊಂಡಿದ್ದಾರೆ. ಈ ಪುಸ್ತಕದಲ್ಲಿ ಮುಖ್ಯವಾಗಿ ಗಮನಿಸುವ ಅಂಶವೆಂದರೆ, ಕನ್ನಡ ಭಾಷಾಭಿವೃದ್ಧಿಯ ಚಿಂತನೆಗಳನ್ನು ಅವರ ಅನುಭವದ ನೆಲೆಯಲ್ಲಿ ವಿವೇಚಿಸಲಾಗಿದೆ. ಪತ್ರಿಕೆಯ ಭಾಷೆ ಸರಳತೆ, ಸ್ಪಷ್ಟತೆ ಹಾಗೂ ನಿಷ್ಕರ್ಷೆಯನ್ನು (ಹೊಸ ಬೆಳವಣಿಗೆ) ಹೊಂದಿರಬೇಕೆಂದು ತಿಳಿಸಲಾಗಿದೆ. ಕನ್ನಡ ಭಾಷೆಯ ಬೆಳವಣಿಗೆಗೆ ಪತ್ರಿಕೆಗಳು ಪೂರಕವಾಗಿರಬೇಕು. ಅದು ಜನಸಾಮಾನ್ಯರ ಭಾಷೆಗೆ ಹತ್ತಿರವಾಗಿರಬೇಕು. ಅದರ ಶೈಲಿ, ವಿವರಣೆ ಕುರಿತಾದಂತಹ ಸಲಹೆ, ಹಾಗೆಯೇ ಪತ್ರಿಕಾ ವೃತ್ತಿ, ಪತ್ರಿಕೋದ್ಯಮಿಯ ಆದರ್ಶ ಕರ್ತವ್ಯಗಳನ್ನು ಕುರಿತು ಸಲಹೆಗಳನ್ನು ನೀಡಿದ್ದಾರೆ.

ವೈ.ಎನ್. ಕೃಷ್ಣಮೂರ್ತಿಯವರು 'ಇದು ಸುದ್ದಿ ಇದು ಸುದ್ದಿ' (೧೯೮೫) ಎಂಬ ಪುಸ್ತಕದಲ್ಲಿ ವೃತ್ತಪತ್ರಿಕೆಗಳ ಬಗ್ಗೆ, ಅದರ ಸ್ವರೂಪ ಇತ್ಯಾದಿ ಅಂಶಗಳ ಬಗ್ಗೆ ಚರ್ಚಿಸಿದ್ದಾರೆ. ಸುದ್ದಿ ಎಂದರೇನು? ಯಾವುದು ಸುದ್ದಿ? ಸುದ್ದಿಯ ಮಹತ್ವ ಹೇಗಿರಬೇಕು? ಎಂಬುದನ್ನು ಕುರಿತು ವಿವೇಚಿಸಲಾಗಿದೆ. ಹಾಗೆಯೇ ವೃತ್ತಪತ್ರಿಕೆಗಳ ಭಾಷಾ ಸ್ವರೂಪ, ತಲೆಬರಹ (heading), ವರದಿ (Reporting)ಗಳಲ್ಲಿ ಕನ್ನಡ ಭಾಷೆಯ ಬಳಕೆಯನ್ನು ಕುರಿತು ತಿಳಿಸಲಾಗಿದೆ. ಈ ವಿಷಯಗಳಲ್ಲಿ ಅಲ್ಲಿನ ಪದ ಬಳಕೆ

ಸರಳವಾಗಿರಬೇಕು. ಪ್ರಾಸಬದ್ಧವಾದ ಭಾಷಾ ಬಳಕೆ ಹೊಂದಿರಬೇಕು. ಪತ್ರಿಕೆಗಳು ಭಾಷಾಭಿವೃದ್ಧಿಗೆ ಪೂರಕಗಳಾಗಿರಬೇಕೆಂದು ಸಲಹೆ ನೀಡಲಾಗಿದೆ.

ಎಂ.ವಿ. ಕಾಮತ್‌ರವರ 'ವೃತ್ತಪತ್ರಿಕೋದ್ಯಮ' (೧೯೯೦) ಎಂಬ ಪುಸ್ತಕವೂ ಕೂಡ ಉಪಯುಕ್ತ ಮಾಹಿತಿಯನ್ನು ನೀಡುತ್ತದೆ. ಪತ್ರಿಕೆಗಳನ್ನು ಪ್ರಸಾರಗೊಳಿಸುವಲ್ಲಿ ಅತಿ ಮುಖ್ಯವಾಗಿ ಬೇಕಾಗುವ ವರದಿಗಾರ, ಉಪಸಂಪಾದಕ, ಸಂಪಾದಕ ಹಾಗೂ ಇನ್ನಿತರ ಉಪಯುಕ್ತ ಮಾಹಿತಿಯನ್ನು ಒದಗಿಸಲಾಗಿದೆ. ಪ್ರತಿಯೊಂದು ಸುದ್ದಿ ಸಂಪಾದನೆಗೆ ಅದರದೇ ಆದ ಭಾಷಾ ಬಳಕೆ ಅನಿವಾರ್ಯ. ಅದು ವಿಷಯದಿಂದ ವಿಷಯಗಳಿಗೆ ಭಿನ್ನವಾಗಿರುತ್ತದೆ ಎಂಬುದನ್ನು ನಿಯತಕಾಲಿಕೆಗಳ ಬರವಣಿಗೆಯ ಕ್ರಮ, ಶೀರ್ಷಿಕೆಗಳ ಬರಹದ ಬಗ್ಗೆ ಕನ್ನಡ ಭಾಷೆಯನ್ನು ಹೇಗೆ ಬಳಸಿ, ಬೆಳೆಸಬೇಕೆಂದು ತಿಳಿಸಿದ್ದಾರೆ.

ಪತ್ರಿಕೆಯ ಪರಿಸರದಲ್ಲಿ ಕನ್ನಡ ಭಾಷೆಯು ಹೇಗೆ ಬಳಕೆಯಾಗಬೇಕು, ಹಾಗೆಯೇ ಅದರ ಬೆಳವಣಿಗೆಯನ್ನು ಹೇಗೆ ಕಂಡುಕೊಳ್ಳಬೇಕು ಎಂಬುದನ್ನು ಪ್ರಜಾವಾಣಿ ಸಂಪಾದಕರಾದ ಶ್ರೀ ಪದ್ಮರಾಜ ದಂಡಾವತಿಯವರ 'ಪತ್ರಿಕಾಭಾಷೆ' (೨೦೦೩) ಎನ್ನುವ ಪುಸ್ತಕವು ಉಪಯುಕ್ತ ಮಾಹಿತಿಯನ್ನು ನೀಡುತ್ತದೆ. ಪತ್ರಿಕಾ ಮಾಧ್ಯಮದಲ್ಲಿ ಪತ್ರಕರ್ತನಿಗೆ ಭಾಷೆಯು ಮುಖ್ಯ ಸರಕು, ನಂತರ ವಿಷಯ ವಿವರಣೆಗೆ ಮಹತ್ವ ಕೊಡಬೇಕೆಂದು ತಿಳಿಸಿದ್ದಾರೆ. ಪತ್ರಕರ್ತನಾಗಬಯಸುವವರಿಗೆ ಮೊದಲು ಭಾಷಾಜ್ಞಾನ ಮುಖ್ಯ ಎಂಬ ವಿಚಾರವನ್ನು ತಿಳಿಸಲಾಗಿದೆ.

ಪತ್ರಿಕೆಯ ಭಾಷಾ ಸ್ಪಷ್ಟತೆ, ಪದರಚನೆ, ಹೊಸ ಪದಗಳ ಸೃಷ್ಟಿ, ಸಂಕ್ಷಿಪ್ತ ರೂಪಗಳ ಬಳಕೆ ಇತ್ಯಾದಿ ವಿಷಯಗಳಿಂದ ಪತ್ರಿಕಾ ಭಾಷೆ ಕುರಿತು ಸೂಕ್ತ ಸಲಹೆಗಳನ್ನು ನೀಡಲಾಗಿದೆ. ಸಮರ್ಥವಾದ, ಸತ್ವಯುತವಾದ ಹಾಗೂ ಸುಂದರವಾದ ಭಾಷೆ, ಪತ್ರಿಕೆಯ ಭಾಷೆ ಆಗಬೇಕು. ಕನ್ನಡ ಭಾಷೆ ಆ ನಿಟ್ಟಿನಲ್ಲಿ ಬೆಳವಣಿಗೆ ಹೊಂದಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಪತ್ರಿಕಾ ಪರಿಸರದಲ್ಲಿ ಕನ್ನಡ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಇದೊಂದು ಉಪಯುಕ್ತ ಪುಸ್ತಕವಾಗಿದೆ.

ಹಾಗೆಯೇ ಇನ್ನೊಂದು ಮುಖ್ಯವಾಗಿ ಗಮನಿಸುವಂತಹ ಪುಸ್ತಕವೆಂದರೆ, ಡಾ. ದೇವೇಂದ್ರ ಕುಮಾರ ಹಕಾರಿಯವರ 'ವೃತ್ತಪತ್ರಿಕೆ; ವರದಿ ಲೇಖನ' (೧೯೮೫) ಎಂಬ ಪುಸ್ತಕವು ಪತ್ರಿಕಾ ಪರಿಸರದಲ್ಲಿ ಪತ್ರಿಕೆಗಳಿಗೆ ಭಾಷೆ, ಶೈಲಿ ಮುಖ್ಯ ಎಂಬ ವಿಚಾರವನ್ನು ನಿರೂಪಿಸಲಾಗಿದೆ. ವರದಿಗಾರನಿಗೆ ಭಾಷಾಜ್ಞಾನದ ಪರಿಚಯ ಅತಿ ಮುಖ್ಯ. ವ್ಯಾಕರಣಬದ್ಧ ಬಳಕೆ, ಪದಗಳ ಬಗ್ಗೆ ತಿಳುವಳಿಕೆ ಇರಬೇಕು. ಆಯಾ ವಲಯದ ಪಾರಿಭಾಷಿಕಗಳ ತಿಳುವಳಿಕೆ ವರದಿಗಾರನಿಗೆ ಮುಖ್ಯವಾಗಿ ತಿಳಿದಿರಬೇಕು ಎಂಬ ಸಲಹೆಗಳನ್ನು ನೀಡಲಾಗಿದೆ.

ಪಾರಿಭಾಷಿಕ ಕೋಶಗಳ ಬಗ್ಗೆ ಸೂಕ್ತ ತಿಳುವಳಿಕೆಯನ್ನು ನೀಡುವಂತಹ ಕೃತಿ ಕೆ.ಆರ್. ಇಕ್ಬಾಲ್ ಅಹ್ಮದ್‌ರವರ 'ಪತ್ರಿಕೋದ್ಯಮದ ಮೂಲತತ್ವಗಳು' (೨೦೦೩) ಎಂಬ ಪುಸ್ತಕ ಸುದ್ದಿ ಸಂಗ್ರಹ, ಅದರ ಪಾತ್ರ, ಬಳಕೆ ಮುಂತಾದ ವಿಚಾರಗಳನ್ನು ಇಲ್ಲಿ ಅಧ್ಯಯನಿಸಿದ್ದಾರೆ.

ವರದಿಗಾರಿಕೆ, ಸುದ್ದಿ, ಲೀಡ್ ಅಂಶಗಳನ್ನು ಕುರಿತ ಶ್ರೀ ಪದ್ಮರಾಜ ದಂಡಾವತಿಯವರ 'ರಿಪೋರ್ಟಿಂಗ್' (೨೦೦೪) ಎಂಬ ಪುಸ್ತಕವೂ ಸಹ ಉಪಯುಕ್ತ ಮಾಹಿತಿಯನ್ನು ನೀಡುತ್ತದೆ. ಸುದ್ದಿ, ಲೀಡ್, ತಲೆಬರಹಗಳಲ್ಲಿ ಪದಬಳಕೆ, ಭಾಷಾಬಳಕೆಯ ಮುಖ್ಯ ವಿಚಾರಗಳನ್ನು ಚರ್ಚಿಸಲಾಗಿದೆ.

ಅದೇ ರೀತಿಯಾಗಿ ವಿವಿಧ ವಲಯದ ಪಾರಿಭಾಷಿಕ ಪದಗಳ ಉಪಯುಕ್ತ ಪುಸ್ತಕವೆಂದರೆ 'ಮಾಧ್ಯಮ ಪಾರಿಭಾಷಿಕ' (೧೯೯೨, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು) ಇದೊಂದು ಪಾರಿಭಾಷಿಕ ಪದಗಳ ಕೈಪಿಡಿಯಾಗಿದೆ. ಕಾನೂನು, ನ್ಯಾಯಾಂಗ, ವಿದ್ಯುನ್ಮಾನ ಮಾಧ್ಯಮ, ಗಣಕಯಂತ್ರ, ಕುದುರೆಜೂಜು, ಕ್ರೀಡೆ ಈ ಕ್ಷೇತ್ರಗಳಲ್ಲಿ ಬಳಸಲಾದ ಪಾರಿಭಾಷಿಕ ಪದಗಳ ಸಂಗ್ರಹದ ದೃಷ್ಟಿಯಿಂದ ಹಾಗೆಯೇ ಅರ್ಥೈಸುವ ದೃಷ್ಟಿಯಿಂದ ಮಹತ್ವದ್ದಾಗಿದೆ.

ಪತ್ರಿಕಾ ವಲಯದಲ್ಲಿ ಕನ್ನಡ ಭಾಷೆ ಮೃದ್ಧವಾಗಿ ಬಳಕೆಯಾಗುತ್ತಿದೆ. ಅದು ಹೊಸ ಹೊಸ ಪ್ರಯೋಗವನ್ನು, ಪದ ಸೃಷ್ಟಿಗಳನ್ನು ತಂತಾನೆ ಬಳಕೆ ಮಾಡುತ್ತದೆ ಎಂಬ ವಿಚಾರವನ್ನು ಕುರಿತ ಡಾ.ಕೆ.ವಿ.ನಾರಾಯಣರವರು ಸಂಪಾದಿಸಿದ 'ದಿನ ದಿನ-೧' (೧೯೯೭) ಹಾಗೂ ಡಾ. ಸಾಂಬಮೂರ್ತಿ ಯವರು ಸಂಪಾದಿಸಿದ 'ದಿನ ದಿನ-೨' (೨೦೦೧) ಹಾಗೂ ಡಾ.ಪಿ. ಮಹಾದೇವಯ್ಯನವರು ಸಂಪಾದಿಸಿದ 'ದಿನ ದಿನ-೩' (೨೦೦೬) ಕೃತಿಗಳು ಪತ್ರಿಕಾ ಪರಿಸರದಲ್ಲಿ ಹೊಸ ಪದಗಳ ಸೃಷ್ಟಿ, ಹಾಗೂ ಅದರ ಬಳಕೆಯ ವಿಧಾನಗಳನ್ನು ಕುರಿತು ವಿವೇಚಿಸಿರುವ ಸೂಕ್ತ ಪುಸ್ತಕಗಳಾಗಿವೆ.

ದಿನಪತ್ರಿಕೆಗಳ ಆಕರ್ಷಕ ಭಾಷಾ ಬಳಕೆಯ ತಲೆಬರಹಗಳನ್ನು ಕುರಿತು ಚರ್ಚಿಸಿದ ಹಿರಿಯ ಸಂಪಾದಕರಾದ ಶ್ರೀ ವಿಶ್ವೇಶ್ವರಭಟ್‌ರವರ 'ತಲೆಬರಹ' (೨೦೦೧) ಎಂಬ ಪುಸ್ತಕವು ತಲೆಬರಹದ ಬಗ್ಗೆ ವಿವೇಚನೆಯನ್ನು ಮಾಡಲಾಗಿದ್ದು, ತಲೆಬರಹಗಳಲ್ಲಿನ ಭಾಷೆ ಒಂದು ಸಮ್ಮೋಹನಗೊಳಿಸುವ ಸೂಜಿಗಲ್ಲಿನಂತೆ ಇರಬೇಕು. ತಲೆಬರಹ ಸುದ್ದಿಯ ಸಾರವನ್ನು ಅಭಿವ್ಯಕ್ತಿಸುತ್ತಿರಬೇಕು ಎಂಬಂತಹ ವಿಚಾರಗಳನ್ನು ನೀಡಲಾಗಿದೆ.

ಪ್ರಕಟಗೊಂಡ ಪಿಎಚ್.ಡಿ. ಮಹಾಪ್ರಬಂಧದ ರಚನೆಕಾರರಾದ ಡಾ.ಟಿ.ಸಿ. ಪೂರ್ಣಿಮಾರವರ 'ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ' (೨೦೦೧) ಎಂಬ ಪುಸ್ತಕವೂ ಸಹ ಸಮೂಹ ಮಾಧ್ಯಮಗಳಲ್ಲಿ ಕನ್ನಡ ಭಾಷೆಯ ಅಭಿವೃದ್ಧಿಯ ಮಹತ್ವಗಳನ್ನು ದಾಖಲಿಸಲಾಗಿದೆ. ಆಧುನಿಕ ಸಮೂಹ ಮಾಧ್ಯಮಗಳ ಪರಿಣಾಮದಿಂದ ಭಾಷೆಯಲ್ಲಿ ಟಂಕೀಕರಣ, ಭಾಷಾಂತರ, ಅನ್ಯ ಭಾಷಾ ಸ್ವೀಕರಣ, ಭಾಷಾಮಿಶ್ರಣದಿಂದ ಕನ್ನಡ ಭಾಷೆಯ ವಲಯ ವಿಸ್ತೀರ್ಣಗೊಳ್ಳುತ್ತಿದೆ ಎಂಬ ವಿಚಾರಗಳನ್ನು ತಿಳಿಸಲಾಗಿದೆ.

ಇವುಗಳಲ್ಲದೆ, ಸಮೂಹ ಸಂವಹನ ಕುರಿತ ಪರಿಚಯಾತ್ಮಕ ರೂಪದ ಪುಸ್ತಕಗಳು ಹಲವಾರಿದ್ದು ಅವುಗಳಲ್ಲಿ ಪತ್ರಿಕಾರಂಗದ ಮಾಹಿತಿಗಳು ಇವೆ. ಶ್ರೀನಿವಾಸ ಹಾವನೂರರು (೨೦೦೪) 'ಕನ್ನಡ ಪತ್ರಿಕಾ ಸೂಚಿ' ಎಂಬ ಗ್ರಂಥವನ್ನು ತಂದಿದ್ದು ಇದರಲ್ಲಿ ಕನ್ನಡ ಪತ್ರಿಕೆಗಳ ಹೆಸರುಗಳಿವೆ. ಇವು ಕಾಲಾನುಕ್ರಮ ರೂಪದಲ್ಲಿದ್ದು, ಇದಕ್ಕೆ ಸಂಬಂಧಿಸಿದಂತೆ ದೀರ್ಘವಾದ ಪ್ರಸ್ತಾವನೆಯೂ ಇದೆ.

ಹಾಗೆಯೇ ಪತ್ರಿಕೋದ್ಯಮದ ವಿವಿಧ ವಿಚಾರಗಳನ್ನು ಕುರಿತಾದ ಅನೇಕ ಗ್ರಂಥಗಳು ಬಂದಿವೆ. ಡಾ. ನಾಡಿಗ ಕೃಷ್ಣಮೂರ್ತಿಯವರ 'ಪತ್ರಿಕೋದ್ಯಮ' (೧೯೮೧), ಜೆ.ಎಂ. ರಾಜಶೇಖರರವರು ಸಂಪಾದಿಸಿರುವ 'ಪತ್ರಕರ್ತ-ಪತ್ರಿಕೋದ್ಯಮ' (೨೦೦೪), ಟಿ.ವಿ. ವೆಂಕಟರಮಣಯ್ಯನವರ 'ಪತ್ರಿಕೋದ್ಯಮ ವಾಙ್ಮಯ ಸೂಚಿ' (೧೯೮೮), ಡಾ.ಡಿ.ಬಿ. ನಾಯಕರ 'ಸಮೂಹ ಮಾಧ್ಯಮಗಳು ಮತ್ತು ಸಮಾಜ' (೨೦೦೩) ಇತ್ಯಾದಿ ಪುಸ್ತಕಗಳನ್ನು ಹೆಸರಿಸಬಹುದಾಗಿದೆ.

ಅಡಿಟಿಪ್ಪಣಿ

೧. ಡಿ.ಬಿ. ನಾಯಕ ಸಂ. ೨೦೦೩, **ಸಮೂಹ ಮಾಧ್ಯಮಗಳು ಮತ್ತು ಸಮಾಜ**, ಪು.೩೦

೨. ಬಿ.ಎಸ್. ಚಂದ್ರಶೇಖರ್ ಸಂ. ೨೦೦೩, **ಸಮೂಹ ಮಾಧ್ಯಮಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೭೮

೩. ಡಿ.ಬಿ. ನಾಯಕ ಸಂ. ೨೦೦೩, **ಸಮೂಹ ಮಾಧ್ಯಮಗಳು ಮತ್ತು ಸಮಾಜ**, ಪು.೩೨

೪. ಕೆ.ವಿ. ನಾರಾಯಣ ಪ್ರ.ಸಂ. ೧೯೯೯, **ಕನ್ನಡ ಭಾಷಾಭಿವೃದ್ಧಿ ಸಾಧನೆ ಮತ್ತು ಮುನ್ನೋಟ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೨೬

✣ ✣ ✣

ಅಧ್ಯಾಯ ೩

ಕ್ರೀಡಾ ಪುಟದ ಭಾಷಾ ವೈವಿಧ್ಯ ಮತ್ತು ಮಹತ್ವ

ಅಧ್ಯಾಯ ೩

ಕ್ರೀಡಾ ಪುಟದ ಭಾಷಾ ವೈವಿಧ್ಯ ಮತ್ತು ಮಹತ್ವ

ಪ್ರತಿಯೊಂದು ಪ್ರಮುಖ ಕನ್ನಡ ದಿನಪತ್ರಿಕೆಗಳು ತಮ್ಮ ನಿರ್ದಿಷ್ಟ ಪುಟದಲ್ಲಿ ಕ್ರೀಡಾ ವಿಷಯಗಳ ಸುದ್ದಿಗಳನ್ನು ಪ್ರಸಾರಗೊಳಿಸುತ್ತಿವೆ. ವಿಶೇಷ ದಿನಗಳಲ್ಲಿ ನಡೆದ ಆಟಗಳ ಹೆಚ್ಚಿನ ಮಾಹಿತಿಯನ್ನು ನೀಡುವುದಕ್ಕೆ ಒಂದು ಕ್ರೀಡಾ ಪುರವಣಿಯನ್ನೂ ಸಹ ಹೊಂದಿರುತ್ತವೆ. ಇಂದು ಈ ಕ್ರೀಡಾಪುಟ ಆಟಗಳ ಸುದ್ದಿಗಳನ್ನು ಓದುಗರಿಗೆ ತಿಳಿಸುವುದರ ಮೂಲಕ ಆ ಕ್ಷೇತ್ರದ ವಿಶೇಷ ಮಾಹಿತಿಯನ್ನು ನೀಡುತ್ತಿದೆ.

ಕ್ರೀಡೆಗಳು ಮನುಷ್ಯನ ಬದುಕಿನ ಅವಿಭಾಜ್ಯ ಅಂಗ. ಇಂದಿನ ಜಗತ್ತಿನಲ್ಲಿ ಕ್ರೀಡೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗುತ್ತಿದೆ. ಕ್ರೀಡೆಗಳು ಮನುಷ್ಯನಿಗೆ ಶಾರೀರಿಕ, ಬೌದ್ಧಿಕ ಬೆಳವಣಿಗೆಯನ್ನು ಉಂಟುಮಾಡುತ್ತವೆ. ಹಾಗಾಗಿ ಈ ಕ್ರೀಡಾಕ್ಷೇತ್ರ ಬಹುಮಹತ್ವವನ್ನು ಪಡೆದುಕೊಂಡಿದೆ. ಇಂದಿನ ಕ್ರೀಡೆಗಳು ವ್ಯಕ್ತಿ-ವ್ಯಕ್ತಿಗಳ ಮಧ್ಯೆ, ದೇಶ-ದೇಶಗಳ ಮಧ್ಯೆ ಗೌರವಯುತವಾಗಿ ನಡೆಯುವ ಸ್ಪರ್ಧೆಗಳಾಗಿ ಕಂಡುಬರುತ್ತವೆ.

ಆಟಗಳನ್ನು ಒಳಾಂಗಣ ಆಟಗಳೆಂದೂ, ಹೊರಾಂಗಣ ಆಟಗಳೆಂದು ಕರೆಯಲಾಗುತ್ತದೆ. ಒಳಾಂಗಣ ಆಟಗಳು ಯಾವುದಾದರೂ ಕಟ್ಟಡದ ಒಳಗೆ ಆಡುವಂತವು. ಹೊರಾಂಗಣ ಆಟಗಳು ಮೈದಾನಗಳಲ್ಲಿ ಆಡುವಂತವು.

ಪ್ರಮುಖ ಆಟಗಳನ್ನು ಗುರುತಿಸುವಾಗ ಸಾಮೂಹಿಕ ಅಥವಾ ಸಾಂಘಿಕ ಮತ್ತು ವೈಯಕ್ತಿಕ ಎಂಬ ಎರಡು ಪ್ರಕಾರಗಳನ್ನು ಇಂದು ನೋಡಬಹುದು. ಕ್ರಿಕೆಟ್, ಹಾಕಿ, ವಾಲಿಬಾಲ್, ಫುಟ್‌ಬಾಲ್,

ಕೋ ಕೋ, ಕಬಡ್ಡಿ ಮುಂತಾದ ಆಟಗಳನ್ನು ಸಾಮೂಹಿಕ ಅಥವಾ ಸಾಂಘಿಕ ಆಟಗಳೆಂದೂ ಗುರುತಿಸಬಹುದು. ಟೆನಿಸ್, ಚೆಸ್, ಸ್ನೂಕರ್ ಹಾಗೆಯೇ ಒಳಾಂಗಣ ಆಟಗಳಿಗೆ ಸಂಬಂಧಿಸಿದ ಕ್ರೀಡೆಗಳನ್ನು ವೈಯಕ್ತಿಕ ಆಟಗಳೆಂದು ಗುರುತಿಸಬಹುದು. ಚೆಸ್, ಅಥ್ಲೆಟಿಕ್ಸ್, ಸ್ನೂಕರ್, ಬಿಲಿಯರ್ಡ್ಸ್ ಇತ್ಯಾದಿಗಳು ವೈಯಕ್ತಿಕ ಸ್ಪರ್ಧೆಯ ಆಟಗಳು, ಟೆನಿಸ್, ಬ್ಯಾಡ್ಮಿಂಟನ್, ಟೇಬಲ್ ಟೆನಿಸ್ ಎರಡೂ ಬಗೆಯವು ಆಗಿವೆ.

ಇಂದು ಆಧುನಿಕ ಆಟಗಳು ಹೆಚ್ಚಿನ ಜನಪ್ರಿಯತೆಯನ್ನು ಕಂಡುಕೊಂಡು ಬೆಳೆಯುತ್ತಿವೆ. ಇಂದಿನ ಈ ಪ್ರಮುಖ ಆಟಗಳು ಒಂದು ವಿಶೇಷ ಸಂದರ್ಭದಲ್ಲಿ ನಡೆಯುತ್ತವೆ. ಇದಕ್ಕಾಗಿಯೇ ಸ್ಪರ್ಧೆಗಳನ್ನು ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಉದಾ. ರೋವರ್ ಕಪ್, ಫೆಡರೇಶನ್ ಕಪ್, ವಿಶ್ವಕಪ್, ರಣಜಿ ಟ್ರೋಫಿ ಇತ್ಯಾದಿ. ಈ ಆಟಗಳಿಗೆ ಅದರದೇ ಆದ ನಿಯಮಗಳಿದ್ದು, ವ್ಯವಸ್ಥಿತ ರೀತಿಯಲ್ಲಿ ಆಡಲಾಗುತ್ತದೆ.

ಜಗತ್ತಿನ ಸಾಂಸ್ಕೃತಿಕ ಸ್ಪರ್ಧೆಗಳ ಮಾದರಿಯಲ್ಲಿ ನಡೆಯುವ ಆಟಗಳ ಮಾಹಿತಿ ಸಮೂಹ ಮಾಧ್ಯಮಗಳಲ್ಲಿ ಪ್ರಸಾರಗೊಳ್ಳುತ್ತಿವೆ. ಇವುಗಳಲ್ಲಿ ರೇಡಿಯೋ, ದೂರದರ್ಶನ ಹಾಗೂ ಪತ್ರಿಕೆಗಳು ಪ್ರಮುಖವಾದವುಗಳು. ಬೌದ್ಧಿಕ ಜ್ಞಾನವಲಯದ ಕ್ಷೇತ್ರವಾದ ಪತ್ರಿಕೆಗಳು ಜಗತ್ತಿನಲ್ಲಿ ಮಾನ್ಯತೆ ಪಡೆದ ಕ್ರೀಡೆಗಳ ಮಾಹಿತಿಯನ್ನು, ಆ ಕ್ಷೇತ್ರದ ಹೆಚ್ಚಿನ ವಿಷಯಗಳನ್ನು ದಿನಪತ್ರಿಕೆಯ ಕೊನೆಯ ಪುಟದಲ್ಲಿ ಒದಗಿಸುತ್ತಿದೆ.

ಪತ್ರಿಕೆಗಳು ಆಟಗಳಿಗೆ ಸಂಬಂಧಿಸಿದ ಸುದ್ದಿಗಳ ವರದಿ ಪ್ರಕಟಿಸುತ್ತದೆ. ಇಂದು ಈ ಪುಟ ವಿಶೇಷ ಆಕರ್ಷಕ ಆಟಗಳ ವರ್ಣರಂಜಿತ ಛಾಯಚಿತ್ರಗಳನ್ನು ಹೊಂದಿ ಪ್ರಸಾರಗೊಳ್ಳುತ್ತಿದೆ. ನಡೆದ ಅಥವಾ ಆಗಿಹೋದ ಆಟಗಳ ಸುದ್ದಿಗಳು, ಇನ್ನು ಕೆಲವು ನಡೆಯುತ್ತಿರುವ ಆಟಗಳ ಸುದ್ದಿಗಳು, ಇನ್ನು ಕೆಲವು ಮುಂದೆ ನಡೆಯಲಿರುವ ಆಟಗಳ ಸುದ್ದಿಗಳು ಇಲ್ಲಿ ಸ್ಥಾನ ಪಡೆಯುತ್ತವೆ. ಇವುಗಳ ಜೊತೆಗೆ ಆಟಗಳಿಗೆ ಸಂಬಂಧಿಸಿದ ಸಂಘ ಸಂಸ್ಥೆಗಳ ಕಾರ್ಯ ಚಟುವಟಿಕೆಯಂತಹ ಮಾಹಿತಿಯೂ ಇರುತ್ತವೆ. ಹಾಗೆಯೇ ಕೆಲವು ಕ್ರೀಡಾ ವಿಮರ್ಶಕರ ಅಂಕಣ ಬರಹಗಳೂ ಸಹ ಇರುತ್ತವೆ. ಆಟಗಳ ಸುದ್ದಿಗಳನ್ನು ನೀಡುವಾಗ ಪತ್ರಿಕೆಯ ಇತರ ಸುದ್ದಿಗಳಂತೆ ಇಲ್ಲಿಯೂ ಸಹ ತಲೆಬರಹ (Headlines), ಆರಂಭಿಕ ಟಿಪ್ಪಣಿ (Lead), ಮತ್ತು ಸುದ್ದಿಯ ವಿವರಣೆ (Reporting) ಇರುತ್ತದೆ.

ಕ್ರೀಡಾ ಪುಟದಲ್ಲಿ ಬಳಕೆಯಾಗುವ ತಲೆಬರಹಗಳಲ್ಲಿ ಬಹು ಆಕರ್ಷಕ ರೀತಿಯ ಭಾಷೆಯನ್ನು ಬಳಸಲಾಗುತ್ತದೆ. ಆರಂಭಿಕ ಟಿಪ್ಪಣಿಯು ಒಟ್ಟು ಸುದ್ದಿಯ ಪ್ರಮುಖ ಸಾರವಾಗಿದ್ದು, ವರದಿಯಲ್ಲಿ ಆ ವಿಷಯದ ಹೆಚ್ಚಿನ ಮಾಹಿತಿಯು ಒಳಗೊಂಡಿರುತ್ತದೆ.

ಇಲ್ಲಿಯ ಭಾಷೆಯನ್ನು ಗಮನಿಸಿದಾಗ, ಇದರದ್ದೇ ಆದ ಒಂದು ಪ್ರಭೇದವಿದೆ ಎಂದು ಹೇಳಬಹುದು. ಪತ್ರಿಕೆಯ ಇನ್ನುಳಿದ ಪುಟದ ಭಾಷೆಗಿಂತ ಈ ಕ್ರೀಡಾಪುಟದ ಭಾಷೆ ಹೊಸ ಸ್ವರೂಪ ಹೊಂದಿ ಬಳಕೆಯಾಗುತ್ತದೆ. ಉದಾ. ಇಲ್ಲಿ ಆಟಗಳಿಗೆ ಸಂಬಂಧಿಸಿದ ಪದಗಳ ಬಳಕೆಯಲ್ಲಿ ಇಂಗ್ಲಿಶ್ ಭಾಷೆಯ ಪ್ರಭಾವವನ್ನು ಹೆಚ್ಚಾಗಿ ಕಾಣಬಹುದಾಗಿದೆ.

ಬಹುತೇಕ ಆಟದ ಹಾಗೂ ಅದರ ಸಂಬಂಧಿ ಪದಗಳು ಇಂಗ್ಲಿಶ್‌ನಲ್ಲಿಯೇ ಇದ್ದು, ಅವೆಲ್ಲವೂ ವ್ಯಂಜನಾಂತವಾಗಿಯೇ ಬಳಕೆಯಾಗುತ್ತವೆ. ಕೆಲವು ದೇಶೀ ಪದಗಳಿಗೆ ಇಂಗ್ಲಿಶ್ ರೂಪಗಳ ಬಳಕೆ ಇದೆ. (ಉದಾ. ಚದುರಂಗ-ಚೆಸ್) ಅಂತೆಯೇ ಇಂಗ್ಲಿಶ್ ಪದಗಳಿಗೆ ಕನ್ನಡ ಸಂವಾದಿ ಪದಗಳನ್ನು ರೂಪಿಸಲಾಗಿದೆ. (ಉದಾ. ಪಂದ್ಯಪುರುಷೋತ್ತಮ, ಉಪಾಂತ್ಯ, ಕ್ಷೇತ್ರ ರಕ್ಷಣೆ, ಅಂಗಣ ಇತ್ಯಾದಿ) ಇಲ್ಲಿಯ ಸಂಖ್ಯಾವಾಚಿಗಳು ವಿಶೇಷ ರೀತಿಯಲ್ಲಿ ಬಳಕೆಯಾಗುತ್ತದೆ. ಹಾಗೆಯೇ ಕ್ರಿಯಾಪದಗಳು, ಗುಣವಾಚಕಗಳು, ಗಾದೆ, ನುಡಿಗಟ್ಟು, ಮತ್ತು ಹೆಸರುಗಳ ಸಂಕ್ಷಿಪ್ತ ಪದಗಳು ಬಳಕೆಯಾಗುತ್ತಿರುವುದನ್ನು ಗುರುತಿಸಬಹುದಾಗಿದೆ.

ಸ್ಪರ್ಧೆಗಳ ಫಲಿತಾಂಶವನ್ನು ಅಂಕಗಳ ಆಧಾರದ ಮೇಲೆ ನಿರ್ಧಾರಿಸಲಾಗುವುದರಿಂದ ಸಂಖ್ಯಾವಾಚಕಗಳು ಹೇರಳವಾಗಿ ಬಳಕೆಯಾಗುತ್ತವೆ. ಕ್ರೀಡೆಗಳ ಅಂಕಿ-ಸಂಖ್ಯೆಗಳನ್ನು ವರದಿ ಮಾಡುವಲ್ಲಿ ಹಾಗೂ ನಿರ್ದಿಷ್ಟ ಮೊತ್ತವನ್ನು ಹೇಳುವ ಈ ಸಂಖ್ಯಾವಾಚಕಗಳು ಒಂದು ವಿಶೇಷ ಬಗೆಯಲ್ಲಿ ಇರುವುದನ್ನು ಗಮನಿಸಬಹುದು. ಹಾಗೆಯೇ ಗುಣಪದಗಳ ಬಳಕೆಯನ್ನು ನೋಡಬಹುದು. (ಉದಾ. ಹೀನಾಯ ಸೋಲು, ವೀರೋಚಿತ ಜಯ ಇತ್ಯಾದಿ) ಹಾಗೆಯೇ ಕ್ರಿಯಾಪದಗಳು ವಿಶೇಷ ರೀತಿಯಲ್ಲಿ ಬಳಕೆಯಾಗುತ್ತಿರುವುದು ವಿಶೇಷವಾಗಿದೆ. ಉದಾ. ಮಣ್ಣುಮುಕ್ಕು, ನೆಲಕಚ್ಚಿ ಬಾರಿಸು, ಕ್ಯಾಚ್ ಹಿಡಿ ಇತ್ಯಾದಿ ಪದಗಳನ್ನು ಗುರುತಿಸಬಹುದು.

ಹಾಗೆಯೇ ಇಲ್ಲಿ ಬಳಕೆಯಾಗುವ ಸ್ಥಳ, ವ್ಯಕ್ತಿ, ಆಟಗಳ ಹೆಸರುಗಳೂ ಸಹ ವಿಶೇಷ ರೀತಿಯಲ್ಲಿ ಬಳಕೆಯಾಗುತ್ತಿವೆ. ಉದಾ. 'ಸೌರವ್‌ಗಂಗೂಲಿ' ಎಂಬ ಹೆಸರನ್ನು 'ಸೌರವ್' ಅಥವಾ 'ಗಂಗೂಲಿ' ಎಂದೂ, 'ರಾಹುಲ್‌ದ್ರಾವಿಡ್' ಎಂಬ ಹೆಸರನ್ನು 'ದ್ರಾವಿಡ್' ಹಾಗೂ 'ರಾಹುಲ್'

ಎಂದೂ, 'ಅಂಜುಬೇಬಿಜಾರ್ಜ್' ಎಂಬ ಹೆಸರನ್ನು 'ಅಂಜು' ಎಂತಲೂ ಬಳಕೆಯಾಗುತ್ತವೆ. ಹಾಗೆಯೇ ಸ್ಥಳಗಳೂ ಸಹ ಪಾಕಿಸ್ತಾನ-ಪಾಕ್, ವೆಸ್ಟ್‌ಇಂಡೀಸ್-ವಿಂಡೀಸ್ ಎಂದೂ, ಹಾಗೆಯೇ ಆಟಗಳ ಹೆಸರುಗಳೂ ಸಹ ಭಾಷಾ ವೈವಿಧ್ಯಕ್ಕೆ ಕಾರಣವಾಗಿವೆ. ಈ ಮೇಲೆ ತಿಳಿಸಿದ ಸಂಕ್ಷಿಪ್ತ ನಾಮವಾಚಿಗಳು ಇಂದಿನ ಎಲ್ಲ ಪತ್ರಿಕೆಗಳಲ್ಲಿ ಕಂಡುಬರುವುದು ವಿಶೇಷವಾಗಿದೆ.

ಒಟ್ಟಾರೆಯಾಗಿ ದಿನಪತ್ರಿಕೆಯ ಕ್ರೀಡಾಪುಟದ ಭಾಷೆ ಮುಖ್ಯಪುಟದ ಭಾಷೆಗಿಂತ ಭಿನ್ನವಾಗಿರುವುದು ಕಂಡುಬರುತ್ತದೆ. ಓದುಗರಿಗೆ ಕ್ರೀಡಾ ವಿಷಯಗಳ ಮಾಹಿತಿಯನ್ನು ನೀಡುವುದರ ಜೊತೆಗೆ ಕನ್ನಡ ಭಾಷೆಯ ಬೆಳವಣಿಗೆಗೆ ಇದು ಕಾರಣವಾಗಿದೆ.

ಕ್ರೀಡಾ ಪುಟದಲ್ಲಿನ ಭಾಷಾ ವೈವಿಧ್ಯವನ್ನು ಆ ಪುಟದಲ್ಲಿ ಬಳಕೆಯಾಗುವ ೧. ತಲೆಬರಹ (Headlines) ೨. ಆರಂಭಿಕ ಟಿಪ್ಪಣಿ (Lead) ೩. ಸುದ್ದಿಯ ವಿವರ (Report)ಗಳಲ್ಲಿ ಕಾಣಬಹುದು.

೧. ತಲೆಬರಹಗಳಲ್ಲಿ :

ತಲೆಬರಹ ಎಂದರೆ 'ಪತ್ರಿಕೆಯ ವರದಿ ಲೇಖನಗಳ ಮೇಲ್ಭಾಗದಲ್ಲಿರುವ ಶೀರ್ಷಿಕೆಗಳನ್ನು ತಲೆಬರಹಗಳು' ಎಂದು ಕರೆಯುತ್ತಾರೆ. ಯಾವುದೇ ಒಂದು ಪತ್ರಿಕೆಗೆ ಉತ್ತಮ ಆಕರ್ಷಕ ಭಾಷಾ ಬಳಕೆಯ ತಲೆಬರಹಗಳು ಅವಶ್ಯಕವಾಗಿವೆ. 'ಪತ್ರಿಕೆಯ ಜೀವಾಳವೇ ಈ ತಲೆಬರಹ'ಗಳೆಂದರೆ ತಪ್ಪಾಗಲಾರದು. ವೈ.ಎನ್. ಕೃಷ್ಣಮೂರ್ತಿಯವರು (೧೯೮೫) "ಸುದ್ದಿಯ ಸಾರವನ್ನು ತಲೆಬರಹ ಹೇಳಬೇಕು. ತಲೆಬರಹ ಚಿಕ್ಕದಾಗಿರಬೇಕು, ಆಕರ್ಷಕವಾಗಿರಬೇಕು, ಕುತೂಹಲ ಕೆರಳಿಸುವಂತಿರಬೇಕು. ಅದು ಸುದ್ದಿಯ ಕೈಮರವಾಗಿರಬೇಕು"[೭] ಎಂದು ಹೇಳಿದ್ದಾರೆ. ಅಂದರೆ ಸೂಕ್ತ ವರದಿಗೆ ಸೂಕ್ತ ತಲೆಬರಹ ಕಲಶವಿದ್ದಂತೆ ಎಂಬುದು ಅರ್ಥವಾಗುತ್ತದೆ.

ಕ್ರೀಡಾಪುಟದಲ್ಲಿ ಇಂದು ಆಕರ್ಷಕ ಭಾಷಾ ಪ್ರಯೋಗದ ತಲೆಬರಹಗಳು ಕಂಡುಬರುತ್ತವೆ. ಉದಾ. ಸಿಂಹಗಳ ಮೇಲೆ ಕಾಂಗರೂಗಳ ಸವಾರಿ!, ಭಾರತದ ದಾಳಿಗೆ ಬರ್ಮುಡಾ ಗಡಗಡ!! ಇತ್ಯಾದಿ. ಅಲ್ಲದೆ ವಿಶೇಷವಾಗಿ ಲೇಖನ ಚಿಹ್ನೆಗಳನ್ನು ಹೊಂದಿದ ತಲೆಬರಹವು ಸಂದೇಹ, ಆಶ್ಚರ್ಯ ಮುಂತಾದವನ್ನು ಸೂಚಿಸಲು ಬಳಕೆಯಾಗುತ್ತದೆ. ಓದುಗರಿಗೆ ತಲೆಬರಹದಲ್ಲಿ ಬಳಸಲಾದ ಚಿಹ್ನೆಗಳೇ ಆ ಸುದ್ದಿಯ ಸಾರವನ್ನು ತಿಳಿಸುವಷ್ಟು ಶಕ್ತಿಯನ್ನು ಹೊಂದಿರುತ್ತವೆ.

ತಲೆಬರಹಗಳಲ್ಲಿಯೂ ಸಹ ವಿಶೇಷ ಭಾಷಾ ಬಳಕೆಯ ಅಂಶಗಳನ್ನು ಕ್ರೀಡಾಪುಟದಲ್ಲಿ ಗುರುತಿಸಬಹುದಾಗಿದೆ. ವಿಶೇಷವಾಗಿ ವ್ಯಕ್ತಿ, ಸ್ಥಳ, ದೇಶದ ಹೆಸರುಗಳು ಒಂದು ವಿಶಿಷ್ಟ ಬಗೆಯಲ್ಲಿ ಬಳಕೆಯಾಗುತ್ತಿದ್ದು, ಅವು ಆಡುಮಾತಿನಲ್ಲಿ ಇಂದು ರೂಢಿಗತವಾಗಿವೆ. ಉದಾ. ಸೌರವ್, ದ್ರಾವಿಡ್, ಕುಂಬ್ಳೆ, ಕೈಫ್ ಮುಂತಾದ ಸಂಕ್ಷಿಪ್ತ ಹೆಸರುಗಳ ಬಳಕೆ ಒಂದು ಬಗೆಯಾಗಿ ಕಾಣುತ್ತದೆ. 'ರಾಹುಲ್ ದ್ರಾವಿಡ್' ಎಂಬ ಪೂರ್ಣ ಹೆಸರಿದ್ದರೂ ಸಂಕ್ಷಿಪ್ತ ಹೆಸರುಗಳು ಬಳಕೆಯಾಗುತ್ತಿವೆ. ಉದಾ. ಕುಂಬ್ಳೆ ಭಾರತದ ಶ್ರೇಷ್ಠ ಬೌಲರ್.

ಹಾಗೆಯೇ ದೇಶವಾಚಿ ಹೆಸರುಗಳ ಬದಲಾಗಿ ಆ ದೇಶಗಳ ವಿಶೇಷತೆಯನ್ನು ಹೊಂದಿದ ಹಾಗೂ ಪ್ರಾಣಿಗಳ ಹೆಸರುಗಳ ಬಳಸಲಾಗುತ್ತದೆ. ಉದಾ. ಆಸ್ಟ್ರೇಲಿಯಾ ದೇಶದ ಹೆಸರು ಬಳಕೆಯಲ್ಲಿದ್ದರೂ ಸಹ 'ಕಾಂಗರೂ' ಎನ್ನುವ ಪದ ಬಳಕೆಯಾಗುತ್ತದೆ. ಇಂತಹ ಅನೇಕ ದೇಶದ ಹೆಸರುಗಳ ಬದಲಾಗಿ ವಿಶೇಷ ಹೆಸರು ಸೂಚಿಸುವುದನ್ನು ಕ್ರೀಡಾಪುಟದ ತಲೆಬರಹದಲ್ಲಿ ಗುರುತಿಸಬಹುದು.

ಇಂಗ್ಲಿಶ್ ಭಾಷೆಯ ಪದಗಳೇ ಅತಿ ಹೆಚ್ಚು ಬಳಕೆಯಾಗುತ್ತಿದ್ದು, ಆಟಗಳಿಗೆ ಸಂಬಂಧಿಸಿದ ಪದಗಳ ಬಳಕೆಯು ಇಂಗ್ಲಿಶ್‌ನಲ್ಲಿಯೇ ಇರುತ್ತವೆ. (ಉದಾ. ಪಿಚ್, ಪ್ಯಾಡ್, ವಿಕೆಟ್, ನೆಟ್) ತಲೆಬರಹಗಳಲ್ಲಿ ಆಟಗಳ ಹೆಸರುಗಳು, ಆಟಗಳಿಗೆ ಸಂಬಂಧಿಸಿದ ಪದಗಳು ಸ್ಥಾನ ಪಡೆಯುತ್ತದೆ. ಉದಾ. ಹಾಕಿ-ಭಾರತಕ್ಕೆ ಕಂಚು; ಚೆಸ್-ಆನಂದ್‌ಗೆ ವಿಜಯದ ಹ್ಯಾಟ್ರಿಕ್; ಕುಂಬ್ಳೆ-೪ ವಿಕೆಟ್ ಇತ್ಯಾದಿ.

ಇಷ್ಟೇ ಅಲ್ಲದೆ ತಲೆಬರಹದಲ್ಲಿ ಗುಣಪದ, ಸಂಖ್ಯಾವಾಚಿ ಪದಗಳನ್ನು ಸಹ ಕಾಣಬಹುದು. ಉದಾ. ಭಾರತಕ್ಕೆ 'ಹೀನಾಯ ಸೋಲು', ಸಚಿನ್ 'ಸ್ಫೋಟಕ ಬ್ಯಾಟಿಂಗ್' ಇತ್ಯಾದಿ.

ತಲೆಬರಹದಲ್ಲಿಯೂ ಸಹ ಇಂಗ್ಲಿಶ್ ಪದಗಳನ್ನು ಕನ್ನಡಿಸಿ ಬಳಸುವುದನ್ನು ಕಾಣಬಹುದು. ಇಂಗ್ಲಿಶ್ ಪದಗಳನ್ನು ಭಾಷಾಂತರಿಸಿ ಬಳಸುವುದೂ ಉಂಟು (ಉದಾ : ಪಿಚ್-ಅಂಗಣ ಇಂದು ಅಂಗಳ (ಪಿಚ್)ಕ್ಕಿಳಿಯುವ ಭಾರತ-ಬಾಂಗ್ಲಾ).

ಹಾಗೆಯೇ ಅಚ್ಚರಿ ಸೂಚಕ, ಪ್ರಶ್ನಾ ಸೂಚಕ, ವ್ಯಂಗ್ಯ ಸೂಚಕ ಚಿಹ್ನೆಗಳ ಪದ ಪ್ರಯೋಗ ಒಳಗೊಂಡಿರುತ್ತವೆ. ಆಟಗಳಿಗೆ ಸಂಬಂಧಿಸಿದ ಸುದ್ದಿಯ ಪೂರ್ಣ ಮಾಹಿತಿ ತಲೆಬರಹ ನೋಡಿದ ಕೂಡಲೇ ಅರ್ಥವಾಗುವ ರೀತಿಯಲ್ಲಿ ಕಂಡುಬರುತ್ತವೆ.

೨. ಆರಂಭಿಕ ಟಿಪ್ಪಣಿ (Lead) :

'ಆರಂಭಿಕ ಟಿಪ್ಪಣಿ ಎಂದರೆ ಮುಖ್ಯ ತಲೆಬರಹದ ನಂತರ ಹಾಗೂ ಕೆಳಗಡೆಯೂ ಕಂಡುಬರುವ ಸುದ್ದಿಯ ಸಾಲುಗಳನ್ನು 'ಆರಂಭಿಕ ಟಿಪ್ಪಣಿ' (Lead) ಎಂದು ಕರೆಯುತ್ತಾರೆ. ಇಲ್ಲಿ ಸುದ್ದಿಯತ್ತ ಕರೆದೊಯ್ಯುವ ಪ್ರಯತ್ನ ಇರುತ್ತದೆ. ಆರಂಭಿಕ ಅಂಶಗಳು ಸುದ್ದಿಯ ವಿಷಯವನ್ನು ಓದಲಿಕ್ಕೆ ಕುತೂಹಲ ಕೆರಳಿಸುವಂತೆ ಉಂಟು ಮಾಡಲು ಆರಂಭಿಕ ಟಿಪ್ಪಣಿ ಪ್ರಮುಖವಾಗಿದೆ. ಸುದ್ದಿಯ ಟಿಪ್ಪಣಿ ರೂಪದಲ್ಲಿ ಮಾಹಿತಿ ಒಂದು ಅಥವಾ ಎರಡು ಸಾಲುಗಳಲ್ಲಿ ಇದು ಇರುತ್ತದೆ. ಇಲ್ಲಿಯೂ ಸಹ ವಿಶೇಷ ಭಾಷಾ ಬಳಕೆಯ ಅಂಶಗಳು ಕಂಡುಬರುತ್ತವೆ.

೩. ಸುದ್ದಿಯ ವಿಸ್ತೃತ ವರದಿ

ಇದು ತಲೆಬರಹ ನೀಡುವ ಸಾರಸಂಗ್ರಹದ ವಿವರಣಾತ್ಮಕ ರೂಪ. ನಡೆದ / ನಡೆಯುವ ಘಟನೆಯನ್ನು ಎಳೆ ಎಳೆಯಾಗಿ ಬಿಡಿಸಿ ನೀಡುವ ಕ್ರಿಯೆ ಇಲ್ಲಿರುತ್ತದೆ. ಇದು ಸುದ್ದಿಯ ಅಂತಿಮ ಭಾಗ. ಹಾಗಾಗಿ ಇಲ್ಲಿ ಸುದ್ದಿಗೆ ಸಂಬಂಧಿಸಿದ ಎಲ್ಲ ಮಾಹಿತಿಯೂ ಒಳಗೊಂಡಿರುತ್ತದೆ. ಇಲ್ಲಿನ ಭಾಷಾ ಬಳಕೆ ಕ್ರೀಡೆಗೆ ಸಂಬಂಧಿಸಿದ ಪದಗಳು ಹಾಗೂ ಸಾಮಾನ್ಯ ಭಾಷಾ ಬಳಕೆಯಿಂದ ಕೂಡಿರುತ್ತದೆ.

ಹಿಂದೆ ನಡೆದ, ನಡೆಯುತ್ತಿರುವ ಹಾಗೂ ಮುಂದೆ ನಡೆಯಲಿರುವ ಆಟಗಳ ಹೆಚ್ಚಿನ ಮಾಹಿತಿ ಕ್ರೀಡಾಪುಟದಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಓದುಗರು ತಮಗೆ ಬೇಕಾದ ಹೆಚ್ಚಿನ ಮಾಹಿತಿಯನ್ನು ಪಡೆಯಲಿಕ್ಕೆ ಆಟಗಳ ಸುದ್ದಿಯ ವರದಿಯನ್ನು ಓದುತ್ತಾರೆ. ವಲಯ, ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಆಟಗಳ ಹೆಚ್ಚಿನ ಮಾಹಿತಿಯನ್ನು ಕ್ರೀಡಾಪುಟ ಹೊಂದಿದ್ದು, ಈ ಆಟಗಳ ಮಾಹಿತಿಗಳನ್ನು, ವರದಿ ಮಾಡುವಂತಹ ಕ್ರಮ, ಪತ್ರಿಕೆಯ ಉಳಿದ ಪುಟಗಳಿಗಿಂತ ಈ ಪುಟ ವಿಶೇಷವಾಗಿ ಕೇವಲ ಆಟಗಳ ಸುದ್ದಿಯನ್ನು ಮಾತ್ರ ಹೊಂದಿರುತ್ತದೆ. ಅಲ್ಲಿಯ ಆಟಗಳ ಸುದ್ದಿಯ ವರದಿಯ ಸ್ವರೂಪವೇ ಇಂದು ಭಿನ್ನವಾಗಿದೆ.

ಕ್ರೀಡಾ ಪುಟದ ಆಟಗಳ ಸುದ್ದಿಗಳ ವರದಿಯ ವ್ಯಾಪ್ತಿ ಸಂಕ್ಷಿಪ್ತವೂ ಆಗಿರಬಹುದು, ವಿಸ್ತೃತವೂ ಆಗಿರಬಹುದು. ಇಲ್ಲಿ ಆಟಗಳ ಹೆಸರು, ಫಲಿತಾಂಶ, ಮಾಹಿತಿ, ಸರಳ ಭಾಷೆಯಿಂದ ಕೂಡಿದ್ದು, ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಬರುತ್ತದೆ.

ಇಲ್ಲಿಯೂ ಸಹ ಗುಣಪದ, ಸಂಖ್ಯಾವಾಚಿ, ಸಂವಾದಿ ಪದ, ಸ್ವೀಕೃತ ಪದಗಳು ಅತೀ ಹೇರಳವಾಗಿ ಕಂಡುಬರುತ್ತವೆ. ಉದಾ. ಸುಲಭ ತುತ್ತಾಗು, ಮಿಂಚಿನ ಆಟ, ಪ್ರಯಾಸದ ಜಯ ಮುಂತಾದ ಪದಗಳ ಬಳಕೆಯನ್ನು ಗುರುತಿಸಬಹುದು.

ಕ್ರೀಡಾ ಪುಟದ ಬೆಳವಣಿಗೆ ಮತ್ತು ಮಹತ್ವ

ಭಾರತೀಯ ವಿವಿಧ ಭಾಷಾ ಪತ್ರಿಕೆಗಳಲ್ಲಿ ಒಂದಲ್ಲಾ ಒಂದು ಬಗೆಯ ಕ್ರೀಡಾ ಸುದ್ದಿಗಳನ್ನು ವರದಿ ಮಾಡುವುದು ಒಂದು ಪ್ರತ್ಯೇಕ ಭಾಗವಾಗಿ ಬೆಳೆದುಕೊಂಡು ಬಂದಿದೆ. ಕನ್ನಡ ದಿನಪತ್ರಿಕೆಯಲ್ಲಿಯೂ ಸಹ ಕ್ರೀಡಾ ಸುದ್ದಿಗಳಿಗೇ ಮೀಸಲಾಗಿರುವ ವಿಶೇಷ ಪುಟಗಳು ಇಂದು ಬೆಳೆದುಕೊಂಡು ಬಂದಿವೆ. ಇಂದಿನ ಕನ್ನಡ ದಿನಪತ್ರಿಕೆಗಳಲ್ಲಿ ಇಂತಹ ಪುರವಣಿ ವಿಶೇಷ ಆಕರ್ಷಕ, ಹಲವು ವೈವಿಧ್ಯಗಳಿಂದ ಕೂಡಿ ಓದುಗರಿಗೆ ಆ ಕ್ಷೇತ್ರದ ಮಾಹಿತಿಯನ್ನು ನೀಡುವುದರ ಮೂಲಕ ಜನರಲ್ಲಿ ಆಕರ್ಷಣೆಯನ್ನು ಉಂಟು ಮಾಡಿದೆ.

ಕ್ರೀಡೆಗಳು ಮನುಷ್ಯನಿಗೆ ಅವಶ್ಯಕವಾಗಿ ಬೇಕು. ಕ್ರೀಡೆಗಳು ಮನುಷ್ಯನನ್ನು ದೈಹಿಕ, ಬೌದ್ಧಿಕ ಹಾಗೂ ಮಾನಸಿಕ ಸದೃಢನನ್ನಾಗಿ ಮಾಡುತ್ತವೆ. ಹಾಗೆಯೇ ಕ್ರೀಡೆಗಳು ಇಂದು ಮನುಷ್ಯನಲ್ಲಿ ಆಧುನಿಕ ಸ್ಪರ್ಧಾ ಮನೋಭಾವನೆಯನ್ನು ಮೂಡಿಸುತ್ತವೆ. ದೇಶ-ದೇಶಗಳ, ವ್ಯಕ್ತಿ-ವ್ಯಕ್ತಿಗಳ ಮಧ್ಯೆ ನಡೆಯುವ ಗೌರವಯುತ ಸ್ಪರ್ಧೆಗಳಾಗಿ ಕ್ರೀಡೆಗಳು ಬೆಳೆಯುತ್ತಿವೆ. ಕ್ರೀಡೆಗಳು ಮನುಷ್ಯನ ಬದುಕಿನ ಒಂದು ಭಾಗವಾಗಿವೆ ಎಂದು ಹೇಳಿದರೆ ತಪ್ಪಾಗಲಾರದು.

ಕ್ರೀಡಾ ಪುಟ ಇಂದು ಮಹತ್ವವನ್ನು ಪಡೆದಿದೆ. ಯಾವುದೇ ದೇಶದ ಯಾವುದೇ ಭಾಗದಲ್ಲಿ ನಡೆದ, ನಡೆಯುತ್ತಿರುವ ಕ್ರೀಡಾ ಸಮಾಚಾರಗಳನ್ನು ಜನಸಾಮಾನ್ಯರಿಗೆ ಮಾಹಿತಿ ದೊರೆಯುವುದು ಇಂದು ಅವಶ್ಯಕವಾಗಿದೆ. ಈ ಬಗೆಯ ಕ್ರೀಡಾ ಸುದ್ದಿಗಳನ್ನು ಜನಸಾಮಾನ್ಯರಿಗೆ ಮಾಹಿತಿ ಒದಗಿಸುವ ಜವಾಬ್ದಾರಿಯನ್ನು ಇಂದಿನ ಆಧುನಿಕ ಸಮೂಹ ಮಾಧ್ಯಮಗಳು ಪೂರೈಸುತ್ತಿವೆ. ಇಂತಹ ಬೆಳವಣಿಗೆ ಪ್ರೋತ್ಸಾಹದಾಯಕ ಹಾಗೂ ಅವಶ್ಯಕವಾಗಿದೆ.

ದೂರದರ್ಶನವು ಇಂದು ಕ್ರೀಡಾ ಸುದ್ದಿಗಳ ಹೆಚ್ಚಿನ ಮಾಹಿತಿಯನ್ನು ಹಾಗೆ ಆಟಗಳ ನೇರ ವೀಕ್ಷಣೆಯನ್ನು ಪ್ರಸಾರಗೊಳಿಸುತ್ತಿದೆ. ರೇಡಿಯೋ ಸಹ ಈ ಬಗೆಯ ಕಾರ್ಯಕ್ರಮಗಳನ್ನು ತನ್ನ ಶ್ರೋತೃಗಳಿಗೆ ಒದಗಿಸುತ್ತಿದೆ. ಅಕ್ಷರ ಮಾಧ್ಯಮವಾದ ಪತ್ರಿಕೆಯೂ ಕೂಡ ಇಂದು ಕ್ರೀಡಾ ಸುದ್ದಿಗಳನ್ನು ಒದಗಿಸುತ್ತಿದೆ.

ಎಲ್ಲ ವರ್ಗದ ಜನ ಹಾಗೂ ಪ್ರಮುಖವಾಗಿ ಯುವಜನಾಂಗವು ಯಾವುದೇ ಪತ್ರಿಕೆಗಳನ್ನು ತೆಗೆದುಕೊಂಡರೆ ಮೊದಲು ಕ್ರೀಡಾಪುಟದ ಸುದ್ದಿಯ ಕಡೆ ಕಣ್ಣಾಡಿಸುತ್ತಾರೆ. ಯುವ ಜನಾಂಗದಲ್ಲಿ ಆಟಗಳ ಬಗ್ಗೆ ಹೆಚ್ಚಿನ ಆಸಕ್ತಿ ಮೂಡುತ್ತಿದೆ.

ಜಗತ್ತಿನಲ್ಲಿ ನಡೆಯುವ ಯಾವುದೇ ಬಗೆಯ ಆಟಗಳು, ಅವುಗಳ ಬೆಳವಣಿಗೆ, ಮಹತ್ವ, ಆಕರ್ಷಣೆ ಹಾಗೂ ಆಸಕ್ತಿ ಜನರಲ್ಲಿ ಮೂಡುತ್ತಿದೆ. ಒಳಾಂಗಣ ಹಾಗೂ ಹೊರಾಂಗಣ ಆಟಗಳು ಇಂದು ವಿಶ್ವವ್ಯಾಪಿಯಾಗಿ ಕಂಡುಬರುತ್ತಿವೆ. ಮಹತ್ವ ಪಡೆದ ಆಟಗಳ ಮಾಹಿತಿ, ಫಲಿತಾಂಶ, ದಾಖಲೆಗಳನ್ನು ದಿನಪತ್ರಿಕೆಯ ಕ್ರೀಡಾ ಪುಟ ಜನರಿಗೆ ಒದಗಿಸುತ್ತಿದೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲ ವರ್ಗದ ಜನರಿಗೆ ವಿವಿಧ ವಲಯಗಳ ತಿಳುವಳಿಕೆ ಅವಶ್ಯವಾಗಿದೆ. ಪ್ರಾದೇಶಿಕ, ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುವಂತಹ ಆಟಗಳ ಮಾಹಿತಿಯನ್ನು ನೀಡುವಲ್ಲಿ ಪತ್ರಿಕೆಗಳ ಕ್ರೀಡಾ ವರದಿ ಪುಟ ಅತೀ ಮಹತ್ವದ್ದಾಗಿದೆ.

ಹಾಗೆಯೇ ಆಟಗಳ ಸುದ್ದಿಗಳನ್ನು ನೀಡುವುದರ ಜೊತೆಗೆ ಇನ್ನೊಂದು ಗಮನಿಸುವ ಅಂಶವೆಂದರೆ ಕ್ರೀಡಾ ವಲಯ ಇಂದು ಆಧುನಿಕವಾಗಿ ಬೆಳೆಯುತ್ತಿದೆ. ರಾಜ್ಯ-ರಾಜ್ಯಗಳ, ದೇಶ-ದೇಶಗಳ ಮಧ್ಯ ನಡೆಯುವ ಆಟಗಳು ಇಂದು ಅನೇಕ ಹೊಸ ಸ್ವರೂಪವನ್ನು ಪಡೆದುಕೊಂಡಿವೆ. ಕ್ರೀಡಾ ಪುಟವು ಕೂಡ ಆಧುನಿಕವಾಗಿ ಬೆಳೆಯುವ ಸ್ವರೂಪವನ್ನು ಹೊಂದಿದೆ.

ಕ್ರೀಡಾ ಪುಟ ವೈವಿಧ್ಯಮಯವಾದ ಆಟಗಳ ಸುದ್ದಿಯನ್ನು ಪ್ರಸಾರಗೊಳಿಸುವುದರ ಜೊತೆಗೆ ಕನ್ನಡ ಭಾಷಾ ಬೆಳವಣಿಗೆಯ ದೃಷ್ಟಿಯಿಂದ ಅತೀ ಮಹತ್ವದ ಅಂಶವಾಗಿದೆ.

ಅಡಿಟಿಪ್ಪಣಿ

೧. ಕೃಷ್ಣಮೂರ್ತಿ ವೈ.ಎನ್. ಸಂ., ೧೯೮೫, **ಇದು ಸುದ್ದಿ ಇದು ಸುದ್ದಿ**, ಅಕ್ಷರ ಪ್ರಕಾಶನ, ಸಾಗರ, ಪು. ೨೫.

✢ ✢ ✢

ಅಧ್ಯಾಯ ೪

ಕ್ರೀಡಾ ಪುಟದ ಪದಪ್ರಯೋಗ ಮತ್ತು ಬಳಕೆ

ಅಧ್ಯಾಯ ೪

ಕ್ರೀಡಾ ಪುಟದ ಪದಪ್ರಯೋಗ ಮತ್ತು ಬಳಕೆ

ಪೀಠಿಕೆ

ಇಂದಿನ ಕನ್ನಡ ದಿನಪತ್ರಿಕೆಗಳು ಆಟಗಳ ಸುದ್ದಿಯ ವರದಿಗಳನ್ನು ಪತ್ರಿಕೆಗಳಲ್ಲಿ ಪ್ರತ್ಯೇಕವಾದ, ಆಕರ್ಷಕವಾದ ರೀತಿಯಲ್ಲಿ ಪ್ರಕಟಿಸುತ್ತಿದೆ. ವಾಣಿಜ್ಯ, ಕೃಷಿ, ಉದ್ಯೋಗ, ಸಿನಿಮಾ ಎಂತಹ ವಿಶೇಷ ಪುರವಣಿಗಳಂತೆ ಕ್ರೀಡಾ ಸುದ್ದಿಗಳನ್ನು ಹೊಂದಿದ ವಿಶೇಷ ಪುರಾವಣಿ ಪ್ರತ್ಯೇಕ ಭಾಗದಲ್ಲಿ ಪ್ರಸಾರವಾಗುತ್ತಿದೆ. ಹಾಗೆಯೇ ಪ್ರತಿ ದಿನದ ಪತ್ರಿಕೆಯ ಕೊನೆಗೆ ಒಂದು ಪ್ರತ್ಯೇಕ ಪುಟದಲ್ಲಿ ಆಟಗಳ ಸುದ್ದಿಗಳು ಕಂಡುಬರುತ್ತವೆ.

ಇಂಗ್ಲಿಶ್ ಭಾಷೆಯ ಪದ ಬಳಕೆ ಬಹುವಾಗಿ ಕಂಡುಬರುವ ಈ ಭಾಗದಲ್ಲಿ ಆಟಗಳ ಹೆಸರುಗಳು ಬಹುತೇಕ ಇಂಗ್ಲಿಶ್ ಭಾಷೆಯದ್ದೇ ಆಗಿದ್ದು, ಆಟಗಳಿಗೆ ಸಂಬಂಧಿಸಿದ ಇತರ ಪದಗಳೂ ಸಹ ಇಂಗ್ಲಿಶಿನದ್ದೇ ಆಗಿದೆ ಎಂಬುದನ್ನು ಈ ಹಿಂದೆ ತಿಳಿಸಲಾಗಿದೆ.

ಕನ್ನಡ ದಿನಪತ್ರಿಕೆಗಳಲ್ಲಿ ಇತರ ಭಾಗದಲ್ಲಿ ಕಾಣಿಸಿಕೊಳ್ಳದಂತಹ ಕನ್ನಡದ ಸಂವಾದಿ ಅಥವಾ ಭಾಷಾಂತರಗೊಂಡ ಪದಗಳ ಬಳಕೆ ಹಾಗೂ ಸ್ವೀಕೃತ ಪದಗಳ ಬಳಕೆ ಹೆಚ್ಚಾಗಿ ನಡೆದಿದೆ. ಹಾಗೆಯೇ ಕ್ರಿಯಾಪದ, ಗುಣಪದ, ಗಾದೆ, ನುಡಿಗಟ್ಟು ಇತ್ಯಾದಿ ಭಾಷಾ ಅಂಶಗಳು ವಿಶೇಷವಾಗಿ ಬಳಕೆಯಾಗುತ್ತಿವೆ.

ಇಲ್ಲಿ ಕೇವಲ ಆಟಗಳಿಗೆ ಮಾತ್ರ ಸಂಬಂಧಿಸಿದಂತಹ ಪದಗಳು ಬಳಕೆಗೊಂಡಿರುವುದನ್ನು ಹೀಗೆ ಗುರುತಿಸಲಾಗಿದೆ. ಆಟಗಳಿಗೆ ಸಂಬಂಧಿಸಿದಂತಹ ಪದಗಳನ್ನು ಈ ಕೆಳಗಿನಂತೆ ವಿಂಗಡಿಸಿ ಕೊಳ್ಳಲಾಗಿದೆ.

೧. ಕ್ರೀಡಾಪುಟದ ಪದಕೋಶ

೨. ಹೆಸರುಗಳ ಬಳಕೆ

೩. ಕ್ರಿಯಾರೂಪಗಳು

೪. ಗುಣವಾಚಕಗಳು

೫. ಸಂಖ್ಯಾವಾಚಿಗಳು

೬. ನುಡಿಗಟ್ಟು

೭. ಇತರೆ

ಕ್ರೀಡಾ ಸುದ್ದಿಗಳಲ್ಲಿ ಕಂಡುಬರುವ ಪದಕೋಶ, ಪದ ಪ್ರಯೋಗ ಮತ್ತು ವಿಶೇಷ ಭಾಷಾ ಬಳಕೆಯ ವಿಧಾನವನ್ನು ಈ ಮೇಲೆ ಕಾಣಿಸಿದ ವಿಷಯಗಳ ಅಡಿಯಲ್ಲಿ ಚರ್ಚಿಸಲಾಗಿದೆ.

೪.೧ ಕ್ರೀಡಾ ಪುಟದ ಪದಕೋಶ

ಕ್ರೀಡಾ ಪುಟದ ಭಾಷೆಯನ್ನು ಗಮನಿಸಿದಾಗ ವಿಶೇಷವಾಗಿ ಗೋಚರಿಸುವುದು ಇಲ್ಲಿನ ಇಂಗ್ಲಿಶ್ ಪದಗಳು ಹಾಗೂ ವ್ಯಂಜನಾಂತ ಪದಗಳು, ಆಟದ ಹೆಸರುಗಳೆಲ್ಲವೂ ಇಂಗ್ಲಿಶ್ ಮತ್ತು ವ್ಯಂಜನಾಂತ. ಉದಾ. ಕ್ರಿಕೆಟ್, ಟೆನಿಸ್, ಬ್ಯಾಡ್ಮಿಂಟನ್, ಚೆಸ್ ಆಟಗಳ ಹೆಸರುಗಳಲ್ಲದೆ, ಆಟಕ್ಕೆ ಸಂಬಂಧಿಸಿದ ಪದಗಳಾದ ಸ್ಕೋರ್, ಪಿಚ್, ಫೋರ್, ಸಿಕ್ಸ್, ಬ್ಯಾಟ್, ಬಾಲ್ ಎಂತಹ ಅನೇಕ ಪದಗಳು ಮತ್ತು ಇಂಗ್ಲಿಶ್ ಪದಗಳನ್ನು ಭಾಷಾಂತರಗೊಳಿಸಿದಂತಹ ಪಂದ್ಯ, ಬಳಗ, ಪಂದ್ಯಪುರುಷೋತ್ತಮ, ಅಂಗಳ, ಎಸೆತ ಇತ್ಯಾದಿ ಪದಗಳನ್ನು ಗುರುತಿಸಬಹುದು.

ಕ್ರೀಡಾ ಪುಟದ ಪದಕೋಶವನ್ನು ಗಮನಿಸಿದರೆ ಇಂಗ್ಲಿಶ್ ಪದಗಳೇ ಅಲ್ಲದೆ ಆಟದ ಸಂದರ್ಭದಲ್ಲಿ ಬಳಕೆಯಾಗುವ ವಿಶೇಷ ಪದಗಳು, ಕ್ರಿಯಾಪದಗಳು, ಗುಣವಾಚಕಗಳು, ಸಂಖ್ಯಾವಾಚಿಗಳು, ಇನ್ನಿತರ ಆಟದ ಸಂಬಂಧಿ ಪದಗಳು ಇಲ್ಲಿವೆ. ಈ ಎಲ್ಲ ಪದಗಳು ವಿಶೇಷ ರೀತಿಯಾಗಿ ಬಳಕೆಯಾಗುವಂತಹವು. ಕೆಲವು ಸಂದರ್ಭದಲ್ಲಿ ಭಾಷಾಂತರಿಸಿ ಹಾಗೂ ಇಂಗ್ಲಿಶ್ ಪದಗಳಿಗೆ ಕನ್ನಡ ರೂಪವನ್ನು ಧರಿಸಿ ವ್ಯಂಜನಾಂತವಾಗಿಯೇ ಬಳಕೆಯಾಗುವುದು ವಿಶೇಷ. ಉದಾ. ನಾಟ್‌ಔಟ್, ಸಿಕ್ಸರ್, ಓವರ್ ಇತ್ಯಾದಿ. ಪದಕೋಶದಲ್ಲಿ ಈ ರೀತಿಯಾಗಿ ವಿಂಗಡಿಸಲಾಗಿದೆ.

* ಆಟಗಳಿಗೆ ಸಂಬಂಧಿಸಿದ ಇಂಗ್ಲಿಶ್ ಪದಕೋಶ

* ಭಾಷಾಂತರಿಸಿದ ಇಂಗ್ಲಿಶ್-ಕನ್ನಡ ಪದಕೋಶ

೪.೧.೧. ಆಟಗಳಿಗೆ ಸಂಬಂಧಿಸಿದ ಇಂಗ್ಲಿಶ್ ಭಾಷೆಯ ಪದಕೋಶ

ಇಂದಿನ ಆಟಗಳಲ್ಲಿ ಇಂಗ್ಲಿಶ್ ಭಾಷೆಯ ಬಳಕೆ ಹೆಚ್ಚಾಗುತ್ತಿದೆ. ಅಂತರರಾಷ್ಟ್ರೀಯ ಭಾಷೆಯಾಗಿರುವ ಇಂಗ್ಲಿಶ್‌ನ್ನೇ ಎಲ್ಲಾ ಕ್ರೀಡೆಗಳಲ್ಲಿ ಬಳಸುವುದರಿಂದ ಸಾಮಾನ್ಯವಾಗಿ ಇಂಗ್ಲಿಶ್ ಭಾಷೆಯ ಪದಗಳ ಬಳಕೆ ಕಂಡುಬರುತ್ತದೆ. ಆಟಗಳ ಸಂಬಂಧಿ ಪದಗಳು ಮತ್ತು ಆಟಗಳ ಹೆಸರುಗಳು ಇಂಗ್ಲಿಶ್ ಭಾಷೆಯಲ್ಲೇ ಇರುವುದು ಸಾಮಾನ್ಯವಾಗಿದೆ. ಕ್ರೀಡೆಗಳು ವಿಶ್ವವ್ಯಾಪಿಯಾದ ಕಾರಣ ಅಂತಾರಾಷ್ಟ್ರೀಯ ಭಾಷೆಯಾದ ಇಂಗ್ಲಿಶ್‌ನ್ನೇ ಬಳಕೆ ಮಾಡಿಕೊಂಡಿರುವ ಅಂಶವು ವ್ಯಕ್ತವಾಗುತ್ತದೆ.

ಹಾಗಾಗಿ ಕ್ರೀಡಾ ಪುಟದ ಭಾಷಾ ಬಳಕೆಯಲ್ಲಿ ಇಂಗ್ಲಿಶ್ ಪದಗಳ ಬಳಕೆಯ ಸಂಖ್ಯೆ ಅತೀ ಹೆಚ್ಚಾಗಿ ಕಂಡುಬರುತ್ತದೆ. ಕ್ರಿಕೆಟ್, ಚೆಸ್, ಟೆನಿಸ್, ಬಾಕ್ಸಿಂಗ್, ಬ್ಯಾಟ್ಮಿಂಟಿನ್, ವಾಲಿಬಾಲ್, ಫುಟ್‌ಬಾಲ್ ಇತ್ಯಾದಿ ಆಟಗಳ ಹೆಸರುಗಳು ಇಂದು ಇಂಗ್ಲಿಶ್ ಭಾಷೆಯ ಪದಗಳಾಗಿವೆ. ಹಾಗೆಯೇ ರನ್, ಬಾಲ್, ಬ್ಯಾಟ್, ವಿಕೆಟ್, ಓವರ್, ಆಲ್‌ರೌಂಡರ್, ಫೈನಲ್‌ನಂತಹ ಇತ್ಯಾದಿ ಪದಗಳೂ ಸಹ ಇಂಗ್ಲಿಶ್ ಭಾಷೆಯದ್ದೇ ಆಗಿವೆ. ಆಟಗಳ ಹೆಸರನ್ನು ಇಂಗ್ಲಿಶ್ ಭಾಷೆಯ ಉಚ್ಚಾರದಂತೆಯೇ ಉಳಿಸಿಕೊಳ್ಳಲಾಗಿದೆ. ಉದಾ. ಕ್ರಿಕೆಟ್, ಬಾಲ್ ಇಂತಹ ಪದಗಳನ್ನು ಸ್ವೀಕರಿಸುವ ಸಂದರ್ಭದಲ್ಲಿ ಉಚ್ಚಾರಣೆಯ ಸ್ವರೂಪದಂತ, ಅಂದರೆ ವ್ಯಂಜನಾಂತವಾಗಿಯೇ ಸ್ವೀಕರಿಸಿಕೊಂಡಿದ್ದು ಒಂದು ವಿಶೇಷ ಅಂಶವಾಗಿದೆ.

ಇಂಗ್ಲಿಶ್ ಭಾಷೆಯ ಆಟಗಳ ಹೆಸರು ಹಾಗೂ ಆಟಗಳಿಗೆ ಸಂಬಂಧಿಸಿದ ಪದಕೋಶವನ್ನು ಹೀಗೆ ಗುರುತಿಸಲಾಗಿದೆ.

ಆಟಗಳ ಪದಗಳು

ಈಕ್ವೆಸ್ಟ್ರಿಯನ್
ಕೇರಮ್
ಕ್ರಿಕೆಟ್
ಗಾಲ್ಫ್
ಚೆಸ್
ಜೂಡೋ
ಜಾವಲಿನ್ ಥ್ರೋ
ಟೆನ್ನಿಸ್ / ಲಾನ್ ಟೆನ್ನಿಸ್
ಟೇಬಲ್ ಟೆನ್ನಿಸ್
ಟ್ರಿಪಲ್ ಜಂಪ್
ಡಿಸ್ಕಸ್ ಥ್ರೋ
ಥ್ರೋಬಾಲ್
ಫುಟ್‌ಬಾಲ್
ಪೋಲೋ
ಬಾಕ್ಸಿಂಗ್
ಬ್ಯಾಸ್ಕೆಟ್‌ಬಾಲ್
ಬ್ಯಾಡ್ಮಿಂಟನ್
ಬಿಲಿಯರ್ಡ್ಸ್
ಮ್ಯಾರಥಾನ್

ರಗ್ಬಿ
ರನ್ನಿಂಗ್ಸ್
ರಿಲೇ
ರಿಂಗ್‌ಬಾಲ್
ರೋಯಿಂಗ್
ಲಾಂಗ್‌ಜಂಪ್
ವಾಲಿಬಾಲ್
ವಾಟರ್ ಪೋಲೋ
ವೈಟ್‌ಲಿಫ್ಟಿಂಗ್
ಶೆಟಲ್‌ಕಾಕ್
ಶಾಟ್‌ಪುಟ್
ಶೂಟಿಂಗ್
ಸಾಕರ್
ಸ್ನೂಕರ್
ಸೈಕ್ಲಿಂಗ್
ಸ್ಕೇಟಿಂಗ್
ಹಾಕಿ
ಹ್ಯಾಂಡ್‌ಬಾಲ್
ಹೈಜಂಪ್

ಆಟಗಳಲ್ಲಿ ಬಳಸಲಾದ ಪದಗಳು

ಅಕಾಡೆಮಿ

ಅಥ್ಲೆಟ್

ಅಥ್ಲೆಟಿಕ್ಸ್

ಅಂಪೈಯರ್

ಆಲೌಟ್

ಆಫ್ ಪಿಚ್

ಆಫ್‌ಸೈಡ್

ಆಫ್‌ಸೆಂಚುರಿ

ಆಲ್‌ರೌಂಡರ್

ಇಲೆವನ್

ಎಕ್ಸ್‌ಟ್ರಾ ಕವರ್

ಎಲ್‌ಬಿ ಡಬ್ಲ್ಯೂ

ಏಷಿಯನ್ ಗೇಮ್ಸ್

ಒನ್ ಡೌನ್

ಒಲಂಪಿಕ್ಸ್

ಓಪನರ್

ಓವರ್

ಔಟ್

ಕನೆಕ್ಟ್

ಕಪ್

ಕ್ಲಬ್

ಕಾರ್ನರ್

ಕಾಟ್ ಅಂಡ್ ಬೋಲ್ಡ್

ಕವರ್ ಪಾಯಿಂಟ್

ಕಾಕ್

ಕ್ರಾಸ್‌ಬಾರ್

ಕಾಮನ್‌ವೆಲ್ತ್

ಕ್ಯಾಪ್ಟನ್

ಕ್ಯಾಚ್ / ಕ್ಯಾಚ್‌ಔಟ್

ಕ್ವಾರ್ಟರ್ ಫೈನಲ್

ಕ್ಲೀನ್ ಬೋಲ್ಡ್

ಕ್ಲೀನ್‌ಸ್ವೀಪ್

ಕಿಕ್‌ಔಟ್

ಕೀಪಿಂಗ್

ಕ್ರೀಸ್

ಕೋಚ್

ಗಾಡ್ಸ್

ಗ್ರಾಂಡ್‌ಸ್ಲಾಮ್

ಗ್ರಾಂಡ್ ಪ್ರೀ

ಗೂಗ್ಲಿ

ಗೇಮ್‌ಬ್ರೇಕ್

ಗೋಲ್

ಗೋಲ್ ಲೈನ್

ಗೋಲ್ಡ್‌ಮೆಡಲ್

ಗ್ಲೌಸ್

ಗ್ರೌಂಡ್

ಚಾಂಪಿಯನ್ / ಚಾಂಪಿಯನ್‌ಶಿಪ್

ಚಾಲೆಂಜರ್

ಜ್ಯೂನಿಯರ್ಸ್

ಟರ್ನಿಂಗ್ / ಟರ್ನ್

ಟಾಸ್

ಟ್ರಾಯಲ್

ಟ್ರಿಕ್ಸ್

ಟೀಮ್

ಟೂರ್ನಿ

ಟೂರ್ನ್‌ಮೆಂಟ್

ಟೆಸ್ಟ್‌ಮ್ಯಾಚ್

ಟೈಬ್ರೇಕರ್

ಟೈಮ್‌ಔಟ್

ಟೆನಿಸ್ ಕೋರ್ಟ್

ಟೈ

ಟ್ರೋಫಿ

ಡರ್ಟ್‌ಟ್ರ್ಯಾಕ್

ಡಬಲ್ಸ್

ಡಬಲ್‌ಕಾಟ್

ಡ್ರಾ

ಡ್ರಾಪಿಂಗ್

ಡಿಕ್ಲೇರ್ಡ್

ಡಿಸಿಜನ್

ಡೆಡ್‌ಬಾಲ್

ಡೈವ್

ಥರ್ಡ್ ಡೌನ್

ನೆಟ್

ನೋಬಾಲ್

ಡಬಲ್ ಸೆಂಚುರಿ

ಪಂಚ್

ಪಾಯಿಂಟ್

ಪಾಸ್

ಪಾಟ್ನರ್‌ಶಿಪ್

ಪ್ಯಾಡ್

ಪ್ರಾಕ್ಟೀಸ್

ಫಾರ್ಮುಲಾ

ಫಾರ್ಮ್

ಫಾಸ್ಟ್ ಬೌಲರ್

ಫಾಲ್ಟ್ / ಡಬಲ್ ಫಾಲ್ಟ್

ಫೀಲ್ಡಿಂಗ್

ಫಿಟ್‌ನೆಸ್

ಪಿಚ್

ಪೆನಾಲ್ಟಿ

ಪೆವಿಲಿಯನ್

ಪ್ಲೆಯರ್ಸ್

ಫ್ಲೋರ್

ಫ್ರಂಟ್‌ಫುಟ್

ಫೈನಲ್

ಫೈನಾಲ್ಟಿ ಕಾರ್ನರ್

ಫ್ರೇಮ್

ಫೆವರಿಟ್

ಫೆಡರೇಶನ್

ಬಾಲ್

ಬ್ಯಾಟ್

ಬ್ಯಾಟ್ಸ್‌ಮನ್

ಬ್ಲಾಕಿಂಗ್

ಬ್ಯಾಕ್ ಹ್ಯಾಂಡ್

ಬ್ಯಾಕ್‌ಸ್ಟ್ರೋಕ್

ಬೀಟ್

ಬೈಸ್

ಬೌನ್ಸರ್

ಬೌಲರ್

ಬೋಲ್ಡ್

ಬೋನಸ್

ಬೌಂಡರಿ

ಮಿಡ್ಲ್

ಮಿಸ್‌ಫೀಲ್ಡ್

ಮಿಡಲ್ ಸ್ಟಂಪ್

ಮ್ಯಾಚ್

ಮ್ಯಾನ್ ಆಫ್ ದಿ ಮ್ಯಾಚ್

ಮೆಡನ್ / ಮೇಡಿನ್

ರನ್‌ರೇಟ್

ರನ್

ರನೌಟ್

ರಿಂಗ್

ರಿಟರ್ನ್

ರೈಟ್ ಹ್ಯಾಂಡ್

ರೈಡರ್ / ರೆಡರ್

ರ್‍ಯಾಂಕಿಂಗ್

ರೆಫರಿ

ರೆಡ್‌ಸಿಗ್ನಲ್

ರೌಂಡ್

ಲೀಗ್ ಮ್ಯಾಚ್

ಲೀಡ್

ಲೈನ್

ಲೆಗ್

ಲೆಗ್ ಸೈಡ್

ಲೆಫ್ಟ್ ಹ್ಯಾಂಡ್

ಲೆಗ್ ಬೈ

ವರ್ಲ್ಡ್‌ಕಪ್

ವಿಕೆಟ್

ವಿನ್ನರ್

ವಿಂಬಲ್ಡನ್

ವೈಸ್ ಕ್ಯಾಪ್ಟನ್

ಶಾಟ್

ಶೂಟೌಟ್

ಸಬ್ ಜ್ಯೂನಿಯರ್ಸ್

ಸರ್ವ್

ಸರ್ವೀಸ್

ಸ್ಮಾಷ್

ಸೂಪರ್ ಎಯ್ಟ್

ಸಿಂಗಲ್

ಸಿಕ್ಸರ್

ಸೀನಿಯರ್ಸ್

ಸಿಲ್ಲಿ ಮಿಡ್ ಆಫ್

ಸಿಲ್ಲಿ ಪಾಯಿಂಟ್

ಸ್ಪಿನ್ನರ್

ಸಿಗ್ನಲ್

ಸೀರಿಸ್

ಸ್ಲೀಪ್

ಸ್ವಿಂಗ್

ಸ್ಟಿಕ್

ಸ್ಪೀಡ್

ಸೆಟ್

ಸೆಮಿಫೈನಲ್

ಸೆಲೆಕ್ಟ್

ಸೆಕೆಂಡ್‌ಡೌನ್

ಸ್ಟ್ರೋಕ್

ಸ್ಟ್ರೈಕರ್

ಸ್ಪೋರ್ಟ್ಸ್

ಸೆಂಚುರಿ

ಸ್ಟಂಪ್

ಸ್ಟೇಡಿಯಂ

ಸ್ಕೋರ್ ಬೋರ್ಡ್

ಸ್ಕೋರ್

ಹೆಲ್ಮೆಟ್

ಹೆವಿ ವೇಯ್ಟ್

ಹ್ಯಾಟ್ರಿಕ್

ಹಿಟ್ ಔಟ್

೪.೧.೨. ಭಾಷಾಂತರಿಸಿದ ಇಂಗ್ಲಿಶ್-ಕನ್ನಡ ಪದಕೋಶ

ಆಟಗಳಲ್ಲಿ ಬಳಸಲಾಗುವ ಆಟಗಳ ಹೆಸರುಗಳು ಹಾಗೂ ಆಟಗಳಿಗೆ ಸಂಬಂಧಿಸಿದ ಪದಗಳನ್ನು ಭಾಷಾಂತರಿಸಿ ಈಗಾಗಲೇ ಇದ್ದಂತಹ ಕನ್ನಡ ಭಾಷೆಯ ಪದಗಳನ್ನು ಬಳಕೆ ಮಾಡಿ ಕೊಂಡಿರುವುದು ಕಂಡುಬರುತ್ತದೆ. ಉದಾ. 'ಬಾಲ್' ಎನ್ನುವ ಪದವನ್ನು ಚೆಂಡು, ಎಸೆತ ಎಂದೂ 'ಫಿಲ್ಡಿಂಗ್' ಎನ್ನುವ ಪದವನ್ನು 'ಕ್ಷೇತ್ರರಕ್ಷಣೆ' ಎಂಬಂತಹ ಪದಗಳನ್ನು ಗುರುತಿಸಬಹುದು.

ಆಟ ಹಾಗೂ ಆಟಕ್ಕೆ ಸಂಬಂಧಿಸಿದ ಭಾಷಾಂತರ ಪದಗಳ ಕೋಶ.

ಅಥ್ಲೆಟ್	-	ಕ್ರೀಡಾ ಪಟು / ಕ್ರೀಡಾಳು
ಅಪೀಲ್	-	ಮನವಿ
ಅಂಪೈಯರ್/ರೆಫರಿ	-	ನಿರ್ಣಾಯಕ
ಆಫ್ ಸೆಂಚುರಿ	-	ಅರ್ಧ ಶತಕ
ಇನ್ನಿಂಗ್ಸ್	-	ಪಾಳಿ
ಎಕ್ಸ್‌ಟ್ರಾ ಪ್ಲೇಯರ್	-	ಬದಲಿ ಆಟಗಾರ
ಒನ್ ಡೆ	-	ಏಕದಿನ ಪಂದ್ಯ
ಕಾಮೆಂಟ್ರಿ	-	ವೀಕ್ಷಕ ವಿವರಣೆ
ಕೋರ್ಟ್	-	ಅಂಗಳ
ಕೋಚ್	-	ತರಬೇತುದಾರ
ಕ್ಯಾಪ್ಟನ್	-	ನಾಯಕ
ಗೋಲ್	-	ಗೋಲು
ಗೋಲ್ಡ್‌ಮೆಡಲ್	-	ಸ್ವರ್ಣಪದಕ
ಗೋಲ್ ಲೈನ್	-	ಗೋಲು ಪಟ್ಟಿ
ಗೇಮ್ಸ್	-	ಆಟಗಳು

ಗ್ರೂಪ್	-	ಗುಂಪು
ಚೆಸ್	-	ಚದುರಂಗ
ಜಾವೆಲಿನ್ ಥ್ರೋ	-	ಬಲ್ಲೆ ಎಸೆತ
ಜೂನಿಯರ್ಸ್	-	ಕಿರಿಯರು
ಟೀಂ	-	ತಂಡ / ಪಡೆ / ಬಳಗ
ಟ್ರಿಕ್ಸ್	-	ತಂತ್ರ
ಡಬಲ್ ಸೆಂಚುರಿ	-	ದ್ವಿಶತಕ
ಡಿಸ್ಕಸ್ ಥ್ರೋ	-	ಚಕ್ರ ಎಸೆತ
ನಾಟೌಟ್	-	ಔಟಾಗದೆ
ಪಾರ್ಟ್‌ನರ್‌ಶಿಪ್	-	ಜೊತೆಯಾಟ
ಪ್ರಾಕ್ಟೀಸ್	-	ಅಭ್ಯಾಸ
ಪಿಚ್	-	ಅಂಕಣ
ಪೋಸ್ಟ್	-	ಕಂಬ
ಪ್ಲೇಯರ್	-	ಆಟಗಾರ
ಫಸ್ಟ್ ರೌಂಡ್	-	ಒಂದನೆ ಸುತ್ತು
ಫಾಸ್ಟ್ ಬೌಲರ್	-	ವೇಗಿ
ಫೀಲ್ಡ್	-	ಕ್ಷೇತ್ರ
ಫೀಲ್ಡರ್ಸ್	-	ಕ್ಷೇತ್ರರಕ್ಷಕರು
ಫೆವರಿಟ್	-	ನೆಚ್ಚಿನ ತಂಡ
ಫೈನಲ್	-	ಅಂತಿಮ ಪಂದ್ಯ
ಬಾಲ್	-	ಚೆಂಡು / ಎಸೆತ

ಬ್ಯಾಟ್	-	ದಾಂಡು
ಬ್ಯಾಟ್ಸ್‌ಮನ್	-	ದಾಂಡಿಗ
ಬೌಂಡರಿ ಲೈನ್	-	ಸೀಮಾರೇಖೆ
ಮ್ಯಾನ್ ಆಫ್ ದಿ ಮ್ಯಾಚ್	-	ಪಂದ್ಯ ಪುರುಷ
ಮ್ಯಾನ್ ಆಫ್ ದಿ ಸೀರಿಸ್	-	ಪಂದ್ಯ ಶ್ರೇಷ್ಠ
ಮ್ಯಾಚ್	-	ಪಂದ್ಯ / ಆಟ
ಮೆಡಲ್	-	ಪದಕ
ರನ್	-	ಓಟ
ರನ್ನರ್	-	ಓಟಗಾರ
ರಿಂಗ್	-	ಅಖಾಡ
ರ್‍ಯಾಂಕಿಂಗ್	-	ಶ್ರೇಯಾಂಕ
ರೌಂಡ್	-	ಸುತ್ತು
ಲಾಂಗ್‌ಜಂಪ್	-	ಉದ್ದಜಿಗಿತ
ಲೀಡ್	-	ಮುನ್ನಡೆ
ಲೆಫ್ಟ್‌ಹ್ಯಾಂಡ್	-	ಎಡಗೈ
ವರ್ಲ್ಡ್ ಕಪ್	-	ವಿಶ್ವಕಪ್
ವರ್ಲ್ಡ್‌ರೆಕಾರ್ಡ್	-	ವಿಶ್ವದಾಖಲೆ
ವಿನ್ನರ್	-	ಜಯಶಾಲಿ
ವಿಕೆಟ್	-	ಗೂಟ
ವಿಕೆಟ್‌ಕೀಪರ್	-	ಗೂಟರಕ್ಷಕ
ವೆಯಿಟ್‌ಲಿಫ್ಟಿಂಗ್	-	ಭಾರ ಎತ್ತುವ ಸ್ಪರ್ಧೆ

ವೈಸ್ ಕ್ಯಾಪ್ಟನ್	-	ಉಪನಾಯಕ
ಶಾಟ್	-	ಹೊಡೆತ
ಶಾಟ್‌ಪುಟ್	-	ಗುಂಡು ಎಸೆತ
ಸೀರಿಸ್	-	ಸರಣಿ
ಸೆಮಿಫೈನಲ್	-	ಉಪಾಂತ್ಯ
ಸೆಂಟರ್ ಪಾಯಿಂಟ್	-	ಮಧ್ಯಭಾಗ
ಸ್ಟೇಡಿಯಂ	-	ಮೈದಾನ
ಸ್ಕೋರ್	-	ಅಂಕ / ಮೊತ್ತ
ಸೆಂಚುರಿ	-	ಶತಕ
ಸೂಪರ್ ಏಯ್ಟ್	-	ಎಂಟರ ಘಟ್ಟ
ಹೈಜಂಪ್	-	ಎತ್ತರ ಜಿಗಿತ

ಇಲ್ಲಿನ ಕೆಲವು ಪದಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದರೂ ಅವುಗಳ ಬಳಕೆ ತೀರಾ ಪ್ರಯತ್ನಪೂರ್ವಕವಾಗಿರುತ್ತದೆ. ಸಾಮಾನ್ಯವಾಗಿ ಇಂಗ್ಲಿಶ್ ಪದಗಳ ಬಳಕೆಯೇ ನಡೆಯುತ್ತದೆ.

೪.೨ ಹೆಸರುಗಳ ಬಳಕೆ

ಕ್ರೀಡಾ ಪುಟದಲ್ಲಿ ಬಳಕೆಯಾಗುವ ಹೆಸರುಗಳು ಒಂದು ವಿಶೇಷ ಸ್ವರೂಪದಲ್ಲಿ ಬಳಕೆಯಾಗುತ್ತಿವೆ. ಇವು ಕ್ರೀಡಾ ಪುಟದ ತಲೆಬರಹ, ಆರಂಭಿಕ ಟಿಪ್ಪಣಿ ಹಾಗೂ ಸುದ್ದಿಯ ವರದಿಗಳಲ್ಲಿ ಕಂಡುಬರುತ್ತದೆ. ಹಾಗೆಯೇ ಸಂದರ್ಭೋಚಿತವಾದ ವಿಶೇಷ ಹಾಗೂ ಸಂಕ್ಷಿಪ್ತ ಹೆಸರುಗಳ ಬಳಕೆ ಆಗುತ್ತಿವೆ. ಅಂತಹ ಪದಗಳ ಬಳಕೆಯನ್ನು ಪ್ರಮುಖವಾಗಿ ಹೀಗೆ ಗುರುತಿಸಬಹುದು.

* ವ್ಯಕ್ತಿಗಳ ಹೆಸರುಗಳ ಬಳಕೆ
* ಸ್ಥಳವಾಚಿ / ದೇಶವಾಚಿ ಹೆಸರುಗಳ ಬಳಕೆ

೪.೨.೧. ವ್ಯಕ್ತಿಗಳ ಹೆಸರುಗಳ ಬಳಕೆ ಮತ್ತು ಪ್ರಯೋಗ

ಕ್ರೀಡಾಪುಟದ ಹೆಸರುಗಳಲ್ಲಿ ಕೆಲವು ಹೆಸರುಗಳನ್ನು ಮೊದಲನೇ ಹೆಸರಿನಿಂದ, ಕೆಲವು ಹೆಸರುಗಳನ್ನು ಎರಡನೇ ಹೆಸರಿನಿಂದ, ಇನ್ನೂ ಕೆಲವು ಹೆಸರುಗಳನ್ನು ಎರಡೂ ಹೆಸರಿನಿಂದ ಬಳಸಲಾಗುತ್ತಿದೆ. ಕ್ರಮವಾಗಿ ಸಚಿನ್, ತೆಂಡೂಲ್ಕರ್, ಸಚಿನ್ ತೆಂಡೂಲ್ಕರ್ ಇತ್ಯಾದಿ. ಇವುಗಳ ವಿವರಣೆ ಹೀಗಿದೆ.

ಸಚಿನ್ ತೆಂಡೂಲ್ಕರ್ : ಇಲ್ಲಿ 'ಸಚಿನ್ ತೆಂಡೂಲ್ಕರ್' ಎನ್ನುವ ಹೆಸರನ್ನು 'ಸಚಿನ್' ಅಥವಾ 'ತೆಂಡೂಲ್ಕರ್' ಎಂದು ಬಳಸಲಾಗುತ್ತದೆ.

ಉದಾ : ೧. 'ಶತಕವೀರ' 'ಸಚಿನ್'

೨. ಮೂರನೆಯ ಬ್ಯಾಟ್ಸಮ್ಯಾನ್ ಆಗಿ 'ತೆಂಡೂಲ್ಕರ್'.

ರಾಹುಲ್‌ದ್ರಾವಿಡ್ : ಇಲ್ಲಿ 'ರಾಹುಲ್ ದ್ರಾವಿಡ್' ಎನ್ನುವ ಹೆಸರನ್ನು ಕೆಲವೊಂದು ಬಾರಿ 'ರಾಹುಲ್' ಎಂತಲೂ 'ದ್ರಾವಿಡ' ಎಂತಲೂ ಬಳಕೆಯಾಗುತ್ತಿದೆ. ಇಲ್ಲಿ ಎರಡೂ ರೀತಿಯ ಸಂಕ್ಷಿಪ್ತ ಹೆಸರುಗಳ ಬಳಕೆಯೂ ಕಂಡುಬರುತ್ತದೆ.

ಉದಾ : ೧. 'ರಾಹುಲ್' ಬಳಗಕ್ಕೆ ಮುಖಭಂಗ.

೨. 'ದ್ರಾವಿಡ' ಮಿಂಚಿನ ಆಟಕ್ಕೆ ಮಣಿದ ಆಸ್ಟ್ರೇಲಿಯಾ.

ಅನಿಲ್ ಕುಂಬ್ಳೆ : ಇಲ್ಲಿ 'ಅನಿಲ್ ಕುಂಬ್ಳೆ' ಎನ್ನುವ ಹೆಸರನ್ನು 'ಕುಂಬ್ಳೆ' ಎಂದು ಅಂದರೆ ಎರಡನೇ ಹೆಸರು ಬಳಕೆಯಾಗುತ್ತಿರುವುದನ್ನು ಗುರುತಿಸಬಹುದು.

ಉದಾ : 'ಕುಂಬ್ಳೆ' ಬೌಲಿಂಗ್‌ಗೆ ಮಣಿದ ಪಾಕಿಸ್ತಾನ.

ಅಂಜುಬೇಬಿಜಾರ್ಜ್ : ಅಂಜುಬೇಬಿಜಾರ್ಜ್ ಎನ್ನುವ ಹೆಸರು 'ಅಂಜು' ಅಥವಾ 'ಜಾರ್ಜ್' ಎಂತಲೂ ಬಳಕೆಯಾಗುತ್ತಿದೆ.

ಉದಾ : ೧. ಉದ್ದಜಿಗಿತದಲ್ಲಿ ಕಂಚಿನ ಪದಕವನ್ನು ಗಳಿಸಿದ 'ಅಂಜು'

೨. ನಾಲ್ಕನೆ ಸುತ್ತಿಗೆ 'ಜಾರ್ಜ್' ಪ್ರವೇಶ.

ಸಾನಿಯಾ ಮಿರ್ಜಾ	:	ಈಕೆ ಭಾರತದ ಟೆನಿಸ್ ಆಟಗಾರ್ತಿ. 'ಸಾನಿಯಾ ಮಿರ್ಜಾ' ಎನ್ನುವ ಹೆಸರು 'ಸಾನಿಯಾ' ಎಂತಲೂ ('ಮಿರ್ಜಾ' ಕೆಲವೊಂದು ಬಾರಿ) ಸಂಕ್ಷಿಪ್ತ ಹೆಸರಿನಿಂದ ಬಳಕೆಯಾಗುತ್ತಿದೆ. ಉದಾ : ೧. ಫ್ರೆಂಚ್ ಓಪನ್ ಟೆನಿಸ್‌ನಲ್ಲಿ 'ಸಾನಿಯಾ' ಎರಡನೇ ಸುತ್ತಿಗೆ ಆಯ್ಕೆ. ೨. ವಿಶ್ವ ಟೆನಿಸ್‌ನಲ್ಲಿ ೪೭ನೇ ಸ್ಥಾನಕ್ಕೇರಿದ 'ಮಿರ್ಜಾ'.
ವೀರೇಂದ್ರ ಸೆಹ್ವಾಗ್	:	'ವೀರೇಂದ್ರ ಸೆಹ್ವಾಗ್' ಎನ್ನುವ ಹೆಸರು 'ಸೆಹ್ವಾಗ್' ಎಂತಲೂ 'ಸೆಹವಾಗ' ಎಂತಲೂ (ವೀರೂ ಎಂತಲೂ) ಬಳಕೆಯಾಗುತ್ತಿದೆ. ಉದಾ : ೧. ಸ್ಫೋಟಕ ಬ್ಯಾಟಿಂಗ್ ಆಡಿದ 'ಸೆಹ್ವಾಗ'. ೨. 'ಸೆಹವಾಗ'ರ ಅರ್ಧಶತಕದ ನೆರವಿನಿಂದ ಭಾರತಕ್ಕೆ ಜಯ ಲಭಿಸಿತು.
ಮರಿಯಾ ಶರಪೋವಾ	:	ಇಲ್ಲಿ 'ಮರಿಯಾ ಶರಪೋವಾ' ಎಂಬ ಹೆಸರು ಹೆಚ್ಚಾಗಿ 'ಶರಪೋವಾ' ಎಂಬ ಎರಡನೆ ಹೆಸರಿನಿಂದಲೆ ಬಳಕೆ ಯಾಗುತ್ತಿದೆ. ಉದಾ : ಸಾನಿಯಾ-'ಶರಪೋವಾ' ಇಂದು ನೇರ ಹಣಾಹಣಿ.
ಮಹೇಶ ಭೂಪತಿ	:	'ಮಹೇಶ ಭೂಪತಿ' ಎನ್ನುವ ಹೆಸರು 'ಭೂಪತಿ' ಎಂದು ಎರಡನೆ ಹೆಸರಿನಿಂದ ಹಾಗೂ ಪೂರ್ಣ ಹೆಸರಿನಿಂದಲೂ ಬಳಕೆಯಾಗುತ್ತಿದೆ. ಉದಾ : ಅಂತಿಮ ಸುತ್ತಿಗೆ 'ಭೂಪತಿ' ಆಯ್ಕೆ.
ಮಹ್ಮದ್ ಅಜರುದ್ದೀನ್	:	'ಮಹ್ಮದ್ ಅಜರುದ್ದೀನ್' ಎನ್ನುವ ಹೆಸರು 'ಅಜರ್' ಎಂತಲೂ, ಅಜರುದ್ದೀನ್ ಎಂತಲೂ ಬಳಕೆಯಾಗುತ್ತಿರುವುದು ಕಂಡುಬರುತ್ತದೆ. ಉದಾ : ೧. 'ಅಜರ್' ಭಾರತ ಕ್ರಿಕೆಟ್ ತಂಡದ ಶ್ರೇಷ್ಠ ಬ್ಯಾಟ್ಸ್‌ಮನ್. ೨. ಅಜರುದ್ದೀನ್‌ಗೆ ಕೊಕ್.

ಲಿಯಾಂಡರ್ ಪೇಸ್ : 'ಲಿಯಾಂಡರ್ ಪೇಸ್' ಎನ್ನುವ ಹೆಸರು ಎರಡನೇ ಹೆಸರಿನಿಂದ 'ಪೇಸ್' ಎಂತಲೂ ಮೊದಲಿನ ಹೆಸರಾದ 'ಲಿಯಾಂಡರ್' ಎಂತಲೂ ಬಳಕೆಗಾಯುತ್ತಿದೆ.

ಉದಾ : ೧. ಅಮೆರಿಕಾ ಓಪನ್ ಟೆನಿಸ್‌ನ ಗರ್ಲ್ಸ್‌ನಲ್ಲಿ 'ಪೇಸ್' ಅಮೋಘ ಆಟ.

೨. 'ಲಿಯಾಂಡರ್'-ಭೂಪತಿ ಜೋಡಿ ಶುಭಾರಂಭ.

ವ್ಯಕ್ತಿಗಳ ಹೆಸರುಗಳ ಪದಬಳಕೆಯಲ್ಲಿ ಕ್ರೀಡಾಪುಟ ಇಂದು ವಿಶೇಷವಾಗಿ ಕಂಡುಬರುತ್ತದೆ. ಈ ಮೇಲೆ ತಿಳಿಸಿದ ಹೆಸರುಗಳಷ್ಟೇ ಅಲ್ಲದೆ, ಇನ್ನೂ ಹಲವು ಹೆಸರುಗಳನ್ನು ಅದೇ ಮಾದರಿಯಲ್ಲಿ ಬಳಸಲಾಗುತ್ತಿದೆ. ಅಂತಹ ಹೆಸರುಗಳ ಪಟ್ಟಿಯನ್ನು ಹೀಗೆ ಗುರುತಿಸಲಾಗಿದೆ.

ಇಂಜಿಮಾಮ್ ಉಲ್ ಹಕ್ > ಇಂಜಿ, ಇಂಜಿಮಾಮ್, ಹಕ್

ಅಜಿತ್ ಅಗರಕರ್ > ಅಗರ್‌ಕರ್ ಅಥವಾ ಪೂರ್ಣ ಹೆಸರು

ಮಹ್ಮದ್ ಕೈಫ್ > ಕೈಫ್ ಅಥವಾ ಪೂರ್ಣ ಹೆಸರು

ರಿಕಿಪಾಂಟಿಂಗ್ > ಪಾಂಟಿಂಗ್, ರಿಕಿ

ಮರಿಯಾ ಶರಪೋವಾ > ಶರಪೋವಾ, ಪೂರ್ಣ ಹೆಸರು

ಮಹೇಶ್ ಭೂಪತಿ > ಭೂಪತಿ ಅಥವಾ ಪೂರ್ಣ ಹೆಸರು

ಸನತ್ ಜಯಸೂರ್ಯ > ಜಯಸೂರ್ಯ, ಸನತ್

ಗ್ರೇಗ್ ಚಾಪೆಲ್ > ಚಾಪೆಲ್

ಅರ್ಜುನ್ ರಣತುಂಗಾ > ರಣತುಂಗಾ

ಮುತ್ತಯ್ಯ ಮುರುಳೀಧರನ್ > ಮುರುಳೀಧರನ್, ಮುರುಳಿ

ಹಂಪಿ ಕೋನೇರು > ಹಂಪಿ ಅಥವಾ ಪೂರ್ಣ ಹೆಸರು

ರೋಜರ ಫೆಡರರ್ > ಫೆಡರರ್

ಸೆರೆನಾ ವಿಲಿಯಮ್ಸ್ > ಸೆರೆನಾ ಅಥವಾ ಪೂರ್ಣ ಹೆಸರು.

೪.೨.೨. ಸ್ಥಳಸೂಚಿ ಪದಗಳ ಬಳಕೆ ಮತ್ತು ಪ್ರಯೋಗ

ಕ್ರೀಡಾಪುಟದಲ್ಲಿ ಸ್ಥಳಸೂಚಿ ಪದಗಳು ವಿಶೇಷವಾಗಿ ಬಳಕೆಯಾಗುತ್ತವೆ. ಒಮ್ಮೆ ಪೂರ್ಣ ಹೆಸರುಗಳು ಕಂಡುಬಂದರೆ, ಇನ್ನೊಮ್ಮೆ ಆ ದೇಶದ ವೈಶಿಷ್ಟ್ಯದ ಹಾಗೂ ಪ್ರಾಣಿಗಳ ಹೆಸರುಗಳ ಮೂಲಕ ಸ್ಥಳಸೂಚಿ ಪದಪ್ರಯೋಗ ಕಂಡುಬರುತ್ತದೆ. ಆಸ್ಟ್ರೇಲಿಯಾ ದೇಶದ ಹೆಸರನ್ನು ಕೆಲವೊಮ್ಮೆ ಆ ದೇಶದ ರಾಷ್ಟ್ರಪ್ರಾಣಿಯಾದ 'ಕಾಂಗರೂ' ಪದದಿಂದ ಗುರುತಿಸಲಾಗುತ್ತದೆ (ಉದಾ. ಕಾಂಗರೂ ಗಳಿಗೆ ಜಯ).

ಆಸ್ಟ್ರೇಲಿಯಾ : ಆಸ್ಟ್ರೇಲಿಯಾ ಆಟಗಾರರನ್ನು ಗುರುತಿಸಲು ಆಸ್ಟ್ರೇಲಿಯಾ ಎನ್ನುವ ದೇಶವಾಚಿ ಪದವನ್ನು ಕ್ರೀಡಾಪುಟದಲ್ಲಿ ಭಿನ್ನವಾಗಿ ಬಳಸಲಾಗುತ್ತದೆ. 'ಆಸ್ಟ್ರೇಲಿಯಾ' ಎಂಬ ಪದದ ಬದಲಾಗಿ 'ಕಾಂಗರೂ' ಅಥವಾ 'ಆಸೀಸ್' ಎಂತಲೂ ಬಳಸಲಾಗುತ್ತದೆ.

ಉದಾ. ೧. 'ಕಾಂಗರೂ'ಗಳಿಗೆ ಒಲಿದ ಜಯ.

೨. ಭಾರತಕ್ಕೆ 'ಆಸೀಸ್' ೨೬೮ ರನ್‌ಗಳ ಸವಾಲು ಹಾಕಿದೆ.

ಶ್ರೀಲಂಕಾ : ಶ್ರೀಲಂಕಾ ಎನ್ನುವ ದೇಶವಾಚಿ ನಾಮಪದವು ಇದೆ. ಆದರೆ ಕ್ರೀಡಾಪುಟಗಳಲ್ಲಿ ಭಿನ್ನವಾಗಿ ಬಳಕೆಯಾಗುತ್ತದೆ. 'ಶ್ರೀಲಂಕಾ' ಎನ್ನುವ ಪದಕ್ಕೆ ಬದಲಾಗಿ 'ಲಂಕಾ' (ಲಂಕಾ ಹುಲಿಗಳು) 'ಸಿಂಹಳೀಯರು' ಎಂತಹ ವಿಶೇಷ ಪದಗಳನ್ನು ಬಳಸಲಾಗುತ್ತದೆ.

ಉದಾ. ೧. ಭಾರತ-'ಲಂಕಾ' ಇಂದು ಸೆಮಿಫೈನಲ್‌ನಲ್ಲಿ ಸೆಣಸಲಿವೆ.

೨. 'ಸಿಂಹಳೀಯರಿಗೆ' ದಕ್ಷಿಣಾಫ್ರಿಕಾ ವಿರುದ್ಧ ೫ ವಿಕೆಟ್‌ಗಳ ಜಯ.

ಹಾಗೆಯೇ ಮೇಲೆ ಪ್ರಯೋಗಿಸಿದ ಪದ ಪ್ರಯೋಗದಂತೆ ಇನ್ನೂ ಕೆಲವು ದೇಶವಾಚಿ ಅಥವಾ ಸ್ಥಳವಾಚಿ ಪದಗಳನ್ನು ಹೀಗೆ ಗುರುತಿಸಬಹುದು.

ಪಾಕಿಸ್ತಾನ > ಪಾಕ್

ಬಾಂಗ್ಲಾದೇಶ > ಬಾಂಗ್ಲಾ

ವೆಸ್ಟ್‌ಇಂಡೀಸ್ > ವಿಂಡೀಸ್ ಅಥವಾ ಕೆರಿಬಿಯನ್ಸ್

ನ್ಯೂಜಿಲ್ಯಾಂಡ್ > ಕೀವೀಸ್

ಇಂಗ್ಲೆಂಡ್ > ಆಂಗ್ಲರು

ದಕ್ಷಿಣ ಆಫ್ರಿಕ > ಹರಿಣ

ಹಾಲೆಂಡ್ > ಡಚ್ಚರು

೪.೩ ಕ್ರಿಯಾ ರೂಪಗಳ ಬಳಕೆ ಮತ್ತು ಪ್ರಯೋಗ

ಸಾಮಾನ್ಯ ಬಳಕೆಯಲ್ಲಿರುವ ಕ್ರಿಯಾಪದಗಳು ಕ್ರೀಡಾಪುಟದಲ್ಲಿ ವಿಶೇಷವಾಗಿ ಬಳಕೆಯಾಗುತ್ತಿರುವುದನ್ನು ಗುರುತಿಸಬಹುದು. 'ಕ್ರಿಯಾಪದ' ಎಂದರೆ ಕ್ರಿಯೆಯನ್ನು ಸೂಚಿಸುವ ಪದಗಳು. ಸಾಮಾನ್ಯವಾದ ಅರ್ಥ ನೀಡುವ, ಸ್ಪರ್ಧೆಗಳ ಆರಂಭ, ಅಂತ್ಯವನ್ನು ಸೂಚಿಸುವ ಕ್ರಿಯಾಪದಗಳು ಇಲ್ಲಿ ಮುಖ್ಯ. ಅಲ್ಲದೆ ನಿರಂತರತೆಯನ್ನು ಸೂಚಿಸುವ (ನಡೆಯುತ್ತಿರುವ, ನಡೆದ, ಮುಗಿದ ಇತ್ಯಾದಿ) ಪದಗಳು ಬಳಕೆಯಾಗುತ್ತವೆ.

ಫಲಿತಾಂಶ ಸೂಚಿಸುವ ಸಂದರ್ಭದಲ್ಲಿ ಬಳಕೆಯಾಗುವ ಸೋಲು, ಗೆಲುವನ್ನು ಸೂಚಿಸುವ ಸಂದರ್ಭದಲ್ಲಿ ಸೋಲು, ಗೆಲುವು, ಜಯಶಾಲಿಯಾಗು, ಪರಾಭವಹೊಂದು, ಪರಾಜಯ, ಅನುಭವಿಸು ಮುಂತಾದ ಕ್ರಿಯಾ ರಚನೆಗಳನ್ನು ಕಾಣಬಹುದು. ಕೆಲವು ಮೂಲ ಕ್ರಿಯಾಪದವಾದರೆ, ಇನ್ನು ಕೆಲವು ಆಗು, ಹೊಂದು, ಅನುಭವಿಸು ಮುಂತಾದ ಸಹಾಯಕ ಕ್ರಿಯಾಪದಗಳ ಸಹಾಯದಿಂದ ರಚಿತವಾದ ಕ್ರಿಯಾ ರಚನೆಗಳು. ಇಷ್ಟೇ ಅಲ್ಲದೆ ಕೆಲವೊಂದು ಕ್ರಿಯಾಪದಗಳು ಇಂಗ್ಲಿಶ್-ಕನ್ನಡ ಪದಗಳು ಸೇರಿ ರಚನೆಯಾಗುತ್ತವೆ. ಉದಾ. ವಿಕೆಟ್ ಪಡೆ, ಬ್ರೇಕ್ ಬೀಳು. ಇಲ್ಲಿ ವಿಕೆಟ್, ಬ್ರೇಕ್ ಇಂಗ್ಲಿಶ್ ಪದವಾಗಿದ್ದು, ಪಡೆ, ಬೀಳು ಕನ್ನಡ ಪದವಾಗಿವೆ.

ಯುದ್ಧವನ್ನು ವರ್ಣಿಸುವ ಮಾದರಿಯಲ್ಲಿ ಆಟಗಳ ಸುದ್ದಿಯನ್ನು ವೈಭವೀಕರಿಸಿ ಹೇಳಲಾಗುತ್ತದೆ. ಹಾಗಾಗಿ ಕ್ರೀಡಾ ಪುಟದಲ್ಲಿ ವಿಶೇಷ ರೀತಿಯ ಕ್ರಿಯಾಪದಗಳನ್ನು ಕಾಣಬಹುದು. ಅಂತಹ ಕ್ರಿಯಾಪದಗಳು ಕ್ರೀಡಾ ಪುಟದಲ್ಲಿ ವಿಶೇಷ ಅರ್ಥದಲ್ಲಿ ಪ್ರಯೋಗಗೊಂಡಿರುವುದು ಕಾಣುತ್ತೇವೆ. ಉದಾ. ಕಳೆಗಟ್ಟು, ನೆಲಕಚ್ಚು, ಕಂಗೆಡು ಇತ್ಯಾದಿಯಾಗಿ ಗುರುತಿಸಬಹುದು.

ಕ್ರೀಡಾಪುಟದಲ್ಲಿ ಬಳಕೆಯಾಗುವ ಇಂತಹ ಕ್ರಿಯಾಪದಗಳ ಕೆಲವೊಂದು ಪ್ರಯೋಗಗಳನ್ನು ಹೀಗೆ ನೋಡೋಣ.

ಕಲೆಹಾಕು : ಇಲ್ಲಿ 'ರನ್ ಕಲೆಹಾಕು' ಪದವು ಬಳಕೆಯಾಗಿದ್ದು 'ಕಲೆಹಾಕು' ಎನ್ನುವುದಕ್ಕೆ 'ಕೂಡಿಸು' 'ಒಟ್ಟುಗೂಡಿಸು' ಎಂಬ ಅರ್ಥಗಳಿವೆ. ರನ್ನನ್ನು ಕೂಡಿಸಲು 'ಕಲೆಹಾಕು' ಎಂಬ ಕ್ರಿಯಾಪದ ಇಂಗ್ಲಿಶ್‌ನ ರನ್ ಜೊತೆಗೂಡಿ ಬಳಕೆಯಾಗಿದೆ.

ಉದಾ. 'ರನ್ ಕಲೆಹಾಕು'ತ್ತಾ ಜಯದ ಮುನ್ನುಡಿ ಬರೆದರು.

ಖಾತೆ ತೆರೆ : ಖಾತೆ ಇದು ಉರ್ದು ಪದ. 'ಖಾತೆ ಎಂದರೆ ಪುಸ್ತಕ' ಎಂಬ ಅರ್ಥವೂ ಇದೆ. ಇಲ್ಲಿ 'ಪ್ರಾರಂಭ ಮಾಡು' ಎಂಬ ಸಂದರ್ಭ ವನ್ನು ಸೂಚಿಸಲಿಕ್ಕೆ 'ಖಾತೆ ತೆರೆ' ಎಂಬ ವಿಶೇಷವಾಗಿ ಕ್ರಿಯಾಪದವನ್ನು ಬಳಕೆ ಮಾಡಿದೆ.

ಉದಾ. ಬೌಂಡರಿಯೊಂದಿಗೆ ಖಾತೆ ತೆರೆದ ಸಚಿನ್ ಶತಕ ಪೂರೈಸಿದರು.

ಸೋಲುಣಿಸು/ಸೋಲುಂಡಿತು : ಸಾಮಾನ್ಯವಾಗಿ ಇಲ್ಲಿ 'ಸೋಲು' ಮತ್ತು 'ಉಣ್ಣು' ಪದಗಳು ಸೇರಿ ಸೋಲುಣ್ಣು-ಸೋಲುಂಡಿತು-ಸೋಲುಣಿಸಿತು ಎನ್ನುವ ಪದರಚನೆ ಆಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಬಳಕೆಯಿರುವ 'ಉಣ್ಣು' ಇಲ್ಲಿ ಬಳಕೆಗೊಳ್ಳುತ್ತಿದೆ.

ಉದಾ. ಭಾರತದ ಹಾಕಿ ಆಟಗಾರರು ಪಾಕಿಸ್ತಾನದ ಆಟಗಾರರಿಗೆ 'ಸೋಲುಣಿಸಿದರು'.

ವಿಕೆಟ್ ಪಡೆ : 'ಪಡೆ' ಎನ್ನುವ ಪದಕ್ಕೆ 'ತೆಗೆದು ಕೊ', 'ಗಳಿಸು' ಎಂಬ ಅರ್ಥಗಳಿವೆ. ಇಂಗ್ಲಿಶ್ ಕನ್ನಡ ಪದಗಳು ಒಟ್ಟುಗೂಡಿ ಕ್ರಿಯಾಪದ ರಚನೆಯಾಗಿದೆ. ವಿಕೆಟ್‌ನ್ನು ಪಡೆಯುವ ಸಂದರ್ಭ ದಲ್ಲಿ 'ಪಡೆ' ಎನ್ನುವ ಕ್ರಿಯಾಪದವನ್ನು ವಿಶೇಷವಾಗಿ ಬಳಸಲಾಗಿದೆ.

ಉದಾ. ಜಾಹಿರ್ ೫ 'ವಿಕೆಟ್ ಪಡೆ'ದು ಪಂದ್ಯ ಶ್ರೇಷ್ಠರಾದರು.

ತಾಲೀಮು ಆರಂಭಿಸು : 'ತಾಲೀಮು ಆರಂಭಿಸು' ಎನ್ನುವ ಪದದಲ್ಲಿ ತಾಲೀಮು ಎನ್ನುವ ಪದ ಕುಸ್ತಿ ಪಂದ್ಯದಲ್ಲಿ ಬಳಸಲಾಗುವ ಪದ. 'ಅಭ್ಯಾಸ' ಎನ್ನುವ ಅರ್ಥ ಹೊಂದಿದೆ. ಆರಂಭಿಸು ಕ್ರಿಯಾಪದ 'ಪ್ರಾರಂಭ ಮಾಡು' ಎನ್ನುವ ಅರ್ಥ ಹೊಂದಿದೆ. ತಾಲೀಮು ಎನ್ನುವ ವಿಶೇಷ ಪದ ಬಳಸಿ ಕ್ರಿಯಾಪದ ಮಾಡಲಾಗಿದೆ.

ಉದಾ. ಭಾರತ ಕ್ರಿಕೆಟ್ ತಂಡ ವಿಶ್ವಕಪ್‌ಗೆ ತಾಲೀಮು ಆರಂಭಿಸಿದೆ.

ಶತಕ ಸಿಡಿಸು : ಇಲ್ಲಿ 'ಶತಕ ಸಿಡಿಸು' ಎನ್ನುವ ಪದ ಬಳಕೆಯಾಗಿದೆ. 'ಸಿಡಿಸು' ಎನ್ನುವ ಕ್ರಿಯಾಪದ ವಿಶೇಷವಾದ ಸಂದರ್ಭದಲ್ಲಿ ಬಳಸಲಾಗಿದೆ. ಸಿಡಿಸು ಎಂದರೆ 'ಸ್ಫೋಟಿಸು', 'ಚಿಮ್ಮಿಸು' ಎಂದರ್ಥ. ಹಾಗೆಯೇ 'ಶತಕ' ಎಂದರೆ ನೂರು ಎಂದು. ನೂರು ರನ್‌ನ್ನು ಸ್ಫೋಟಿಸು ಎಂದರ್ಥದಲ್ಲಿ 'ಶತಕ ಸಿಡಿಸು' ಎಂಬ ವಿಶೇಷ ಕ್ರಿಯಾಪದ ಬಳಕೆ ಮಾಡಲಾಗಿದೆ.

ಉದಾ. ದ್ರಾವಿಡ್ ಶ್ರೀಲಂಕಾದ ವಿರುದ್ಧ 'ಶತಕ ಸಿಡಿಸಿ' ಜಯದತ್ತ ದಾಪುಗಾಲು ಹಾಕಿದರು.

ಮಣಿಸು : 'ಮಣಿಸು' ಎಂದರೆ ದಣಿವಾಗುವಂತೆ ಮಾಡು, ಸೋಲಿಸು ಎಂಬ ಅರ್ಥದಲ್ಲಿ ವಿಶೇಷ ಕ್ರಿಯಾಪದ ಬಳಕೆ ಆಗಿದೆ.

ಉದಾ. ಸಚಿನ್ ಪಾಕಿಸ್ತಾನದ ಬೌಲರ್‌ಗಳನ್ನು 'ಮಣಿಸು'ವುದರೊಂದಿಗೆ ಶತಕ ಪೂರೈಸಿದರು.

ಅಬ್ಬರಿಸು : ಇಲ್ಲಿ 'ಅಬ್ಬರಿಸು' ಎಂದರೆ 'ಆರ್ಭಟಿಸು' 'ನಡುಗಿಸು' ಎಂದರ್ಥವಿದೆ. 'ಅಬ್ಬರಿಸು' ಎನ್ನುವ ವಿಶೇಷ ಕ್ರಿಯಾಪದವೂ ಸಹ ಬಳಕೆ ಆಗಿದೆ.

ಉದಾ. ಅಬ್ಬರಿಸಿದ ಸಚಿನ್

ಮುಗ್ಗರಿಸು : ಇಲ್ಲಿ 'ಮುಗ್ಗರಿಸು' ಎಂಬ ಪದ ಬಳಕೆಯಾಗಿದ್ದು, ಮುಗ್ಗರಿಸು ಎಂದರೆ 'ಬೀಳು' 'ಎಡವು' ಎಂಬರ್ಥವಿದೆ. ಹಾಗೆಯೇ ಸೋಲು ಎನ್ನುವ ಅರ್ಥದಲ್ಲಿಯೂ ಇದೆ. ಈ ಪದವು ಸಹ ವಿಶೇಷವಾಗಿ ಬಳಕೆಯಾಗಿದೆ.

ಉದಾ. ಭಾರತದ ಬೌಲರ್‌ಗಳ ಎದುರು ಪಾಕಿಸ್ತಾನದ ಆಟಗಾರರು ಬ್ಯಾಟಿಂಗ್‌ನಲ್ಲಿ 'ಮುಗ್ಗರಿಸಿ'ದರು.

ಕಡಿವಾಣ ಹಾಕು : 'ಕಡಿವಾಣ ಹಾಕು' ಎಂದರೆ 'ನಿಲ್ಲಿಸು' ಎಂಬ ಅರ್ಥವಿದೆ. ಕಡಿವಾಣ ಪದ ವಿಶೇಷವಾಗಿ ಬಳಕೆಯಾಗಿದೆ.

ಉದಾ. ಆಸ್ಟ್ರೇಲಿಯಾದ ರನ್‌ಗಳ ಸುರಿಮಳೆಗೆ ಭಾರತದ ಬೌಲರ್‌ಗಳು 'ಕಡಿವಾಣ ಹಾಕಿ'ದರು.

ಈಗಾಗಲೆ ಬಳಕೆಯಲ್ಲಿರುವ ಕನ್ನಡದ ಕ್ರಿಯಾಪದಗಳನ್ನು ಕ್ರೀಡಾಪುಟದಲ್ಲಿ ವಿಶೇಷವಾಗಿ ಬಳಸಿ ವಿಶೇಷವಾದ ಅರ್ಥವನ್ನು ಪಡೆಯಲಾಗುತ್ತದೆ. ಅಂತಹ ಪದಗಳ ಬಳಕೆಯಿಂದ ಕ್ರೀಡಾಪುಟ ವಿಶೇಷವಾಗಿದೆ. ಹಾಗೆಯೇ ಹೀಗೆ ವಿಶೇಷವಾಗಿ ಬಳಕೆಯಾಗುವ ಕ್ರಿಯಾಪದಗಳು ಹೀಗಿವೆ.

ಪುಟಿದೇಳು : ಚೆಂಡಿನ ಕ್ರಿಯೆ ಸೂಚಿಸುವ ಪದ ಇದನ್ನು ಆಟದಲ್ಲಿ ಮೇಲೇಳುವ ಪ್ರಕ್ರಿಯೆಯನ್ನು ಸೂಚಿಸಲು ಬಳಸಲಾಗಿದೆ.

ರನ್ ಸಿಡಿಸು : ಸಿಡಿಯುವ ಕ್ರಿಯೆ ಒಮ್ಮೆಲೇ ಆಗುವಂಥದ್ದು, ಸ್ಫೋಟಕದ ಕ್ರಿಯೆಯನ್ನು ಸೂಚಿಸುವಂತಹ ಆಟವನ್ನು ಇಲ್ಲಿ ಲಕ್ಷ್ಯಾರ್ಥದ ಮೂಲಕ ಹೊರಗೆಡವಲಾಗಿದೆ.

ವಿಕೆಟ್ ಉದುರಿಸು : ಉದುರುವ ಕ್ರಿಯೆ ಯಾವುದಾದರೂ ಮರ / ಗಿಡಗಳ ಎಲೆ ಇತ್ಯಾದಿಗಳಿಗೆ ಸಂಬಂಧಿಸಿದ್ದು, ಅಂದರೆ ಅದೇ ಮಾದರಿಯಲ್ಲಿ ಆದಂತಹ ಕ್ರಿಯೆಯನ್ನು ಸೂಚಿಸಲು ಈ ಪದವನ್ನು ಬಳಸಲಾಗಿದೆ. ಇಲ್ಲಿ ಇಂಗ್ಲಿಶ್ ಕನ್ನಡ ಪದಗಳ ಬಳಕೆಯನ್ನು ಕಾಣಬಹುದು.

ಎಡವಿ ಬೀಳು	:	ಸಾಮಾನ್ಯವಾಗಿ ನಡೆಯುವಂತಹ ಸಂದರ್ಭದಲ್ಲಿ ಎಡವಿ ಬೀಳುವುದು ಸಹಜ. ಆದರೆ ಇಲ್ಲಿ ತಂಡ ಸೋಲನುಭವಿಸಿದಾಗ 'ಎಡವಿ ಬೀಳು' ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.
ಸುಲಭ ತುತ್ತಾಗು	:	'ತುತ್ತಾಗು' ಎಂಬ ಪದ 'ತುತ್ತು' ಎಂದರೆ ಸಾಮಾನ್ಯವಾಗಿ ಊಟ ಮಾಡುವ ಸಂದರ್ಭದಲ್ಲಿ ಬಳಕೆಯಾಗುವಂತಹ ಪದ. ಇಲ್ಲಿ ತಂಡ ಅಥವಾ ವ್ಯಕ್ತಿ ಅತೀ ಸರಳವಾಗಿ ಸೋಲನ್ನು ಅನುಭವಿಸಿದಾಗ ಎದುರಾಳಿ ತಂಡ ವ್ಯಕ್ತಿಗೆ 'ಸುಲಭ ತುತ್ತಾಯಿತು' ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಕ್ರೀಡಾಪುಟದಲ್ಲಿ ಬಳಕೆಯಾಗುವ ಕ್ರಿಯಾಪದಗಳ ಪಟ್ಟಿಯನ್ನು ಹೀಗೆ ಗುರುತಿಸಬಹುದು.

ಬದಿಗೊತ್ತು	ನಿದ್ದೆಗೆಡಿಸು
ಕಂಗೆಡು	ಬೇಟೆಯಾಡು
ಪರದಾಡು	ಕಚ್ಚಾಡು
ಉದುರಿಬೀಳು	ವಿಕೆಟ್ ಕೆಡವು
ರನ್ ಗಳಿಸು	ತಲೆ ಎತ್ತು
ಮುಯ್ಯಿತೀರಿಸು	ಒತ್ತಡಕ್ಕೆ ಸಿಲುಕು
ತಿಣುಕಾಡು	ನೆಲಕಚ್ಚು
ದಾಳಿ ಮಾಡು	ಸವಾಲು ಹಾಕು
ಜಯಭೇರಿ ಭಾರಿಸು	ಪಾರಮ್ಯಮೆರೆ
ತತ್ತರಿಸು	ಮಿಂಚು ಹರಿಸು
ಸದ್ದಡಗಿಸು	ಶರಣಾಗು
ಎದೆಗುಂದು	ರಂಗೇರಿಸು
ದಡಮುಟ್ಟಿಸು	ಪರಾಭವ ಹೊಂದು

ಗರಿಗೆದರು	ತಲೆ ಕೆಳಗಾಗು
ಸಡಿಲಿಸು	ನುಚ್ಚು ನೂರು ಮಾಡು / ನುಚ್ಚು ನೂರಾಗು
ಕಣಕ್ಕಿಳಿ	ಬಗ್ಗುಬಡಿ
ಹೊರಗಟ್ಟು	ಕಸರತ್ತು ನಡೆಸು
ತಿರುಗೇಟು ನೀಡು	ತೆರೆಬೀಳು

ಕ್ರೀಡಾಪುಟದಲ್ಲಿ ಬಳಕೆಯಾಗುವ ಕ್ರಿಯಾಪದಗಳಲ್ಲಿ ಸಾಮಾನ್ಯ ಬಳಕೆಯ ಕ್ರಿಯಾಪದಗಳು, ವಿಭಿನ್ನ ಕ್ಷೇತ್ರಗಳಲ್ಲಿ ಬಳಕೆಯಾಗುವ ಕ್ರಿಯಾಪದಗಳು, ಇಂಗ್ಲಿಶ್ ಪದಗಳೊಡನೆ ಸಹಾಯಕವಾಗಿ ಬರುವ ಕ್ರಿಯಾಪದಗಳು, ಲಕ್ಷಾರ್ಥ ಸೂಚಿಸುವ ಕ್ರಿಯಾ ರಚನೆಗಳು ಬಳಕೆಯಲ್ಲಿದ್ದು ಕ್ರೀಡಾಪುಟವನ್ನು ಶ್ರೀಮಂತಗೊಳಿಸಿವೆ.

೪.೪ ಗುಣವಾಚಿ ಪದಗಳ ಬಳಕೆ ಮತ್ತು ಪ್ರಯೋಗ

ಕ್ರೀಡಾಪುಟದ ಭಾಷಾ ಬಳಕೆಯಲ್ಲಿ ಗುಣಪದಗಳ ಪ್ರಯೋಗ ವಿಶೇಷವಾಗಿ ಕಂಡುಬರುತ್ತದೆ. ವಸ್ತು, ವಿಷಯಗಳ ಗುಣ ಸೂಚಿಸುವ ಪದಗಳನ್ನು 'ಗುಣಪದ'ಗಳೆಂದು ಕರೆಯುತ್ತಾರೆ. ಅಂತಹ ಗುಣಪದಗಳ ಬಳಕೆ ಕ್ರೀಡಾಪುಟದ ಭಾಷೆಯಲ್ಲಿ ಅತೀ ಹೇರಳವಾಗಿ ಬಳಕೆಯಾಗುತ್ತಿವೆ.

ಒಂದು ವಸ್ತು, ವಿಷಯದ ವಿಶೇಷ ಗುಣವನ್ನು, ಸ್ವರೂಪವನ್ನು ನೀಡುವ ಅಂಶಗಳು ಗುಣಪದಗಳಲ್ಲಿ ಒಳಗೊಂಡಿರುತ್ತದೆ. ಅಂತಹ ಗುಣಪದಗಳು ಇಂದಿನ ಕ್ರೀಡಾಪುಟದಲ್ಲಿ ಅತೀ ಮಹತ್ವವನ್ನು ಹೊಂದಿ ಬಳಕೆಯಾಗುವುದು ಒಂದು ವಿಶೇಷ ಸಂಗತಿ. ಒಂದರ್ಥದಲ್ಲಿ ಈ ಗುಣಪದಗಳೇ ಕ್ರೀಡಾಪುಟದ ಭಾಷೆಯ ಮಹತ್ವವನ್ನು ಹೆಚ್ಚಿಸಿವೆ ಎಂದರೆ ತಪ್ಪಾಗಲಾರದು.

ಕ್ರೀಡಾಪುಟದಲ್ಲಿ ಆಟಗಳ ಗುಣ ವಿಶೇಷಣಗಳನ್ನು ಹೇಳುವ ಸಂದರ್ಭದಲ್ಲಿ ಕೇವಲ ಕನ್ನಡ ಗುಣವಾಚಕಗಳೇ ಬಳಕೆಯಾಗುತ್ತವೆ. ಉದಾ. ಹೀನಾಯ ಸೋಲು, ರೋಚಕ ಜಯ, ಪ್ರಯಾಸದ ಜಯ, ಕಡಿಮೆ ಅಂತರದ ಜಯ, ಮಿಂಚಿನ ಆಟ ಇತ್ಯಾದಿ.

ಒಂದು ವಿಷಯವನ್ನು ಹೇಳುವ ಸಂದರ್ಭದಲ್ಲಿ ರಂಜನೆಯ ಭಾಷಾ ಪ್ರಯೋಗವನ್ನು ಕಾಣಬಹುದು. ಕೆಲವೊಂದು ಬಾರಿ ಇಂಗ್ಲಿಶ್ ಪದಗಳ ಬಳಕೆಯನ್ನು ಹೊಂದಿಯೂ ಸಹ ರೂಪಗೊಂಡಿವೆ. ಉದಾ. ಸ್ಫೋಟಕ ಬ್ಯಾಟಿಂಗ್, ಹ್ಯಾಟ್ರಿಕ್ ಗೆಲುವುನಂತಹ ಪದಗಳನ್ನು ಕಾಣಬಹುದು.

ಕ್ರೀಡಾಪುಟದಲ್ಲಿ ಬಳಕೆಯಾಗುವ ವಿವಿಧ ಮಾದರಿಯ ಗುಣವಾಚಕ ಪದಗಳ ಬಳಕೆ ಮತ್ತು ಪ್ರಯೋಗವನ್ನು ಈ ಮುಂದಿನ ಭಾಗದಲ್ಲಿ ಗುರುತಿಸಲಾಗಿದೆ.

ಐತಿಹಾಸಿಕ ಗೆಲುವು : ಇಲ್ಲಿ ಐತಿಹಾಸಿಕ ಎಂಬುದು ಗುಣಪದ. ಐತಿಹಾಸಿಕ ಎಂಬ ಪದಕ್ಕೆ 'ಇತಿಹಾಸ'ದ ಎಂಬ ಅರ್ಥವಿದೆ. ಇಲ್ಲಿ ದಾಖಲೆಯ ಆಟದ ಸಂದರ್ಭದಲ್ಲಿ ಐತಿಹಾಸಿಕ ಗೆಲುವು ಎಂಬ ಪದ ವಿಶೇಷವಾಗಿ ಆ ಗೆಲುವಿನ ಮಹತ್ವವನ್ನು ತಿಳಿಸಲಿಕ್ಕೆ ಮತ್ತು ಅದು ಇತಿಹಾಸ ನಿರ್ಮಿಸಿತು ಎನ್ನುವುದನ್ನು ಸಾರಲು ಈ ಪ್ರಯೋಗ ಕಂಡುಬರುತ್ತದೆ.

ಉದಾ. ಆಸ್ಟ್ರೇಲಿಯಾ ವಿರುದ್ಧ ಬಾಂಗ್ಲಾಕ್ಕೆ ಐತಿಹಾಸಿಕ ಗೆಲುವು.

ವೀರೋಚಿತ ಸೋಲು : ಇಲ್ಲಿ ವೀರೋಚಿತ ಎಂಬ ಪದದಲ್ಲಿ ವೀರರಿಗೆ ಉಚಿತವಾದ ಎಂಬ ಅರ್ಥ ಇದೆ. ಸೋತರೂ ಅಪಮಾನವಿಲ್ಲ ಎಂಬುದನ್ನು ತಿಳಿಸಲಿಕ್ಕೆ ವೀರೋಚಿತ ಸೋಲು ಎಂಬುದನ್ನು ಬಳಸಲಾಗಿದೆ.

ಉದಾ. ಬಾಂಗ್ಲಾಕ್ಕೆ ವೀರೋಚಿತ ಸೋಲು

ಮಿಂಚಿನ ಆಟ : ಇಲ್ಲಿ ಮಿಂಚಿನ ಆಟ ಎಂಬ ಪದ ಬಳಕೆಯಾಗಿದ್ದು, ಶಕ್ತಿಯುತ ಆಟದ ವೈಖರಿಯನ್ನು ಸೂಚಿಸಲು 'ಮಿಂಚು' ಎಂಬ ಪದ ಬಳಕೆ ಮಾಡಲಾಗಿದೆ.

ಉದಾ. ಸಚಿನ್ 'ಮಿಂಚಿನ ಆಟ' ; ಭಾರತಕ್ಕೆ ಜಯ

ಪ್ರಯಾಸದ ಜಯ : ಇಲ್ಲಿ ಪ್ರಯಾಸದ ಜಯ ಎಂಬ ಪದ ಬಳಕೆಯಾಗಿದ್ದು, ಪ್ರಯಾಸ ಎಂಬ ಪದಕ್ಕೆ 'ಕಷ್ಟ', 'ಪರಿಶ್ರಮ' ಎಂಬ ಅರ್ಥಗಳಿವೆ. ಜಯವು ಸುಲಭವಾಗಿ ದೊರೆಯದ ಸಂದರ್ಭದಲ್ಲಿ ಪ್ರಯಾಸ ಎಂಬ ಪದ ಸೇರಿಸಿ, 'ಪ್ರಯಾಸದ ಜಯ' ಎಂಬುದಾಗಿ ಬಳಕೆಯಾಗಿದೆ.

ಉದಾ. ಕರ್ನಾಟಕ ತಂಡಕ್ಕೆ 'ಪ್ರಯಾಸದ ಜಯ'

ಭರ್ಜರಿ ಗೆಲುವು : ಇಲ್ಲಿ ಭರ್ಜರಿ ಗೆಲುವು ಎಂಬ ಪದ ಬಳಕೆಯಾಗಿದ್ದು, 'ಗೆಲುವು' ಎಂಬ ಪದಕ್ಕೆ 'ಭರ್ಜರಿ' ಎಂಬ ಗುಣವಾಚಕ ಪದ ಬಳಕೆ ಮಾಡಲಾಗಿದೆ. ಗೆಲುವಿನ ಪ್ರಮಾಣವನ್ನು ಸೂಚಿಸಲು ಭರ್ಜರಿ ಪದ ಬಳಸಲಾಗಿದೆ.

ಉದಾ. ದ್ರಾವಿಡರ ತಾಳ್ಮೆಯ ಬ್ಯಾಟಿಂಗ್‌ನಿಂದ ಭಾರತವು ೭ ವಿಕೆಟ್‌ಗಳ ಅಂತರದಲ್ಲಿ 'ಭರ್ಜರಿ ಗೆಲುವು' ಸಾಧಿಸಿತು.

ಹೀನಾಯ ಸೋಲು : ಇಲ್ಲಿ ಹೀನಾಯ ಸೋಲು ಎಂಬ ಪದ ಬಳಕೆಯಾಗಿದ್ದು, ' 'ಹೀನಾಯ' ಮತ್ತು 'ಸೋಲು' ಎಂಬ ಎರಡು ಪದಗಳಿಂದ ಕೂಡಿದೆ. ಒಂದು ಆಟ ಅವಮಾನ ಆಗುವ ರೀತಿಯಲ್ಲಿ ಸೋಲನ್ನು ಕಂಡರೆ 'ಹೀನಾಯ ಸೋಲು' ಎಂದು ಬಳಸಲಾಗುತ್ತದೆ.

ಉದಾ. ಭಾರತಕ್ಕೆ 'ಹೀನಾಯ ಸೋಲು'.

ಸ್ಫೋಟಕ ಬ್ಯಾಟಿಂಗ್ : ಸ್ಫೋಟಕ ಎಂದರೆ 'ಸಿಡಿಯುವ' ಎಂಬ ಅರ್ಥವಿದೆ. ಅಂತಹ ಬ್ಯಾಟಿಂಗ್ ಆಡಿದ ಸಂದರ್ಭದಲ್ಲಿ ಸ್ಫೋಟಕ ಎಂಬ ವಿಶೇಷ ಪದ ಹೊಂದಿ 'ಸ್ಫೋಟಕ ಬ್ಯಾಟಿಂಗ್' ಎಂದು ಬಳಸಲಾಗಿದೆ.

ಉದಾ. ಧೋನಿ ಪಾಕಿಸ್ತಾನದ ವಿರುದ್ಧ 'ಸ್ಫೋಟಕ ಬ್ಯಾಟಿಂಗ್' ಪ್ರದರ್ಶನ.

ಚೇತೋಹಾರಿ ಜಯ : 'ಚೇತೋಹಾರಿ' ಮತ್ತು 'ಜಯ' ಎಂಬ ಎರಡು ಪದಗಳಿಂದ ಕೂಡಿದ್ದು ಚೇತೋಹಾರಿ ಎಂದರೆ ಚೇತರಿಕೆ, ಬೆಳವಣಿಗೆ ಎಂದರ್ಥವಿದೆ. ಚೇತರಿಕೆಯ ಜಯ ಹೊಂದಿದಂತಹ ಸಂದರ್ಭದಲ್ಲಿ ವಿಶೇಷವಾಗಿ 'ಚೇತೋಹಾರಿ ಜಯ' ಎಂಬ ಗುಣಪದದ ಬಳಕೆಯಾಗಿದೆ.

ಉದಾ. ಭಾರತದ ವಿರುದ್ಧ ಬಾಂಗ್ಲಾಕ್ಕೆ 'ಚೇತೋಹಾರಿ' ಜಯ ಲಭಿಸಿದೆ.

ಹ್ಯಾಟ್ರಿಕ್ ಗೆಲುವು : ಹ್ಯಾಟ್ರಿಕ್ ಎನ್ನುವ ಇಂಗ್ಲೀಶ್ ಪದ ಸತತ ಮೂರು ಎಂಬ ಸಂಖ್ಯೆಯನ್ನು ಹೇಳುವಂತಹದ್ದು. ಒಂದು ತಂಡ ಸತತವಾಗಿ ಮೂರು ಬಾರಿ ಗೆಲುವನ್ನು ಸಾಧಿಸಿದಾಗ 'ಹ್ಯಾಟ್ರಿಕ್ ಗೆಲುವು' ಎಂಬ ವಿಶೇಷ ಗುಣಪದ ಹೊಂದಿ ಬಳಕೆಯಾಗುತ್ತಿದೆ.

ಉದಾ. ಆಸ್ಟ್ರೇಲಿಯಾ 'ಹ್ಯಾಟ್ರಿಕ್ ಗೆಲುವ'ನ್ನು ಸಾಧಿಸುವುದರ ಮೂಲಕ ಸರಣಿ ತನ್ನದಾಗಿಸಿಕೊಂಡಿದೆ.

ಆಘಾತಕಾರಿ ಸೋಲು : ಇಲ್ಲಿ ಆಘಾತ ಎಂದರೆ ಪೆಟ್ಟು, ಅಪಾಯ ಎಂಬರ್ಥವಿದೆ. ಯಾವುದೇ ಆಟದಲ್ಲಿ ದುಃಖವುಂಟು ಮಾಡುವ ರೀತಿಯಲ್ಲಿ ಸೋಲನ್ನು ಹೊಂದಿದಾಗ 'ಆಘಾತಕಾರಿ ಸೋಲು' ಎಂಬ ಗುಣಪದ ಬಳಕೆಯಾಗುತ್ತಿದೆ.

ಉದಾ. ಇದು ಭಾರತ ತಂಡಕ್ಕೆ 'ಆಘಾತಕಾರಿ ಸೋಲು'.

ಈ ಮೇಲೆ ತಿಳಿಸಿದ ಗುಣಪದಗಳು ಇಂದಿನ ಕ್ರೀಡಾಪುಟದಲ್ಲಿ ಸಂದರ್ಭೋಚಿತವಾಗಿ ಬಳಕೆಯಾಗುತ್ತವೆ. ಆ ವಸ್ತುವಿನ ಆ ಆಟದ ಮಹತ್ವವನ್ನು ಹೆಚ್ಚಿಸಲಿಕ್ಕೆ ಇಂತಹ ಪದ ಬಳಕೆ ನಡೆದಿದೆ. ಕ್ರೀಡಾಪುಟದಲ್ಲಿ ಇನ್ನೂ ಹಲವು ಗುಣಪದಗಳು ಬಳಕೆಯಾಗುತ್ತಿವೆ. ಅಂತಹವುಗಳ ಪಟ್ಟಿಯನ್ನು ಹೀಗೆ ಗುರುತಿಸಬಹುದು.

ಇತರ ಗುಣವಾಚಿ ಪದಗಳ ಬಳಕೆ

ನೈಜ ಆಟ

ಶ್ರೇಷ್ಠ ಆಟ

ಮಾಗಿದ ಹೋರಾಟ

ದುರ್ಬಲ ಪರಾಕ್ರಮ

ಭಾರಿ ಅಂತರದ ಗೆಲುವು

ಪ್ರತಿಷ್ಠೆಯ ಕದನ / ಪ್ರತಿಷ್ಠೆಯ ಪಂದ್ಯ

ಭಾರಿ ಗೆಲುವು

ಅಮೋಘ ಜಯ

ಶ್ರೇಷ್ಠ ಬ್ಯಾಟಿಂಗ್

ಸೇಡಿನ ಗೆಲುವು

ಅಚ್ಚರಿಯ ಆಟ

ಅಚ್ಚರಿಯ ಫಲಿತಾಂಶ

ಅಬ್ಬರದ ಬ್ಯಾಟಿಂಗ್

ರೋಚಕ ಹಣಾಹಣಿ

ರೋಚಕ ಜಯ

ಆತುರದ ಸೋಲು

ರಕ್ಷಣಾತ್ಮಕ ಆಟ

ಆಕರ್ಷಕ ಬ್ಯಾಟಿಂಗ್

ಕಳಪೆ ಆಟ / ಬ್ಯಾಟಿಂಗ್

ಕಠಿಣ ಸವಾಲು

ಸತ್ವ ಪರೀಕ್ಷೆ

ಅಗ್ನಿ ಪರೀಕ್ಷೆ

ಕಾತರದ ಗೆಲುವು

ಪ್ರತಿಷ್ಠೆಯ ಪಣ

ಆಘಾತದ ಸೋಲು

ಅಪಾಯಕಾರಿ ಎಸೆತ

ಮಾರಕ ದಾಳಿ

ಅಚ್ಚರಿಯ ಶತಕ

ತುರುಸಿನ ಸ್ಪರ್ಧೆ

ಹ್ಯಾಟ್ರಿಕ್ ಕನಸು

ಸಮರ್ಥ ಆಟ

ಅಗತ್ಯ ಗೆಲುವು

ಸ್ಮರಣೀಯ ವಿಜಯ

ಗೆಲುವಿನ ಸೋಲು

ಜಿದ್ದಾಜಿದ್ದಿಯ ಹೋರಾಟ

ಬಿರುಗಾಳಿಯ ಬ್ಯಾಟಿಂಗ್

ಅರ್ಹ ಜಯ

ನಿರ್ಣಾಯಕ ಕದನ

ಚೊಚ್ಚಲ ಶತಕ / ಪ್ರಶಸ್ತಿ

ಬಲಿಷ್ಠ ಸ್ಕೋರು

ಅಬ್ಬರಿಸಿದ ಬ್ಯಾಟಿಂಗ್

ಮಹತ್ವದ ಪಂದ್ಯ

ಭರ್ಜರಿ ಬೇಟೆ

ಶಿಸ್ತುಬದ್ಧ ಬೌಲಿಂಗ್

ವಿಶ್ವಾಸದ ಗೆಲುವು

ಮೋಜಿನ ಪಂದ್ಯ

ನೀರಸದ ಆಟ

ದಿಟ್ಟ ಆಟ

ಅದೃಷ್ಟದ ಜಯ

ಸ್ಫೋಟಕ ಆಟ

ಉರುಳಾದ ಸೋಲು

ಭಗ್ನಗೊಂಡ ಕನಸು

ಬೃಹತ್ ಮೊತ್ತ

ಹೀಗೆ ಆಟದ ವೈಖರಿಯನ್ನು ಸೂಚಿಸಲು ಹಲವಾರು ಗುಣವಾಚಕಗಳನ್ನು ಬಳಸಲಾಗುತ್ತದೆ. ಕೆಲವು ಗುಣವಾಚಕಗಳು ಸಾಮಾನ್ಯ ಮಾತಿನಲ್ಲೂ ಬಳಕೆಯಾಗುತ್ತಿದೆ. ಆದರೆ ಅವುಗಳನ್ನು ಆಟಕ್ಕೆ ಸಂಬಂಧಿಸಿದ ಪದಗಳೊಡನೆ ಬಳಸಿ, ಆಟದ ಗುಣವನ್ನು ಸೂಚಿಸಲು ಬಳಸಲಾಗಿದೆ. ಇವುಗಳಲ್ಲಿ ಕೆಲವು ಪ್ರಮಾಣ ಸೂಚಿಸುವಂತೆ ಬಳಕೆಯಾದರೆ ಇನ್ನು ಕೆಲವು ಶ್ರೇಷ್ಠತೆಯನ್ನು ಸೂಚಿಸಲು ಬಳಕೆಯಾಗಿವೆ.

೪.೫ ಸಂಖ್ಯಾವಾಚಿ ಪದಗಳ ಬಳಕೆ ಮತ್ತು ಪ್ರಯೋಗ

ಕ್ರೀಡಾಪುಟದಲ್ಲಿನ ಭಾಷಾ ಬಳಕೆಯಲ್ಲಿ ಸಂಖ್ಯಾವಾಚಿ ಪದಗಳು ವಿಶೇಷವಾಗಿ ಕಂಡುಬರುತ್ತವೆ. ಸಂಖ್ಯಾವಾಚಿ ಪದಗಳು ಎಂದರೆ ಅಂಕಿಗಳು ಸಂಖ್ಯೆಗಳನ್ನು ಸೂಚಿಸುವಂತಹ ಪದಗಳಿಗೆ ಸಂಖ್ಯಾವಾಚಕ ಪದಗಳು ಎಂದು ಕರೆಯುತ್ತಾರೆ.

ಇಂತಹ ಸಂಖ್ಯೆಯನ್ನು ಸೂಚಿಸುವಂತ ಪದಗಳು ಕ್ರೀಡಾಪುಟದಲ್ಲಿ ಅತೀ ಹೇರಳವಾಗಿ ಬಳಕೆಯಾಗುತ್ತಿರುವುದು ಒಂದು ವಿಶೇಷ ಸಂಗತಿಯಾಗಿದೆ. ಆಟಗಳ ಫಲಿತಾಂಶ ಇಂದು ಕೇವಲ ಅಂಕಿ ಸಂಖ್ಯೆಗಳ ಮೇಲೆ ನಿರ್ಧರಿಸಲಾಗುತ್ತದೆ. ಆಟಗಳ ಫಲಿತವನ್ನು ಗುರುತಿಸುವಲ್ಲಿ ಅಂಕಿಸಂಖ್ಯೆಗಳೇ ಮುಖ್ಯ. ಹಾಗಾಗಿ ಕ್ರೀಡಾಪುಟದಲ್ಲಿ ಹೆಚ್ಚಿನ ರೀತಿಯ ಸಂಖ್ಯಾವಾಚಕ ಪದಗಳು ಬಳಕೆ ಇರುವುದು ಕಂಡುಬರುತ್ತದೆ.

ಆಟಗಳ ಪ್ರತಿಯೊಂದು ಹಂತಕ್ಕೂ ಸಂಖ್ಯೆಗಳೇ ಮುಖ್ಯ. ಆಟಗಳ ಸೋಲು, ಗೆಲುವು ನಿರ್ಧರಿಸುವುದೇ ಅಂಕಿಸಂಖ್ಯೆಗಳಿಂದ ಹಾಗಾಗಿ ಕ್ರೀಡಾಪುಟದ ಭಾಷಾ ಬಳಕೆಯಲ್ಲಿ ಇಂದು ಸಂಖ್ಯಾವಾಚಕಗಳು ಹೇರಳವಾಗಿದ್ದು, ಕೆಲವು ವಿಶೇಷ ಭಾಷಾ ರೂಪಗಳಾಗಿಯೂ ಪ್ರಯೋಗ ವಾಗಿರುವುದು ಕಾಣುತ್ತದೆ.

ಹೀಗೆ ಬಳಕೆಯಾಗುವ ಸಂಖ್ಯಾವಾಚಕಗಳನ್ನು ಈ ರೀತಿಯಾಗಿ ನೋಡಬಹುದು.

* ಮೂಲಾಂಕ ಸಂಖ್ಯಾವಾಚಿ ಪದಗಳು.
* ಕ್ರಮಾಂಕ ಸಂಖ್ಯಾವಾಚಿ ಪದಗಳು.
* ದಶಮಾಂಶ ಸಂಖ್ಯಾವಾಚಿ ಪದಗಳು.
* ಇತರೆ ಸಂಖ್ಯಾವಾಚಿ ಪದಗಳು.

ಕ್ರೀಡಾಪುಟಗಳಲ್ಲಿ ಬಳಕೆಯಾಗುವಂತಹ ಸಂಖ್ಯಾವಾಚಿಗಳನ್ನು ಈ ಮೇಲೆ ತಿಳಿಸಿದ ರೀತಿಯಲ್ಲಿ ವರ್ಗೀಕರಿಸಿ ನೋಡಬಹುದಾಗಿದೆ.

೪.೫.೧ ಮೂಲಾಂಕ ಸಂಖ್ಯಾವಾಚಿ ಪದ ಪ್ರಯೋಗಗಳು

ಯಾವುದೇ ಭಾಷೆಯಲ್ಲಿನ ವಸ್ತುಗಳ ಪ್ರಮಾಣವನ್ನು ಸೂಚಿಸಲು ಬಳಸುವ ಅಂಕಿಗಳೇ ಮೂಲಾಂಕಗಳು. ಒಂದು, ಎರಡು, ಮೂರು, ನೂರು ಇತ್ಯಾದಿಗಳು ಈ ವರ್ಗಕ್ಕೆ ಸೇರುತ್ತವೆ. ಇಂತಹ ಸಂಖ್ಯಾವಾಚಿ ಪದಗಳು ಕ್ರೀಡಾಪುಟದಲ್ಲಿ ವಿವಿಧ ರೀತಿಯಲ್ಲಿ ಬಳಕೆಯಾಗುತ್ತಿವೆ.

ಇಂದು ಆಟಗಳ ಫಲಿತಾಂಶವನ್ನು ನಿರ್ಧರಿಸುವುದು ಪಡೆದ ಅಂಕಗಳ ಆಧಾರದ ಮೇಲೆ. ಉದಾ. ೧೮೫ ರನ್‌ಗಳ ಭಾರಿ ಅಂತರದಿಂದ ಭಾರತಕ್ಕೆ ಸೋಲು, ೮ ವಿಕೆಟ್‌ಗಳ ಜಯ ಇತ್ಯಾದಿ. ಇಲ್ಲಿ ಬಳಕೆಯಾದ ೧೮೫ ರನ್ ೮ ಎಂಬ ಅಂಕಿಗಳು ಮೂಲಾಂಕಗಳಾಗಿವೆ. ಕ್ರೀಡಾಪುಟದಲ್ಲಿ ಬಳಕೆಯಾಗುವ ಮೂಲಾಂಕಗಳ ಮಾದರಿ ಹೀಗಿವೆ.

೧. ೧೮ ರನ್‌ಗಳ ಜಯ.

೨. ೨-೩, ೫-೮ ನೇರ ಸೆಟಗಳ ಅಂತರದಲ್ಲಿ ಸಾನಿಯಾ ಪರಾಭವ.

೩. ೫-೮ರ ಗೋಲುಗಳ ಅಂತರದಿಂದ ಭಾರತದ ಹಾಕಿ ತಂಡಕ್ಕೆ ಜಯ.

೪. ವಿಶ್ವ ನಂ.೧ ಆಸ್ಟ್ರೇಲಿಯಾ.

೫. ೫೦ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೩೫೮ ರನ್ ಗಳಿಸಿದೆ.

೬. ೮ರ ಘಟ್ಟಕ್ಕೆ ಶ್ರೀಲಂಕಾ ಆಯ್ಕೆ.

೭. ಭಾರತಕ್ಕೆ ೯೧ ರನ್‌ಗಳಿಂದ ಸೋಲು.

೮. ಭಾರತಕ್ಕೆ ೫ ವಿಕೆಟ್‌ನಿಂದ ಜಯ.

೯. ಭಾರತವು ೭ ವಿಕೆಟ್ ಕಳೆದುಕೊಂಡು ೪೫ ಓವರ್‌ಗಳಲ್ಲಿ ೨೫೦ ರನ್ ಸೇರಿಸಿತು.

೧೦. ೧೯೯೯, ೨೦೦೩, ೨೦೦೭ ರಲ್ಲಿ ಆಸ್ಟ್ರೇಲಿಯಾ ಹ್ಯಾಟ್ರಿಕ್ ಜಯ ಸಾಧಿಸಿದೆ.

ಹೀಗೆ ಬಳಕೆಯಾಗುವಾಗ ಸಂಖ್ಯೆಗಳನ್ನು ಅಂಕಿ ಹಾಗೂ ಅಕ್ಷರಗಳಲ್ಲಿ ಸೂಚಿಸಲಾಗುತ್ತದೆ. ಅಕ್ಷರಗಳಲ್ಲಿ ಬಳಕೆಯಾಗುವಾಗ, ಒಂದು ಎರಡು ಮೂರು ನಾಲ್ಕು ಐದು ಆರು ಏಳು ಎಂಟು ಒಂಬತ್ತು ಹತ್ತು ನೂರು ಎಂಬ ಸಂಖ್ಯೆಗಳು ಮಾತ್ರ ಬಳಕೆಯಾಗುತ್ತವೆ. ಉಳಿದವು ಅಂಕಿಗಳಲ್ಲಿ (೨೫೧, ೬೦೦ ಇತ್ಯಾದಿ) ಬಳಕೆಯಾಗುತ್ತವೆ.

೪.೫.೨. ಕ್ರಮಾಂಕ ಅಥವಾ ಕ್ರಮಸೂಚಿ ಸಂಖ್ಯಾವಾಚಿಗಳ ಪದ ಪ್ರಯೋಗ

ಯಾವುದೇ ವಸ್ತುವಿನ ಕ್ರಮವನ್ನು ಸೂಚಿಸುವ ಸಂಖ್ಯಾವಾಚಿಗಳೇ ಕ್ರಮಾಂಕಗಳು. ಒಂದನೆಯ, ಎರಡನೆಯ, ನೂರನೆಯ ಇತ್ಯಾದಿಗಳು ಅವು ಪಡೆದಿರುವ ಸ್ಥಾನವನ್ನು ಸೂಚಿಸುತ್ತವೆ. ಕ್ರೀಡಾಪುಟದ ಭಾಷೆಯಲ್ಲಿ ಇವುಗಳ ಬಳಕೆ ಇದ್ದೇ ಇರುತ್ತದೆ. ಏಕೆಂದರೆ ಆಟಗಾರರ ಗುಣ ನಿರ್ದೇಶನ ಮಾಡುವಾಗ, ಸ್ಥಾನ ಘೋಷಿಸುವುದು ಅವರು ಪಡೆದ ಸ್ಥಾನವನ್ನು ಅನುಸರಿಸಿಯೇ.

ಆಟಗಳ ಮಾಹಿತಿಯನ್ನು ನೀಡುವಾಗ, ಕ್ರೀಡಾಪುಟದ ಭಾಷಾ ಬಳಕೆಯಲ್ಲಿ ಕ್ರಮಸೂಚಿ ಸಂಖ್ಯಾವಾಚಿಗಳ ಪದ ಬಳಕೆ ಗುರುತಿಸಬಹುದು. ಕ್ರಮಸೂಚಿ ಸಂಖ್ಯಾವಾಚಿಗಳು ಒಂದು ಕ್ರಮಾಂಕವನ್ನು ಅಂದರೆ ಸ್ಥಾನವನ್ನು ನಿರ್ದೇಶಿಸುವಂತವುಗಳು. ಉದಾ. ವಿಶ್ವಕಪ್ ೨ನೇ ಸುತ್ತಿಗೆ ತಲುಪಿದ ಬಾಂಗ್ಲಾ. ಇಲ್ಲಿ ಬಳಕೆಯಾದ <u>೨ನೇ ಸುತ್ತು</u> ಎನ್ನುವುದು ಒಂದು ಸ್ಥಾನ, ಕ್ರಮಾಂಕ ಅಥವಾ ಕ್ರಮವನ್ನು ಸೂಚಿಸುತ್ತದೆ.

ಇಂತಹ ಪದಗಳನ್ನು ಸೇರಿಸಿ ಕ್ರೀಡಾಪುಟದ ಭಾಷಾ ಬಳಕೆ ಆಗುತ್ತಿದೆ. ಕೆಲವು ಕ್ರಮಾಂಕ ಸಂಖ್ಯಾವಾಚಿಗಳ ಬಳಕೆಯನ್ನು ಹೀಗೆ ನೋಡಬಹುದು.

೧. <u>೩</u>ನೆ ಆಟಗಾರರಾಗಿ ಸಚಿನ್ ತೆಂಡೂಲ್ಕರ್ ಆಡಲಿದ್ದಾರೆ.
   (<u>ಮೂರನೇ</u> ಎಂತಲೂ ಬಳಕೆಯಾಗುತ್ತಿದೆ.)

೨. <u>೫</u>ನೆಯವರಾಗಿ ಕಣಕ್ಕಿಳಿದರು.

೩. <u>ಐದನೇ</u> ಬಾರಿಗೆ ಫೈನಲ್ ಪ್ರವೇಶ.

೪. ವಿಶ್ವಕಪ್ <u>೮</u>ರ (ಎಂಟರ) ಸ್ಥಾನದಲ್ಲಿ ವಿಂಡೀಸ್.

೫. <u>ಮೂರನೇ</u> ಸ್ಥಾನ ಕಾಯ್ದುಕೊಳ್ಳಲು ಲಂಕಾಕ್ಕೆ ಮಹತ್ವದ ಪಂದ್ಯ.

೬. ವಿಶ್ವಕಪ್ <u>೩</u>ನೇ (ಮೂರನೇ) ಸುತ್ತಿಗೆ ತಲುಪಿದ ಬಾಂಗ್ಲಾ.

೭. <u>ನಾಲ್ಕನೇ</u> ಕ್ರಮಾಂಕದಲ್ಲಿ ಧೋನಿ ಬ್ಯಾಟಿಂಗ್.

೮. <u>೫೭</u>ನೇ ಸ್ಥಾನಕ್ಕೆ ಏರಿದ ಸಾನಿಯಾ.

೯. ಭಾರತಕ್ಕೆ ಇದು <u>೭</u>ನೇ (ಏಳನೆಯ) ಪಂದ್ಯ.

೧೦. <u>೧೦೦</u>ನೇ (ನೂರನೇ) ಏಕದಿನ ಪಂದ್ಯವನ್ನು ಆಡಿದ ಸಚಿನ್ ತೆಂಡೂಲ್ಕರ್.

ಕ್ರೀಡಾಪುಟದಲ್ಲಿ ಇಂತಹ ಭಾಷಾ ಬಳಕೆಯನ್ನು ಹೊಂದಿರುವ ಸಂಖ್ಯಾವಾಚಿಗಳ ಪ್ರಯೋಗ ವನ್ನು ನೋಡಬಹುದು.

೪.೫.೩. ದಶಮಾಂಶ ಸಂಖ್ಯಾವಾಚಿಗಳ ಬಳಕೆ ಮತ್ತು ಪ್ರಯೋಗ

ದಶಮಾಂಶ ಸಂಖ್ಯಾವಾಚಿಗಳು ಸಂಖ್ಯಾವಾಚಕ ಪದಗಳಲ್ಲಿನ ಒಂದು ಪ್ರಕಾರವಾಗಿದೆ. ಆಟಗಳ ಫಲಿತಾಂಶವನ್ನು ಹಾಗೂ ಸರಾಸರಿಯನ್ನು ಹೇಳುವ ಸಂದರ್ಭದಲ್ಲಿ ಇಂತಹ ದಶಮಾಂಶ ಅಂಕಿಗಳು ಕ್ರೀಡಾಪುಟದ ಭಾಷಾ ಬಳಕೆಯಲ್ಲಿ ಪ್ರಯೋಗಗೊಂಡಿರುವುದು ಹೇರಳವಾಗಿ ಕಂಡುಬರುತ್ತದೆ. ಉದಾ. ೪೯.೩ ಓವರ್‌ಗಳಲ್ಲಿ ಭಾರತ ಜಯ ತಲುಪಿತು. ಇಲ್ಲಿ ದಶಮಾಂಶ ಪದ್ಧತಿಯ ಸಂಖ್ಯಾವಾಚಿ ಬಳಕೆಗೊಂಡಿರುವುದು ಸ್ಪಷ್ಟವಾಗಿದೆ.

ಇಂತಹ ದಶಮಾಂಶ ಸಂಖ್ಯಾವಾಚಿಗಳು ಕ್ರೀಡಾಪುಟದಲ್ಲಿ ಅತೀ ಮುಖ್ಯವಾಗಿ ಕಂಡು ಬರುತ್ತವೆ. ಆಟಗಳ ಸೋಲು, ಗೆಲುವು ಇತ್ಯಾದಿ ಮಾಹಿತಿಯನ್ನು ನೀಡುವಲ್ಲಿ ಕೆಲವು ದಶಮಾಂಶ ಸಂಖ್ಯಾವಾಚಕಗಳ ಪ್ರಯೋಗಗಳನ್ನು ಹೀಗೆ ಗುರುತಿಸಬಹುದು.

೧. ಟೆಸ್ಟ್‌ನಲ್ಲಿ ಅತ್ಯಧಿಕ ಸರಾಸರಿ ೫೭.೪೬ ಹೊಂದಿರುವ ರಾಹುಲ್ ದ್ರಾವಿಡ್.

೨. ಭಾರತವು ಸರಾಸರಿ ೪೩.೫ ಓವರ್‌ಗಳಲ್ಲಿ ಜಯ ತಲುಪಿತು.

೩. ಪ್ರತಿ ಓವರಿಗೆ ೩.೩ ರನ್ ಬೇಕು.

೪. ಭಾರತ ಶ್ರೀಲಂಕಾ ೩.೩ ಅಂಕಗಳನ್ನು ಹೊಂದಿ ನಾಲ್ಕನೇ ಸ್ಥಾನದಲ್ಲಿವೆ.

೫. ಭಾರತದ ರನ್‌ರೇಟ್ ೫.೪ ಇದೆ.

೬. ೩೩.೩ ಓವರ್‌ಗಳಿಗೆ ಶ್ರೀಲಂಕಾ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು.

ಕ್ರೀಡಾಪುಟದಲ್ಲಿ ಬಳಕೆಯಾಗುವ ಸಂಖ್ಯಾವಾಚಿಗಳ ವೈವಿಧ್ಯವನ್ನು ಮೇಲಿನಂತೆ ಗುರುತಿಸಬಹುದಾಗಿದೆ.

೪.೫.೪. ಇತರೆ ಸಂಖ್ಯಾವಾಚಿ ಪದಗಳು

ಇವು ಸಾಮಾನ್ಯವಾಗಿ ಅಕ್ಷರಗಳಲ್ಲಿ ಬಳಕೆಯಾಗುತ್ತವೆ. ಇವು ಕನ್ನಡ ಮತ್ತು ಇಂಗ್ಲಿಶ್ ಎರಡೂ ಭಾಷೆಗಳಲ್ಲಿವೆ.

ಉದಾ. ಬೌಂಡರಿ, ಸಿಕ್ಸರ್, ಸೆಂಚುರಿ, ಹ್ಯಾಟ್ರಿಕ್ ಕೆಲವು ಹೀಗೆಯೇ ಬಳಕೆಯಾದರೆ ಇನ್ನೂ ಕೆಲವು ಕನ್ನಡದ ಸಂವಾದಿ ಪದಗಳ ಮೂಲಕ ಬಳಕೆಯಾಗುತ್ತವೆ. ಉದಾ. ಶತಕ, ಅರ್ಧಶತಕ, ದ್ವಿಶತಕ ಇತ್ಯಾದಿ.

೪.೬ ನುಡಿಗಟ್ಟುಗಳ ಬಳಕೆ ಮತ್ತು ಪ್ರಯೋಗ

ನುಡಿಗಟ್ಟುಗಳು ಎಂದರೆ ಒಂದು ಭಾಷೆಯಲ್ಲಿ ಈಗಾಗಲೇ ಗುರುತಿಸಿರುವ ಒಂದು ಪದಗುಚ್ಛ. ವಿಶೇಷ ಅರ್ಥವನ್ನು ನೀಡುವಂತಹ ಪದ ಸಮೂಹಗಳಿಗೆ ನುಡಿಗಟ್ಟುಗಳೆಂದು ಕರೆಯುತ್ತಾರೆ. ಕನ್ನಡ ಭಾಷೆಯಲ್ಲಿ ಇಂತಹ ನುಡಿಗಟ್ಟುಗಳು ಹೇರಳವಾಗಿ ಕಂಡುಬರುತ್ತವೆ. ಭಾಷೆಯಲ್ಲಿ ಒಂದು ಸಂದರ್ಭದ ವಿಶೇಷ ಅರ್ಥ ಹಾಗೂ ಗೂಡಾರ್ಥಗಳನ್ನು ಹೊಂದಿರುವಂತವುಗಳೇ ನುಡಿಗಟ್ಟುಗಳು.

ಕ್ರೀಡಾಪುಟದ ಭಾಷಾ ಪ್ರಯೋಗದಲ್ಲಿ ಕನ್ನಡ ಭಾಷೆಯಲ್ಲಿ ಈಗಾಗಲೇ ಬಳಕೆಯಲ್ಲಿ ಇರುವಂತಹ ನುಡಿಗಟ್ಟುಗಳು ಬಳಕೆಯಾಗುವುದನ್ನು ಗುರುತಿಸಬಹುದು. ನುಡಿಗಟ್ಟುಗಳು ಕ್ರೀಡಾ ಪುಟದಲ್ಲಿ ಒಂದು ವಿಶೇಷ ಸಂದರ್ಭದಲ್ಲಿ ಕಾಣಿಸಿಕೊಳ್ಳುತ್ತವೆ. ಆಟಗಳ ಸುದ್ದಿಗಳನ್ನು ವೈಭವೀಕರಿಸುವಲ್ಲಿ ನುಡಿಗಟ್ಟುಗಳ ಬಳಕೆ ಆಗಿರುವುದನ್ನು ಗುರುತಿಸಬಹುದು.

ಒಂದು ಭಾಷೆಯನ್ನು ಸುಂದರ, ಆಕರ್ಷಕ ರೀತಿಯಲ್ಲಿ ಬಳಸುವಲ್ಲಿ ನುಡಿಗಟ್ಟುಗಳು ಬೇಕಾಗುತ್ತವೆ. ಕ್ರೀಡಾಪುಟದ ಭಾಷೆಯಲ್ಲಿ ಸಹ ಇಂದು ಕನ್ನಡ ಭಾಷೆಯ ಬಳಕೆಯಲ್ಲಿ ಇದ್ದಂತಹ ಅನೇಕ ವಿಶೇಷ ಅರ್ಥಗಳನ್ನು ಹೊಂದಿರುವ ನುಡಿಗಟ್ಟುಗಳನ್ನು ಸಮರ್ಥವಾಗಿ ಪ್ರಯೋಗಿಸುತ್ತಿದೆ. ಉದಾ. ಗಂಟು ಮೂಟೆ ಕಟ್ಟು, ತಲೆ ಕೆಳಗಾಗು ಇಂತಹ ನುಡಿಗಟ್ಟುಗಳು ಒಂದು ವಿಶೇಷ ಅರ್ಥವನ್ನು ಹೊಂದಿವೆ. 'ಗಂಟು ಮೂಟೆ ಕಟ್ಟು' ಎನ್ನುವ ಪದಗುಚ್ಛದಲ್ಲಿ 'ಹೊರಡಲಿಕ್ಕೆ ಸಿದ್ದವಾಗು', 'ನಿನ್ನ ದಾರಿ ಹಿಡಿದು ನಡಿ' ಎಂಬಂತಹ ವಿಶೇಷ ಅರ್ಥವನ್ನು ಹೊಂದಿದೆ. ಆಟಗಳಲ್ಲಿ ಸೋಲನ್ನು ಕಂಡಾಗ, ಆ ಆಟಗಾರರ ತಂಡಕ್ಕೆ ಇಲ್ಲವೇ ಆಟಗಾರನಿಗೆ 'ನಿನ್ನ ದಾರಿ ನೀನು ಹಿಡಿದು ಹೋಗು' ಅಥವಾ 'ಹೋಗಲಿಕ್ಕೆ ಸಿದ್ದನಾಗು' ಎಂದು ಹೇಳುವ ಬದಲಿಗೆ 'ಗಂಟುಮೂಟೆ ಕಟ್ಟು' ಎಂತಹ ನುಡಿಗಟ್ಟುಗಳನ್ನು ಬಳಸಲಾಗುತ್ತದೆ.

ಒಂದು ಭಾಷೆಯಲ್ಲಿ ವಿಶೇಷ ಅರ್ಥಗಳನ್ನು ಹೊಂದಿರುವ ಇಂತಹ ನುಡಿಗಟ್ಟುಗಳು ಇಂದು ಕ್ರೀಡಾಪುಟದ ಭಾಷಾ ಬಳಕೆಯಲ್ಲೂ ಬಳಕೆಯಾಗುತ್ತಿದ್ದು, ಇಲ್ಲಿನ ಭಾಷಾ ಬಳಕೆಗೆ ಸಾಹಿತ್ಯಿಕ ಸಂಪರ್ಕವನ್ನು ಒದಗಿಸಿದೆ.

ಕೆಲವು ನುಡಿಗಟ್ಟುಗಳ ಬಳಕೆ ಕ್ರೀಡಾಪುಟದ ಸುದ್ದಿಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಅವುಗಳು ಈ ರೀತಿಯಾಗಿ ಪ್ರಯೋಗಗೊಳ್ಳುವುದನ್ನು ಗುರುತಿಸಬಹುದು.

ನುಚ್ಚುನೂರು : ಲಕ್ಷಣಾರ್ಥದಲ್ಲಿ 'ಹಾಳಾಗು', 'ಫಲಿಸದೇ ಹೋಗು' ಎಂಬ ಅರ್ಥದಲ್ಲಿ ಬಳಕೆಯಾಗಿದೆ.

ಉದಾ. ವಿಶ್ವಕಪ್ ಗೆಲ್ಲುವ ಕನಸು 'ನುಚ್ಚುನೂರು'.

ಚಳ್ಳೆ ಹಣ್ಣು ತಿನ್ನಿಸು : ಚಳ್ಳೆ ಹಣ್ಣು ತಿನ್ನಿಸು ಎನ್ನುವ ನುಡಿಗಟ್ಟು ಬಳಕೆಯಾಗಿದ್ದು 'ಚಳ್ಳೆಹಣ್ಣು ತಿನ್ನಿಸು' ಎನ್ನುವ ಪದ ಸಮೂಹಕ್ಕೆ 'ತಪ್ಪಿಸಿಕೋ' 'ಯುಕ್ತಿಯಿಂದ ಗೆಲ್ಲು' ಎಂಬ ವಿಶೇಷ ಅರ್ಥಗಳಿವೆ. ಆದರೆ ಇಲ್ಲಿ ಆಟವನ್ನು ಒಬ್ಬ ಆಟಗಾರ ಸಮರ್ಥವಾಗಿ ಆಡಿದಾಗ ಎದುರಾಳಿಗೆ ಚಳ್ಳೆಹಣ್ಣು ತಿನ್ನಿಸಿದ ಎಂಬಂತಹ ಅರ್ಥದಲ್ಲಿ ಬಳಕೆಯಾಗಿದೆ.

ಉದಾ. ತೆಂಡೂಲ್ಕರ್‌ರು ಪಾಕಿಸ್ತಾನದ ಬೌಲರ್‌ಗಳಿಗೆ 'ಚಳ್ಳೆಹಣ್ಣು ತಿನ್ನಿಸಿದರು'.

ಗೆಲ್ಲುವ ಕುದುರೆ : ಗೆಲ್ಲುವ ಕುದುರೆ ಎಂದರೆ ಯಾವಾಗಲೂ ಗೆಲುವನ್ನು ಸಾಧಿಸುವುದು ಎಂಬ ವಿಶೇಷ ಅರ್ಥವಿದೆ. ಆಟಗಳಲ್ಲಿಯೂ ಸಹ ವ್ಯಕ್ತಿ ಅಥವಾ ತಂಡ ಯಾವಾಗಲೂ ಗೆಲುವನ್ನು ಸಾಧಿಸುತ್ತಿದ್ದರೆ, 'ಗೆಲ್ಲುವ ಕುದುರೆ' ಎನ್ನುವ ವಿಶೇಷ ನುಡಿಗಟ್ಟು ಬಳಕೆಯಾಗಿದೆ.

ಉದಾ. ಆಸ್ಟ್ರೇಲಿಯಾ ವಿಶ್ವಕಪ್‌ನಲ್ಲಿ 'ಗೆಲ್ಲುವ ಕುದುರೆ'ಯಾಗಿದೆ.

ಗಾಯದ ಮೇಲೆ ಬರೆ : ಗಾಯದ ಮೇಲೆ ಬರೆ ಎಂದರೆ ಪುನಃ 'ನೋವಾಗು', 'ನೋವು ಮರುಕಳಿಸು' ಎಂಬ ವಿಶೇಷ ಅರ್ಥವಿದೆ. ಆದರೆ ಇಲ್ಲಿ ಒಂದು ತಂಡ ಅಥವಾ ಒಬ್ಬ ವ್ಯಕ್ತಿ ಪುನಃ ಪುನಃ ಸೋಲನ್ನು ಅನುಭವಿಸಿದಾಗ ಗಾಯದ ಮೇಲೆ ಬರೆ ಎಂಬ ನುಡಿಗಟ್ಟು ವಿಶೇಷವಾಗಿ ಬಳಕೆಯಾಗಿದೆ.

ಉದಾ. ಭಾರತ ಕ್ರಿಕೆಟ್ ತಂಡಕ್ಕೆ ಈ ಸೋಲು 'ಗಾಯದ ಮೇಲೆ ಬರೆ' ಎಳೆದಂತೆ.

ಬ್ರಹ್ಮಾಸ್ತ್ರ ಬಿಡು : ಬ್ರಹ್ಮಾಸ್ತ್ರ ಬಿಡು ಎಂಬ ಪದದ ವಿಶೇಷ ಅರ್ಥ. 'ಬಲಹೀನನ ಮೇಲೆ ಬಲ ಪ್ರಯೋಗಿಸು' ಎಂಬ ಅರ್ಥ ಹೊಂದಿದೆ. ಇಲ್ಲಿ ಒಂದು ಅಶಕ್ತ ತಂಡದ ವಿರುದ್ಧ ಶಕ್ತಿಶಾಲಿ ತಂಡದ ಆಟದ ವೈಖರಿಯನ್ನು ಹೇಳಲಿಕ್ಕೆ 'ಬ್ರಹ್ಮಾಸ್ತ್ರ ಬಿಡು' ಎಂಬ ವಿಶೇಷ ನುಡಿಗಟ್ಟನ್ನು ಬಳಸಲಾಗಿದೆ.

ಉದಾ. ಗುಬ್ಬಚ್ಚಿಗಳ ಮೇಲೆ 'ಬ್ರಹ್ಮಾಸ್ತ್ರ ಬಿಡುವ' ಆಸ್ಟ್ರೇಲಿಯಾ.

ಜಯಭೇರಿ ಬಾರಿಸು : ಜಯಭೇರಿ ಬಾರಿಸು ಎಂಬ ಪದ ಬಳಕೆಯಾಗಿದ್ದು, ಜಯಭೇರಿ ಬಾರಿಸು ಎಂದರೆ 'ಜಯ ಹೊಂದು' ಎಂಬ ವಿಶೇಷ ಅರ್ಥದಲ್ಲಿ 'ಜಯಭೇರಿ ಬಾರಿಸು' ಎಂಬ ನುಡಿಗಟ್ಟು ಬಳಕೆ ಯಾಗುತ್ತಿದ್ದು, ಇದೇ ರೀತಿಯಲ್ಲಿ ಯಾವುದಾದರು ತಂಡ, ವ್ಯಕ್ತಿ ಗೆಲುವನ್ನು ಸಾಧಿಸಿದಾಗ ಅದು ಅಂತಹ ಜಯವಾಗಿ ದ್ದಲ್ಲಿ 'ಜಯಭೇರಿ ಬಾರಿಸು' ಎಂಬ ವಿಶೇಷ ನುಡಿಗಟ್ಟು ಬಳಕೆಯಾಗಿದೆ.

ಉದಾ. ಆಸ್ಟ್ರೇಲಿಯಾದ ವಿರುದ್ಧ ಭಾರತ 'ಜಯಭೇರಿ ಬಾರಿಸಿತು'.

ತಲೆ ಕೆಳಗಾಗು : ಇಲ್ಲಿ ತಲೆ ಕೆಳಗಾಗು ಎಂದರೆ 'ವೈಫಲ್ಯ ಹೊಂದು' ಅಥವಾ 'ಕೈಗೂಡದೆ ಹೋಗು' ಎಂಬಂತಹ ಅರ್ಥಗಳಿವೆ. ಆದರೆ ಇಲ್ಲಿ ಒಂದು ತಂಡದ ಹಾಗೂ ವ್ಯಕ್ತಿಯ ಮೇಲೆ ಇಟ್ಟಂತಹ ಭರವಸೆ ಕೈಗೂಡದೆ ಹೋದಾಗ 'ತಲೆ ಕೆಳಗಾಗು' ಎಂಬ ನುಡಿಗಟ್ಟು ವಿಶೇಷ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ. ೧. 'ತಲೆಕೆಳಗಾದ' ಭಾರತದ ಲೆಕ್ಕಾಚಾರ.

ಇಂತಹ ವಿಶೇಷ ನುಡಿಗಟ್ಟುಗಳ ಬಳಕೆ ಇಂದಿನ ಕ್ರೀಡಾಪುಟದ ಭಾಷಾ ಪ್ರಯೋಗದಲ್ಲಿ ಕಂಡುಬರುತ್ತವೆ. ನುಡಿಗಟ್ಟುಗಳು ಈಗಾಗಲೇ ಭಾಷೆಯಲ್ಲಿ ಬಳಕೆಯಲ್ಲಿದ್ದು ಕ್ರೀಡಾಪುಟದಲ್ಲೂ ಬಂದಿವೆ. ಈ ಮೇಲೆ ಪ್ರಯೋಗಿಸಿದ ನುಡಿಗಟ್ಟುಗಳಲ್ಲದೆ, ಇನ್ನೂ ಕೆಲವು ನುಡಿಗಟ್ಟುಗಳು ಹೀಗಿವೆ.

ಕೆಂಡಾಮಂಡಲವಾಗು

ಲಕ್ಷ್ಮಣರೇಖೆದಾಟು

ಕೂದಲೆಳೆಯ ಅಂತರದ ಜಯ

ದಂಡಯಾತ್ರೆ

ಮುಯ್ಯಿ ತೀರಿಸು

ಜಂಗಿ ಕುಸ್ತಿ

ರಾಮರಕ್ಷೆ

ಟೀಕಾಸ್ತ್ರ

ಚಿಂದಿ ಚಿತ್ರಾನ್ನ

ಮಾಡು ಇಲ್ಲವೆ ಮಡಿ

ಟೊಂಕ ಕಟ್ಟಿ ನಿಲ್ಲು

ದಿಂಡುರುಳು ಹಾಕು

ದಾಪುಗಾಲು ಇಡು

ತೆರೆಬೀಳು

ಕಬ್ಬಿಣದ ಕಡಲೆ

ವಿಜಯದ ಮೆಟ್ಟಿಲು

ಗಡಿದಾಟು

೪.೭ ಗಾದೆಮಾತುಗಳ ಬಳಕೆ ಮತ್ತು ಪ್ರಯೋಗ

ಗಾದೆಮಾತುಗಳು ಅನುಭವದ ಮಾತುಗಳು ಎನ್ನಲಾಗಿದೆ. ಮಾತಿನಲ್ಲಿ ಗಾದೆಗಳ ಪ್ರಯೋಗ ನಡೆದು ಮಾತಿಗೆ ಮೆರಗನ್ನು ನೀಡುವ, ಮಾತಿನ ಸನ್ನಿವೇಶಕ್ಕೆ ಅನುಗುಣವಾಗಿ ಒಂದು ವಿಷಯವನ್ನು ಸುಂದರವಾಗಿ ಬಳಸಿ ಹೇಳಲಿಕ್ಕೆ ಉಪಯೋಗಿಸುವ ವಾಕ್ಯಗಳೇ ಗಾದೆಗಳು.

ಕ್ರೀಡಾಪುಟದ ಭಾಷಾ ಬಳಕೆಯಲ್ಲಿಯೂ ಸಹ ಕನ್ನಡದ ಗಾದೆಮಾತುಗಳು ಬಳಕೆಯಾಗುತ್ತಿವೆ. ಈಗಾಗಲೇ ಬಳಕೆಯಲ್ಲಿ ಇರುವಂತಹ ಗಾದೆಗಳನ್ನು ಹಾಗೂ ಹೊಸ ಪ್ರಯೋಗದ ಗಾದೆಗಳನ್ನು ಮತ್ತು ಹಳೆಯ ಗಾದೆಮಾತುಗಳಿಗೆ ಹೊಸ ಪ್ರಯೋಗವನ್ನು ರೂಪಿಸಿ ಬಳಕೆಯಾಗುತ್ತಿವೆ. ಉದಾ. ಯಾವುದಾದರೂ ಒಂದು ಬಲಿಷ್ಠ ತಂಡ ಅಥವಾ ವ್ಯಕ್ತಿಗೆ ಜಯ ದಕ್ಕದೆ ಹೋದಾಗ 'ಅಂತೂ ಇಂತೂ ಕುಂತಿ ಮಕ್ಕಳಿಗೆ ಜಯವಿಲ್ಲ' ಎನ್ನುವಂತಹ ಗಾದೆಮಾತುಗಳು ಬಳಕೆಯಾಗಿರುವುದು ಗುರುತಿಸಬಹುದು.

ಹಾಗೆಯೇ ಗಾದೆಮಾತುಗಳ ಶೈಲಿಯಲ್ಲಿಯೇ ಹೊಸ ಗಾದೆಗಳನ್ನು ಹಳೆಯ ಗಾದೆಗಳ ಮಾದರಿಯಲ್ಲೆ ರಚಿಸಿರುವುದು ಉಂಟು. ಉದಾ. 'ಅಯ್ಯ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ಎಂಬುದನ್ನು 'ಗೆದ್ದರೆ ಸ್ವರ್ಗ, ಸೋತರೆ ನರಕ' ಎಂಬಂತೆ ಮಾಡಿರುವುದು ಗಮನಿಸುವ ಅಂಶವಾಗಿದೆ.

ಇಂತಹ ಗಾದೆಮಾತುಗಳ ಜೊತೆಗೆ ಕೆಲವೊಂದು ಆಕರ್ಷಕ ಅಂತ್ಯಪ್ರಾಸವಿರುವ, ಗಾದೆ ಮಾತುಗಳನ್ನೇ ಹೋಲುವಂತಹ ವಾಕ್ಯಗಳನ್ನು ಸಹ ಗುರುತಿಸಬಹುದು. ಇಂತಹ ಗಾದೆಮಾತುಗಳ ವಾಕ್ಯಗಳು, ಹಾಗೆಯೇ ಗಾದೆಮಾತುಗಳನ್ನು ಬದಲಾಯಿಸಿ ಹೇಳಿದಂತಹ ವಾಕ್ಯಗಳು ಹಾಗೂ ಹೊಸ ಗಾದೆಮಾತುಗಳ ಸೃಷ್ಟಿ, ಹೆಚ್ಚಾಗಿ ವರದಿಯ ತಲೆಬರಹಗಳಲ್ಲಿ ಕಂಡುಬರುತ್ತವೆ. ಹಾಗಾಗಿ ಅಂತಹ ತಲೆಬರಹಗಳು ಆಕರ್ಷಣೆಯನ್ನು ಉಂಟು ಮಾಡುತ್ತವೆ.

ಅಂತವುಗಳಲ್ಲಿ ಕೆಲವು ಗಾದೆ, ಗಾದೆಯ ಮಾದರಿಯಲ್ಲಿ ಹೊಸ ವಾಕ್ಯಗಳ ರಚನೆಯನ್ನು ಹೀಗೆ ಗುರುತಿಸಬಹುದು.

೧. 'ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ'.

೨. 'ಜಟ್ಟಿ ನೆಲಕಚ್ಚಿದರೂ ಮೀಸೆ ಮಣ್ಣಾಗಲಿಲ್ಲ'.

೩. 'ಬಡವನ ಕೋಪ ದವಡೆಯ ಮೇಲೆ' ಎಂಬಂತ ಪರಿಸ್ಥಿತಿ ಬರ್ಮುಡಾಗೆ.

೪. 'ಆಟಕ್ಕುಂಟು ಲೆಕ್ಕಕ್ಕಿಲ್ಲ'ದ ಆಟಗಾರರು.

ಹಾಗೆಯೇ ಗಾದೆಮಾತುಗಳಂತಹ ಮಾದರಿಯಲ್ಲಿ ಆಕರ್ಷಕ ಅಂತ್ಯಪ್ರಾಸ ಹೊಂದಿ ಬಳಕೆಯಾಗುವಂತ ವಾಕ್ಯಗಳು.

೧. ಬಲವಿದ್ದವನಿಗೆ ಭಯವಿಲ್ಲ.

೨. ಗೆದ್ದರೆ ಬೋನಸ್, ಆಡದಿದ್ದರೆ ನೋಲಾಸ್

೩. ಸೋಲಿನ ನೆರಳಲಿ ಜಯದ ಹುಡುಕಾಟ

೪. ಕೆರೆಬಿಯನ್ಸ್‌ನಿಂದ ಅರೆಬಿಯನ್ಸ್‌ನತ್ತ

೫. ವಿರಮಿಸಿದ ವೀರ..... ಬ್ರಿಯಾನಲಾರ

೬. ಫಸ್ಟ್ ಈಸ್ ಬೆಸ್ಟ್!

೭. ಸಿಂಹದ ಮೇಲೆ ಕಾಂಗರೂ ಸವಾರಿ

೮. ಗೆದ್ದರೆ ಸೂಪರ್, ಬಿದ್ದರೆ ಪಾಪರ್

೯. 'ಪಾಕ್‌ಗೆ ಇಲ್ಲದ ನಂಟು' ಇದು ಸೂಪರ್ ಎಂಟು!'

೧೦. ಚಾಪೆ ಕೆಳಗೆ ಜಾರಿದ ಚಾಪೆಲ್

೧೧. ಗುಬ್ಬಿ ವಿರುದ್ಧ ಅಬ್ಬರಿಸಿದ ಹೆಬ್ಬುಲಿ.

ಇಂತಹ ಆಕರ್ಷಕ ಭಾಷಾ ಪ್ರಯೋಗದ ಅಂತ್ಯಪ್ರಾಸವಿರುವ ಗಾದೆಮಾತುಗಳು ಹಾಗೆಯೆ ಗಾದೆಯ ಶೈಲಿಯಲ್ಲಿಯೇ ರಚಿಸಿರುವ ವಾಕ್ಯಗಳು ಇಂದಿನ ಕ್ರೀಡಾಪುಟದ ಭಾಷಾ ಬಳಕೆಯಲ್ಲಿ ಕಂಡುಬರುತ್ತಿದ್ದು, ಆ ಪುಟದ ಭಾಷಾ ಭಿನ್ನತೆಗೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು.

✣ ✣ ✣

ಅಧ್ಯಾಯ ೫

ಸಮಾರೋಪ

ಅಧ್ಯಾಯ ೫

ಸಮಾರೋಪ

ಭಾಷಾ ಬಳಕೆಯುಳ್ಳ ವಿವಿಧ ವಲಯಗಳಲ್ಲಿ ಪತ್ರಿಕಾರಂಗಕ್ಕೆ ಪ್ರಮುಖ ಸ್ಥಾನ. ಏಕೆಂದರೆ ಹೇಳಬೇಕಾದುದನ್ನು ಭಾಷೆಯ ಮೂಲಕ ಮಾತ್ರ ಇಲ್ಲಿ ಹೇಳಲು ಸಾಧ್ಯ. ದಿನಪತ್ರಿಕೆಗಳ ಭಾಷೆ ಶಿಷ್ಟ ಕನ್ನಡಕ್ಕೆ ಸಮೀಪವಾದರೂ ಅನೇಕ ವೈಶಿಷ್ಟ್ಯಗಳಿಂದ ಕೂಡಿದೆ. ಇಲ್ಲಿನ ಭಾಷಾ ಬಳಕೆ ವಿವಿಧ ವಸ್ತುವಿಷಯಗಳನ್ನು ಅವಲಂಬಿಸಿರುತ್ತದೆ. ಆಧುನಿಕ ವಿಷಯಗಳನ್ನು ಪರಿಚಯಿಸುವಾಗ ಭಾಷೆ ಆಧುನಿಕವಾಗಿ ಬಳಕೆಯಾಗುತ್ತದೆ. ಸಾಮಾನ್ಯ ವಿಷಯಗಳನ್ನು ಹೇಳುವಾಗ ಯಾರನ್ನು ಗಮನದಲ್ಲಿಟ್ಟುಕೊಂಡು ಬಳಕೆಯಾಗುತ್ತದೋ ಆ ಮಟ್ಟದ ಭಾಷೆ ಬಳಕೆಯಾಗಿರುತ್ತದೆ. ಹಾಗಾಗಿ ಪತ್ರಿಕೆಯ ಭಾಷಾ ಬಳಕೆಯಲ್ಲಿ ವೈವಿಧ್ಯವಿದೆ.

ದಿನಪತ್ರಿಕೆಯ ಭಾಷೆ ಸರಳವಾಗಿದ್ದು, ಚಿಕ್ಕ ವಾಕ್ಯಗಳ ರಚನೆಯನ್ನು ಹೊಂದಿದ್ದು ಕಂಡು ಬರುವ ಸಂಗತಿ. ನಿಜ ಏಕೆಂದರೆ ದಿನಪತ್ರಿಕೆಯ ವಿಷಯ ಸಾಮಾನ್ಯನಿಗೂ ಅರ್ಥವಾಗಬೇಕು ಎಂಬ ಉದ್ದೇಶವೂ ಇದೆ.

ಈ ಅಧ್ಯಯನದ ಮುಖ್ಯ ಉದ್ದೇಶ ಕ್ರೀಡಾ ವರದಿಯಲ್ಲಿ ಬಳಕೆ ಆಗುವಂತಹ ಕನ್ನಡ ಭಾಷೆಯ ವೈಶಿಷ್ಟ್ಯವನ್ನು ಇಲ್ಲಿ ಗುರುತಿಸುವುದಾಗಿದ್ದು, ವಿಶೇಷ ಭಾಷಿಕ ಲಕ್ಷಣಗಳು ಗೋಚರಿಸುತ್ತವೆ. ಈ ಅಧ್ಯಯನದ ವ್ಯಾಪ್ತಿಯು ಕ್ರೀಡಾ ಪುರವಣಿಯಲ್ಲಿ ಬಳಕೆಯಾಗುವಂತಹ ಭಾಷೆಯನ್ನು ಗುರುತಿಸುವುದಾಗಿದೆ.

ಆದರೆ ನನ್ನ ಸಂಶೋಧನೆ ಅದಕ್ಕಿಂತ ಭಿನ್ನವಾದ ನೆಲೆಯಲ್ಲಿ ನಡೆಸಲಾಗಿದೆ. ಕ್ರೀಡಾ ಸುದ್ದಿಯ ಭಾಷೆಯು ಭಾಷಾ ವೈವಿಧ್ಯತೆಯ ಅಂಶಗಳನ್ನು ಹೊಂದಿದೆ. ಕನ್ನಡ ಪದಗಳ ಬಳಕೆ ಹಾಗೂ ಇಂಗ್ಲಿಶ್ ಪದಗಳ ಬಳಕೆ ಸಮಾನವಾಗಿ ಬಳಕೆಯಾಗುತ್ತಿವೆ ಎಂಬ ಅಂಶ ವ್ಯಕ್ತವಾದರೂ, ಹೆಚ್ಚಿನ ಪದಗಳು ಇಂಗ್ಲಿಶ್ ಪದಗಳೇ. ಅವೂ ಕೂಡಾ ವ್ಯಂಜನಾಂತವಾಗಿಯೇ ಬಳಕೆಯಾಗುತ್ತಿರುವುದು ಕಂಡು ಬರುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಕ್ರೀಡಾ ಪುಟದಲ್ಲಿ ಬಳಕೆಯಾಗಿರುವ ಭಾಷೆಯ ವೈವಿಧ್ಯವನ್ನು ಗುರುತಿಸುತ್ತಾ ಇಂಗ್ಲಿಶ್ ಪದಗಳ ಬಳಕೆ ಬಹುತೇಕ ಆಟದ ಹೆಸರುಗಳಲ್ಲಿ ಹಾಗೂ ಆಟದ ಸಂಬಂಧಿ ಪದಗಳಲ್ಲಿ ಕಂಡು ಬಂದಿದೆ. ಇದಕ್ಕೆ ಕಾರಣ ಇವೆಲ್ಲ ಬಹುತೇಕ ದೇಶಿ ನೆಲೆಯದ್ದಾಗಿರದೆ ಬೇರೆಡೆಯಿಂದ ನಮಗೆ ಬಂದಿರುವುದು ಪಟ್ಟಿ ಮಾಡಲಾಗಿರುವ ಇಂತಹ ಪದಗಳ ಸಂಖ್ಯೆಯೇ ಸುಮಾರು ಪದಗಳನ್ನು ಸಂಗ್ರಹಿಸಿಕೊಡಲಾಗಿದೆ. ಇದರಿಂದ ಕ್ರೀಡಾ ವಲಯದ ಪದಕೋಶದ ಬಗೆಗೆ ಅಧ್ಯಯನ ಮಾಡುವವರಿಗೆ ಸಹಾಯ ಆಗಬಹುದು. ಹಾಗೆಯೇ ಆಟಗಳಿಗೆ ಸಂಬಂಧಿಸಿದ ಇಂಗ್ಲಿಶ್ ಪದಗಳು ಯಾವ ರೀತಿಯಾಗಿ ಭಾಷಾಂತರಗೊಂಡು ಕನ್ನಡ ಭಾಷೆಯಲ್ಲಿ ಬಳಕೆಯಾಗುತ್ತವೆ ಎಂಬುದನ್ನು ಕೆಲವು ಪದಗಳ ಉದಾಹರಣೆಗಳನ್ನು ನೀಡಿ ಚರ್ಚಿಸಲಾಗಿದೆ.

ಕ್ರೀಡಾ ವರದಿಯಲ್ಲಿ ಬಳಕೆಯಾಗುವಂತಹ ಸಂಕ್ಷಿಪ್ತ ಹೆಸರುಗಳು ಇಂದು ಇಲ್ಲಿ ವಿಶೇಷವಾಗಿ ಗೋಚರಿಸುತ್ತಿದ್ದು, ಅಲ್ಲಿನ ವ್ಯಕ್ತಿ, ದೇಶದ ಹೆಸರುಗಳನ್ನು ಸೂಚಿಸುವ ಸಮಯದಲ್ಲಿ ಒಂದು ವಿಶೇಷತೆಯನ್ನು ಗುರುತಿಸಲಾಗಿದೆ. ವ್ಯಕ್ತಿ, ದೇಶದ ಹೆಸರು ಈ ಭಾಗದಲ್ಲಿ ವಿಶೇಷವಾಗಿ ಬಳಕೆಯಾಗುವ ವೈವಿಧ್ಯತೆಯನ್ನು ಚರ್ಚಿಸಿ ಅಂತಹ ಕೆಲವು ಹೆಸರುಗಳ ಬಳಕೆಯ ಹಾಗೂ ಪ್ರಯೋಗದ ಉದಾಹರಣೆಯನ್ನು ನೀಡಲಾಗಿದೆ.

ಹಾಗೆಯೇ ಕ್ರಿಯಾಪದಗಳಿಂದ ಕ್ರೀಡಾ ವರದಿ ಒಂದು ವಿಶೇಷ ಭಾಷಾ ಬಳಕೆಯನ್ನು ಹೊಂದಿರುವುದು ಕಂಡು ಬರುತ್ತದೆ ಎಂದು ತಿಳಿಸಲಾಗಿದೆ. ಆಟಗಳಲ್ಲಿ ಬಳಕೆಯಾಗುವ ಕ್ರಿಯಾಪದಗಳೂ ಸಹಾ ವಿಶೇಷವಾಗಿ ಕಾಣಿಸಿಕೊಳ್ಳುತ್ತವೆ ಎಂಬುದನ್ನು ಉದಾಹರಣೆ ಸಹಿತ ನೀಡಲಾಗಿದೆ. ಇತರ ವಲಯದಲ್ಲಿ ಬಳಕೆಗೊಳ್ಳುವಂತ ಕ್ರಿಯಾ ಪದಗಳು ಇಲ್ಲಿ ವಿಶೇಷವಾದಂತಹ ರೀತಿಯಲ್ಲಿ ಬಳಕೆಯಾಗುತ್ತವೆ ಎಂಬುದನ್ನು ತಿಳಿಸಲಾಗಿದೆ.

ಕನ್ನಡ ಕ್ರಿಯಾಪದಗಳು ವಿಶೇಷ ರೀತಿಯಲ್ಲಿ ಅಂದರೆ ಕೆಲವೊಂದು ಸಮಯದಲ್ಲಿ ಇಂಗ್ಲಿಶ್ ಸಹಾಯಕ ಪದಗಳನ್ನು ಪಡೆದು ಬಳಕೆ ಹೊಂದಿವೆ. ಹಾಗೆ ಅವುಗಳ ಪ್ರಯೋಗದ ಮಾದರಿಯನ್ನು ನೀಡಲಾಗಿದ್ದು, ಅಂತಹ ಪದಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಕ್ರೀಡಾಪುಟದಲ್ಲಿ ಬಳಕೆಯಾಗುವ ಕ್ರಿಯಾಪದಗಳಲ್ಲಿ ಸಾಮಾನ್ಯ ಬಳಕೆಯ ಕ್ರಿಯಾಪದಗಳು, ವಿಭಿನ್ನ ಕ್ಷೇತ್ರಗಳಲ್ಲಿ ಬಳಕೆಯಾಗುವ ಕ್ರಿಯಾಪದಗಳು, ಇಂಗ್ಲಿಶ್ ಪದಗಳೊಡನೆ ಸಹಾಯಕವಾಗಿ ಬರುವ ಕ್ರಿಯಾಪದಗಳು, ಲಕ್ಷಾರ್ಥ ಸೂಚಿಸುವ ಕ್ರಿಯಾ ರಚನೆಗಳನ್ನು ಗುರುತಿಸಲಾಗಿದೆ.

ಗುಣವಾಚಕ ಪದಗಳ ಬಳಕೆಗಳು ಇಲ್ಲಿನ ಭಾಷೆಗೆ ಮೆರುಗನ್ನು ನೀಡುತ್ತದೆ. ಇಲ್ಲಿ ಬಳಕೆಯಾಗಿರುವ ಗುಣವಾಚಕಗಳು ಕೆಲವೊಂದು ಆಟದ ಶ್ರೇಷ್ಠತೆಯನ್ನು ಸೂಚಿಸಿದರೆ ಇನ್ನು ಕೆಲವು ಫಲಿತಾಂಶವನ್ನು ಸೂಚಿಸಲು ಬಳಕೆಯಾಗುತ್ತವೆ ಎಂಬುದನ್ನು ತೋರಿಸಲಾಗಿದೆ. ಇಂತಹ ಒಂದು ಪಟ್ಟಿಯನ್ನು ನೀಡಲಾಗಿದೆ.

ಇಲ್ಲಿ ಕನ್ನಡದ ಗುಣವಾಚಕಗಳ ಜೊತೆಗೆ ಇಂಗ್ಲಿಶ್ ಪದಗಳ ಬಳಕೆಯನ್ನು ಕಾಣಬಹುದು ಎಂಬುದನ್ನು ಹ್ಯಾಟ್ರಿಕ್ ಗೆಲುವು ಮಾದರಿಯ ಉದಾಹರಣೆಗಳು ಸ್ಪಷ್ಟಪಡಿಸುತ್ತವೆ ಎಂಬುದನ್ನು ಗುರುತಿಸಲಾಗಿದೆ.

ಸಂಖ್ಯಾವಾಚಕಗಳ ಬಳಕೆ ಇಲ್ಲಿ ವಿಶಿಷ್ಟವಾಗಿದೆ ಎಂಬುದನ್ನು ವಿವಿಧ ರೀತಿಯ ಬಳಕೆಯ ಮಾದರಿಗಳ ಮೂಲಕ ಕಂಡುಕೊಳ್ಳಲಾಗಿದೆ. ಇಲ್ಲಿ ಅಂಕಿಸಂಖ್ಯೆಗಳ ಬಳಕೆ ಮುಖ್ಯವಾಗಿದ್ದು, ಪ್ರಮುಖ ಸಂಖ್ಯಾವಾಚಿಯ ಪ್ರಯೋಗದ ಮಾದರಿಗಳನ್ನು ಗುರುತಿಸಲಾಗಿದೆ. ನಾಲ್ಕು ಪ್ರಕಾರದ ಸಂಖ್ಯಾವಾಚಿಗಳ ಬಳಕೆಯನ್ನು ಇಲ್ಲಿ ಗುರುತಿಸಲಾಗಿದೆ. ಇಲ್ಲಿ ಸಂಖ್ಯೆಗಳು, ಅಂಕಿಗಳು ಮತ್ತು ಅಕ್ಷರಗಳ ರೂಪದಲ್ಲಿ ಬಳಕೆಯಾಗುತ್ತಿವೆ ಎಂಬುದನ್ನು ದಾಖಲಿಸಲಾಗಿದೆ.

ಇಲ್ಲಿನ ಭಾಷಾ ಬಳಕೆಯಲ್ಲಿ ನುಡಿಗಟ್ಟುಗಳೂ ಸಹ ಒಂದು ವಿಶೇಷ ರೀತಿಯ ಬಳಕೆಯನ್ನು ಹೊಂದಿ ಮೆರಗನ್ನು ನೀಡುತ್ತಿವೆ ಎಂಬುದನ್ನು ಗಮನಿಸಲಾಗಿದೆ. ನುಡಿಗಟ್ಟುಗಳು ಆ ಭಾಷಾ ವಿಧಾನಕ್ಕೆ ಕಾರಣವಾಗಿದ್ದು. ಅಂತಹ ನುಡಿಗಟ್ಟುಗಳನ್ನು ಪ್ರಯೋಗದೊಂದಿಗೆ ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ಹಾಗೆಯೇ ಗಾದೆಮಾತುಗಳ ಬಳಕೆಯಿಂದ ಅಲ್ಲಿನ ಭಾಷೆಗೆ ಸಾಹಿತ್ಯಿಕ ಸೌಂದರ್ಯವು ಒದಗುತ್ತಿದೆ ಎಂಬುದನ್ನು ತಿಳಿಸಿ ಅಲ್ಲಿನ ಹೊಸ ಗಾದೆಗಳ ರಚನೆಯನ್ನು ಕುರಿತು

ಕೆಲವು ಉದಾಹರಣೆಗಳನ್ನು ನೀಡಲಾಗಿದೆ. ಇಂತಹ ಕಾರಣಗಳಿಂದ ಆ ಭಾಷೆಯು ಆಕರ್ಷಣೆಗೆ ಕಾರಣವಾಗಿದೆ ಎಂಬ ಸಂಗತಿಯನ್ನು ತಿಳಿಸಲಾಗಿದೆ.

ವಿವಿಧ ಭಾಷಿಕ ನೆಲೆಗಳಲ್ಲಿ ಕ್ರೀಡಾ ವರದಿಯ ಭಾಷಾ ಬಳಕೆ ಹಾಗೂ ಪ್ರಯೋಗವನ್ನು ಕುರಿತು ಅಧ್ಯಯನ ನಡೆಸಲಾಗಿದ್ದು, ಕನ್ನಡ ಭಾಷೆಯ ಬಳಕೆ, ವಿಧಾನ, ಸ್ವರೂಪದ ದೃಷ್ಟಿಯಿಂದ ಇಲ್ಲಿನ ಭಾಷಾ ಬಳಕೆ ಪತ್ರಿಕೆಗಳ ಇತರ ಭಾಗದಲ್ಲಿ ಬಳಕೆಯಾಗುವ ಭಾಷೆಗಿಂತ ಭಿನ್ನ ಎಂಬುದನ್ನು ಗುರುತಿಸಲಾಗಿದೆ. ಇಲ್ಲಿ ಕೇವಲ ದಿನಪತ್ರಿಕೆಗಳನ್ನು ಮಾತ್ರ ಗಮನಿಸಲಾಗಿದ್ದು, ಕ್ರೀಡಾಲೋಕಕ್ಕೆ ಮೀಸಲಾದ ಇತರ ಪತ್ರಿಕೆಗಳ ಅಧ್ಯಯನ ಇನ್ನೂ ಹೆಚ್ಚಿನ ಮಾಹಿತಿಯನ್ನು ನೀಡಬಹುದು ಎಂಬುದು ನನ್ನ ಅನಿಸಿಕೆಯಾಗಿದೆ.

✤ ✤ ✤

ಅನುಬಂಧ

ಪರಾಮರ್ಶನ ಗ್ರಂಥಗಳು

ಸಂಶೋಧನಾ ಆಕರಗಳು

ಅನುಬಂಧ

ಪರಾಮರ್ಶನ ಗ್ರಂಥಗಳು

೧. ಅಂಗಡಿ ಎಸ್.ಎಸ್., (ಸಂ.), ೧೯೯೬, ಭಾಷಾ ಕ್ಷೇತ್ರಕಾರ್ಯ, ಸಮಾಜ ಪುಸ್ತಕಾಲಯ, ಧಾರವಾಡ.

೨. ಅಶೋಕ ಕುಮಾರ ರಂಜೇರೆ (ಸಂ.), ೨೦೦೦, ವಿವಿಧ ವೃತ್ತಿಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಇಕ್ಬಾಲ್ ಅಹಮದ್ ಕೆ.ಆರ್., (ಲೇ.), ೨೦೦೩, ಪತ್ರಿಕೋದ್ಯಮದ ಮೂಲತತ್ವಗಳು, ಪ್ರಿಯದರ್ಶಿನಿ ಸಾಹಿತ್ಯ ಪ್ರಕಾಶನ, ಬೆಂಗಳೂರು.

೪. ಉಮಾಪತಿ ಕೆ.ಎಸ್., (ಸಂ.), ೧೯೯೯, ಏನು? ಎಲ್ಲಿ?, ರಂಜನಾ ಪ್ರಕಾಶನ, ಬೆಂಗಳೂರು.

೫. ಕೃಷ್ಣಮೂರ್ತಿ ನಾಡಿಗ (ಸಂ.), ೧೯೬೯, ಭಾರತೀಯ ಪತ್ರಿಕೋದ್ಯಮ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೬. ಕೃಷ್ಣಮೂರ್ತಿ ವೈ.ಎನ್., (ಸಂ.), ೧೯೮೫, ಇದು ಸುದ್ದಿ, ಇದು ಸುದ್ದಿ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೭. ಕಾಮತ್ ಎಂ.ವಿ., (ಲೇ.), ೨೦೦೧, ವೃತ್ತಿ ಪತ್ರಿಕೋದ್ಯಮ, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು.

೮. ಗುಂಡಪ್ಪ ಡಿ.ವಿ., (ಸಂ.), ೧೯೨೮, ವೃತ್ತಪತ್ರಿಕೆ, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು.

೯. ಗೋಪಾಲಕೃಷ್ಣ ಹೆಗಡೆ (ಸಂ.), ೨೦೦೪, **ಕ್ರೀಡಾ ಪತ್ರಿಕೋದ್ಯಮ**, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.

೧೦. ಚಂದ್ರಶೇಖರ ಬಿ.ಎಸ್. (ಲೇ.), ೨೦೦೩, **ಸಂವಹನ ಮಾಧ್ಯಮಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧. ಚಲಪತಿರಾವ್ ಎಂ., (ಅನು.), ೧೯೯೪, **ಪತ್ರಿಕೋದ್ಯಮ**, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಹೊಸದೆಹಲಿ.

೧೨. ದೇವೇಂದ್ರಕುಮಾರ ಹಕಾರಿ (ಸಂ.), ೧೯೮೫, **ವೃತ್ತಪತ್ರಿಕೆ**, ವರದಿ ಲೇಖನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೩. ನಾಗರಾಜರಾವ್ ವಿ. (ಪ್ರ.ಸಂ.), ೨೦೦೪, **ಮಾಧ್ಯಮ ಪಾರಿಭಾಷಿಕ**, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.

೧೪. ನಾರಾಯಣ ಕೆ.ವಿ. (ಸಂ.), ೧೯೯೯, **ಕನ್ನಡ ಭಾಷಾಭಿವೃದ್ಧಿ ಸಾಧನೆ ಮತ್ತು ಮುನ್ನೋಟ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ನಾರಾಯಣ ಕೆ.ವಿ. (ಸಂ.), ೧೯೯೭, ದಿನ ದಿನ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ನಾಯಕ ಡಿ.ಬಿ. (ಲೇ.), ೨೦೦೩, **ಸಮೂಹ ಮಾಧ್ಯಮಗಳು ಮತ್ತು ಸಮಾಜ**, ಬಂಜಾರು ಪ್ರಕಾಶನ, ಗುಲಬರ್ಗಾ.

೧೭. ನಿರಂಜನಾ ವಾನಳ್ಳಿ (ಸಂ.), ೧೯೯೨, **ಸುದ್ದಿಯಷ್ಟೇ ಅಲ್ಲ! ನುಡಿ ಚಿತ್ರಕಲೆಗೊಂದು ದಿಕ್ಸೂಚಿ**, ಭಾಸ್ಕರ ಪ್ರಕಾಶನ, ಬೆಂಗಳೂರು.

೧೮. ಪದ್ಮರಾಜ್ ದಂಡಾವತಿ (ಸಂ.), ೨೦೦೧, **ಪತ್ರಿಕಾ ಭಾಷೆ**, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.

೧೯. ಪದ್ಮರಾಜ್ ದಂಡಾವತಿ (ಸಂ.), ೨೦೦೪, **ರಿಪೋರ್ಟಿಂಗ್**, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.

೨೦. ಪೂರ್ಣಿಮಾ ಟಿ.ಸಿ. (ಸಂ.), ೨೦೦೩, **ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೧. ಮಹಾದೇವಯ್ಯ ಪಿ. (ಸಂ.), ೨೦೦೬, **ದಿನ ದಿನ ೩**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಮಹೇಶ್‌ಸುರ್ವೆ (ಸಂ.), ೨೦೦೦, **ಪತ್ರಕರ್ತರ ಕೈಪಿಡಿ**, ರುಕ್ಮಿಣಿ ಪ್ರಕಾಶನ, ಬೆಂಗಳೂರು.

೨೩. ರಾಜಶೇಖರ ಜೆ.ಎಂ. (ಸಂ.), ೨೦೦೪, **ಪತ್ರಕರ್ತ ಪತ್ರಿಕೋದ್ಯಮ**, ಶಾರದಾ ಸಾಹಿತ್ಯ ಪ್ರಕಾಶನ, ಚೌಡಯ್ಯದಾನಪುರ.

೨೪. ವಿಶ್ವೇಶ್ವರ ಭಟ್ (ಸಂ.), ೨೦೦೧, **ತಲೆಬರಹ**, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು.

೨೫. ವೆಂಕಟರಮಣಯ್ಯ ಟಿ.ಬಿ. (ಸಂ.), ೧೯೮೮, **ಪತ್ರಿಕೋದ್ಯಮ ವಾಙ್ಮಯ ಸೂಚಿ**, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು.

೨೬. ಶಂಕರಭಟ್ ಡಿ.ಎನ್. (ಸಂ.), ೧೯೯೯, **ಕನ್ನಡ ಪದಗಳ ಒಳರಚನೆ**, ಭಾಷಾ ಪ್ರಕಾಶನ, ಮೈಸೂರು.

೨೭. ಶ್ರೀಕರ ಬಂಡಾರ್ಕರ ಎಲ್. (ಅನು.), ೧೯೮೮, **ಆಧುನಿಕ ಭಾರತದಲ್ಲಿ ಪತ್ರಿಕೋದ್ಯಮ**, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೮. ಸಾಂಬಮೂರ್ತಿ (ಸಂ.), ೨೦೦೧, **ದಿನ ದಿನ ೨**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯, ಸಾಂಬಮೂರ್ತಿ, ೨೦೦೦, **ನೇಕಾರ ವೃತ್ತಿಪದಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

೩೦. ಹಾವನೂರು ಶ್ರೀನಿವಾಸ (ಸಂ.), ೨೦೦೪, **ಕನ್ನಡ ಪತ್ರಿಕಾ ಸೂಚಿ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಸಂಶೋಧನಾ ಪ್ರಬಂಧಗಳು

೧. ಓಂಪ್ರಕಾಶ ನಾಯಕ, *ಬಳ್ಳಾರಿ ವ್ಯವಹಾರಿಕ ಕನ್ನಡದ ಉಚ್ಚಾರಣೆ ಮತ್ತು ಧ್ವನಿ ನಿಯಮಗಳು*, ಅಪ್ರಕಟಿತ ಎಂ.ಫಿಲ್.ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೦೨.

೨. ದುಬೆ ವಿನೋದ್, *ನ್ಯೂಸ್ ಪೇಪರ್ ಇಂಗ್ಲೀಶ್ ಇನ್ ಇಂಡಿಯಾ*, ಬಹ್ರಿ ಪಬ್ಲಿಕೇಶನ್, ನವದೆಹಲಿ - ೧೯೮೯.

೩. ಮಂಜುಳಾ ಬಿ.ಎಸ್., *ದೂರದರ್ಶನ ಜಾಹಿರಾತುಗಳು ಒಂದು ಸಾಂಸ್ಕೃತಿಕ ಅಧ್ಯಯನ*, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೧೯೯೫.

೪. ಮಣಿಯನ್ ಟಿ., *ದಿ ಲಾಂಗ್ವೇಜ್ ಆಫ್ ತಮಿಳು ಡೈಲೀಸ್*, ಅಪ್ರಕಟಿತ ಮಹಾಪ್ರಬಂಧ, ಮದ್ರಾಸು ವಿಶ್ವವಿದ್ಯಾಲಯ, ಮದ್ರಾಸ್ - ೧೯೭೯.

೫. ಲೀಲಾವತಿ ಎಂ.ಎನ್., *ಲಾಂಗ್ವೇಜ್ ಆಫ್ ಹೆಡ್‌ಲೈನ್ಸ್ ಇನ್ ಕನ್ನಡ ಡೈಲೀಸ್*, ಅಪ್ರಕಟಿತ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು - ೧೯೯೬.

ಸಂಶೋಧನಾ ಆಕರಗಳು

೧. ಪ್ರಜಾವಾಣಿ ದಿನಪತ್ರಿಕೆಗಳು

೨. ಕನ್ನಡ ಪ್ರಭ ದಿನಪತ್ರಿಕೆಗಳು

೩. ಸಂಯುಕ್ತ ಕರ್ನಾಟಕ ದಿನಪತ್ರಿಕೆಗಳು

೪. ಉದಯವಾಣಿ ದಿನಪತ್ರಿಕೆಗಳು

೫. ವಿಜಯ ಕರ್ನಾಟಕ ದಿನಪತ್ರಿಕೆಗಳು

❖ ❖ ❖